Summary : On Wednesday, the 8th day of the bright half of Mārgaśira, Śrīmukha *saṁvatsara*, corresponding to 1st December, 1813, Krisṇarāja Oḍeyar issued *nirūpas* to *āmīls* and *killedārs*. Accordingly, they were asked to give a warm reception and provide good accommodation to the Śṛiṅgēri *Swāmiji*, at their respective places, during the *Swāmiji's* tour to Vṛidhagaṅga. For one day, the government provided *bhikṣa* to the retinue of the *Guru*.

155

P. 1
L.

1. ಶ್ರೀಮತ್ಪರಮಹಂಸ ಪರ್‍ರಿವ್ರಾಜಕಾಚಾರ್ಯವರ್ಯ ಪದವಾ
2. ಕ್ಯಪ್ರಮಾಣ ಪಾರಾವಾರ ಪಾರೀಣ ಯಮನಿಯಮಾಸನ ಪ್ರಾಣಾಯಾಮ

Scanned by CamScanner

3. ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೊಗಾನುಷ್ಠಾನ ನಿಷ್ಠ
ತಪಶ್ಚಕ್ರ
4. ವರ್ತ್ಯನಾದ್ಯವಿಛಿಂನ ಗುರುಪ್ರಪರಂಪರಾಪ್ರಾಪ್ತ ಷಡ್ದರ್ಶನ
ಸ್ಥಾಪನಾಚಾರ್ಯ
5. ವ್ಯಾಖ್ಯಾನಸಿಂಹ್ವಾಸನಾಧೀಶ್ವರ ಸಕಲ ನಿಗಮಾಗಮ ಸಾರಹೃದಯ
ಸಾಂಖ್ಯ
6. ತ್ರಯ ಪ್ರತ್ತಿಪಾದಕ ವೈದಿಕಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರಾದಿ
ರಾ
7. ಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ನಾಟಕ ಸಿಂಹ್ವಾಸನ ಪ್ರತ್ತಿಷ್ಠಾ
8. ಪನಾಚಾರ್ಯ ಶ್ರೀಮದ್ರಾಜಾಧಿರಾಜಗುರುಪ್ರ ಭೂಮಂಡ
9. ಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ ತ್ತುಂಗಭದ್ರಾತೀರವಾಸ ಶ್ರೀ
10. ಮದ್ವಿದ್ಯಾಶಂಕರ ಪಾದಪದ್ಮಾರಾಧಕ ಶ್ರೀಮದಭಿನವ ನರಸಿಹ್ವ ಭಾ
11. ರತ್ತೀ ಸ್ವಾಮಿ ಗುರುಪ್ರ ಕಮಲ ಸಂಜಾತ ಶ್ರೀ ಶೃಂಗೇರೀ ಶ್ರೀ ಸಚಿದಾನಂದ
ಸ್ವಾಮಿ
12. ಗಳವರ ಚರಣಸಂನಿಧಾನಂಗಳಿಗೆ

P. 2

L.

1. ಶ್ರೀಮದ್ರಾಜಾಧಿರಾಜ ಪರಮೆಶ್ವರರ್ಪ್ರಾಧ ಪ್ರತ್ತಾಪಾಪ್ರತ್ತಿಮ ವೀರನರಪತ್ತಿ
ಬಿರುಪ್ರದಂತೆಂಬರ ಗಂಡ ಲೊ
2. ಕೈಕ ವೀರ ಯದುಕುಲ ಪಯಃ ಪಾರಾವಾರ ಕಳಾನಿಧಿ ಶಂಖಚಕ್ರಾಂಕುಶ ಕುಠಾರ
ಶರಭ ಗಂಡಭೆರ್ರುಂಡ ಧರಣೀವರಾಹ ಮಕರ ಮ
3. ತ್ಸ್ಯ ಹನುಮದ್ಗರುಪ್ರಡ ಕಂಠೀರವಾದ್ಯನೆಕ ಬಿರುಪ್ರದಾಂಕಿತರಾದ ಮಹಿಶೂರುಪ್ರ
ಕೃಷ್ಣರಾಜ ವಡಯರವರುಪ್ರ ತ್ರಿಸಂಧ್ಯಾ

P. 3

L.

1. ಕಾಲದಲು ಸಾಷ್ಟಾಂಗ್ಗ ಪ್ರಣಾಮಪೂರ್ವಕ ಬಿಂನಹಾ ಶ್ರೀಮುಖ ಸಂವತ್ಸರದ
ಫಾಲ್ಗುಣ ಬ ೧೦ ಬುಧವಾರದವರ್ರಿಗೆ ನಾವು ಕ್ಷೆ
2. ಮದಲ್ಲಿ ಯಿಧೆವೆ ಸ್ವಾಮಿಗಳವರ ತಪಸ್ಸಾಂಬ್ರಾಜ್ಯ ವೈಭವಾತ್ತಿಶಯಗಳಿಗೆ
ಅನವರತವು ಶ್ರೀಮುಖವಂನ್ನು ಅಪಣೆ ಕೊಟು
3. ಕಳುಹಿಸ್ಸುವ ಹಾಗೆ ಮಾಡಿಸ್ತಕ್ಕದ್ದು ಸಾಂಪ್ರತ ಅನುಗ್ರಹ ಯಿಟು ಅಪಣೆ ಕೊಟು
ಕಳುಹಿಸ್ತ ಶ್ರೀಮುಖ ಬಂದ್ದು ತಲಪಿ

4. ದ್ದರ್ರಿಂದ್ದಾ ಶಿರಸಾವಹಿಶಿ ಕೃತಾರ್ಥವಾದೆವು ಶ್ರೀ ಶಾರದಾ ಅಂಮ್ಮನವರ ರಥ
ಅರಮನೆಯಿಂದ್ದಾ ಕಟ್ಟಿಶಿಧವಾದಂತ್ಥಾದ್ದು ಯ
5. ಗ್ನೆಶ್ವರ ಪ್ರೀತ್ತಿಯಾಗಿಯಿಧೆಂದ್ದು ಅಪಣೆ ಕೊಟ ಬಗ್ಗೆ ಪುನಹಾ ಹೊಸ ರಥವಂನ್ನು
ಕೊಪದ ತಾಲ್ಲುಕ್ಕ ಅಮಿಲನ ಕೈಯಿಂದ್ದೆಲೆ ಮುಟುವಳಿ
6. ಳಿ ಮುಟಿಶಿ ರಥ ಪೂರ್ವದ ಮೆರೆ ಶಾಶ್ವತವಾಗಿರುಪ್ರವಂತ್ತೆ ಶಿಧಾ ಮಾಡಿಶಿ ಕೊಡುವ
ರ್ರಿತ್ತಿಗೆ ಕೊಪದ ಅಮಲದಾರ ಮಂಜ್ಜೈಗೆ ಕಟ್ಲೆ ಮಾಡಿಶಿ ಕಳು
7. ಹಿಶಿ ಯಿಧೀತ್ತಾಗಿ ಅಮೆರೆಗೆ ರಥ ಶಿಧವಾಗಿ ದೆವರ ಶೆವೆಗೆ ಉಪಯುಕ್ತವಾದ
ವಿವರಕ್ಕು ಶ್ರೀಯವರ ತಪಸ್ಸಾಂಬ್ರಾಜ್ಯಾತ್ತಿಶ
8. ಯಂಗಳಿಗು ನಿರಂತರವು ಶ್ರೀಮುಖದ್ವಾರಾ ಅಪಣೆ ಕೊಟು ಕಳುಹಿಸುವ ಹಾಗೆ
ಮಾಡಿಸ್ತಕ್ಕದ್ದು

ಇತಿ ವಿಜ್ಞಾಪನಾ

Summary : A letter, dated Wednesday, the 10th day of the dark half of Fālguṇa, Śrīmukha *saṁvatsara*, from Krisṇarāja Oḍeyar to *Śrī* Sacchidānanda Bhāratī *Swāmīji*, the disciple of *Śrī* Abhinava Narasimha Bhāratī *Swāmīji* of Śṛiṅgēri. The king acknowledged the receipt of *śrīmukha* and informed the *Guru* that he had ordered the amīl of Koppa, to get prepared a *ratha* (car) for *Śrī* Śāradāmbā. He requested the *Swāmīji* to send *śrīmukha* regarding the said matter. The letter begins with the usual full titles of the Śṛiṅgēri *Jagadguru*.

156

L. ಶ್ರೀ

1. ಕೃಷ್ಣರಾಜ ವಡಯರವರು
2. ಭಾವ ಸಂವತ್ಸರದ ಜೆಷ್ಠ ಬ ೧೨ ಲ್ಲು ಶ್ರೀಮತು ॥ ॥ ನಗ
3. ರದ ಪವುಜದಾರ ಸರ್ವೊತ್ತಮ ರಾಯಗೆ ಬರಶಿ ಕಳುಹಿದ ನಿರೂಪಾ
4. ಅದಾಗಿ ಶ್ರಿಂಗೆರ್ರಿ ಶ್ರೀ ಸ್ವಾಮಿಗಳವರು । ಹರಕೆರ್ರೆಯಲ್ಲಿ ಚಾತ್ತು
5. ರ್ಮಾಸ್ಯ ಸಂಕಲ್ಪಕ್ಕೆ ನಿಂತ್ತು ಯಿರುವದಾಗಿ ಶೃತವಾದ್ದರ್ರಿಂದಾ
6. ಸಂಸ್ಥಾನ ದೆವರು ದೆವತ್ತಾರ್ಚನೆ ಸಹಾ । ಸದರ್ರಿ ಹರ್ರಕೆರ್ರೆಯಲ್ಲಿ ಶ್ರೀಯ
7. ವರು ಯಿರುವರ್ರಿಗು ಕಳ್ಳಕಾಕರ ವುಪದ್ರ ತಟದಂತ್ತೆ ಶ್ರೀಮಠದ–
8. ಖವಾಲ್ಲಿ ಚವುಕಿ ಯಿಟ್ಟು ಖಬರದಾರ್ರಿ ಮಾಡಿಸುತ್ತಾ ವಿಚಾರ್ರಿಶಿಕೊ
9. ಳ್ಳುವದು । ತಾರ್ರಿಕು ೧೫ ನೆ ಮಾಹೆ ಜೂನ್ ಸಂನ್ ೧೮೧೪ ನೆ ಯಿಸವಿ
10. ಖತ್ತು ತಿಂಮ್ಮಪಾ ಮುನಷಿ ಹಜೂರು । ಶ್ರೀಕೃಷ್ಣ

Summary : A letter, dated, 12th day of the dark half of Jyēṣṭha, Bhāva *saṁvatsara*, corresponding to 15th June, 1814, from Krişṇarāja Oḍeyar to Sarvōttamarāya, *foujdār* of Nagar. Since the Śṛiṅgēri *Swāmīji* was observing *Chāturmāsya* at Harkere, the king ordered the *foujdār* to make the *Swāmīji's* camp free from the attacks of thieves and brigands.

157

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರ್‍ರೀಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠಿತ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲವೇದಾರ್ಥಪ್ರಕಾಶಕ, ಸಾಂಖ್ಯತ್ರಯಪ್ರತಿಪಾದಕ, ಸಕಲ ನಿಗಮಾಗಮಸಾರಹೃದಯ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರಸ್ವತಂತ್ರಾದಿರಾಜಧಾನೀ ವಿದ್ಯಾನಗರಮಹಾರಾಜಧಾನೀ ಕರ್ಣಾಟಕಸಿಂಹಾಸನಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಗುರು, ಭೂಮಂಡಲಾಚಾರ್ಯ, ತುಂಗಭದ್ರಾತೀರವಾಸಿ, ಋಷ್ಯಶೃಂಗಪುರವರಾಧೀಶ್ವರ, ಶ್ರೀ ಶೃಂಗೇರಿ ವಿದ್ಯಾಶಂಕರಪಾದಪದ್ಮಾರಾಧಕ, ಶ್ರೀ ಶೃಂಗೇರಿ ಸಚ್ಚಿದಾನಂದಭಾರತೀ ಸ್ವಾಮಿನಾಂ ಕರಕಮಲಸಂಜಾತ, ಶ್ರೀ ಶೃಂಗೇರಿ ಅಭಿನವಸಚ್ಚಿದಾನಂದಭಾರತೀ ಸ್ವಾಮಿಗಳವರ ಸನ್ನಿಧಾನಂಗಳಿಗೆ ; ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾ ಪ್ರತಿಮವೀರ ನರಪತಿಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಳಾನಿಧಿ ಶಂಖ ಚಕ್ರ ಅಂಕುಶ ಕುಠಾರ ಮತ್ಸ್ಯ ಶರಭ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕಬಿರುದಾಂಕಿತ ಮಹೀಶೂರ ಕೃಷ್ಣರಾಜಒಡೆಯರವರು ಸಾಷ್ಟಾಂಗ ಪ್ರಣಾಮಪೂರ್ವಕ ವಿಜ್ಞಾಪನಾ :-

ಭಾವಸಂವತ್ಸರದ ಕಾರ್ತಿಕ ಶು. ೧೪ ಸ್ಥಿರವಾರದ ವರಿಗೆ ಕ್ಷೇಮದಲ್ಲಿದ್ದೇವೆ. ಸ್ವಾಮಿಗಳವರ ತಪಸ್ಸಾಮ್ರಾಜ್ಯ ವೈಭವಾತಿಶಯಗಳಿಗೆ ಅನವರತ ಶ್ರೀಮುಖವನ್ನು ಅಪ್ಪಣೆಕೊಟ್ಟು ಕಳುಹಿಸುವಂತೆ ಮಾಡಿಸಬೇಕು. ಈ ರೀತಿಯಲ್ಲಿ ಕರೀಘಟ್ಟದ ಬಳಿ ಮಣಿಕರ್ಣಿಕಾತೀರದಲ್ಲಿ ಕಟ್ಟಿಸುವ ಜ್ಞಾನಾನಂದೇಶ್ವರ ದೇವಸ್ಥಾನ, ಅಮ್ಮನವರು ಪ್ರಸನ್ನಪಾರ್ವತೀಯವರ ಪ್ರತಿಷ್ಠೆ ಮಾಡುವ ಪೀಠದ ಕೆಳಗೆ ಇಡತಕ್ಕ ಬಗ್ಗೆ ಶ್ರೀಚಕ್ರಯಂತ್ರವನ್ನು ಶಾಸ್ತ್ರೋಕ್ತವಾಗಿ ಪಂಚಲೋಹದ ತಗಡು ಒಂದುಮೊಳ ಇರುವಂಥಾದ್ದರಲ್ಲಿ ಶ್ರೀಮಠದ ವಿದ್ವಾಂಸರ ಕಡೆಯಿಂದ ಕೋಣವರ್ಣಾದಿಗಳಲ್ಲಿ ಲೇಶ ಹೆಚ್ಚುಕಡಿಮೆ ಆಗದಂತೆ ಕೋಣಗಳು, ಬೀಜಾಕ್ಷರದ ವರ್ಣಗಳು ಸಹ, ಬಾಳಬಂದಿನಲ್ಲಾಗಲಿ, ಕನ್ನಡ ಲಿಪಿಯಲ್ಲಿ ಆಗಲಿ, ಚನ್ನಾಗಿ ಬರೆಸಿ ಕಳುಹಿಸುವಂತೆ ಮಾಡಿಸಬೇಕು. ಈ ಶ್ರೀಚಕ್ರಯಂತ್ರ ಬರೆಯುವುದಕ್ಕೆ ಕೊಪ್ಪದ ತಾಲ್ಲೂಕು ಅಮಿಲ ಮಂಜಯ್ಯನಿಗೆ ಒಂದುಮೊಳ ಇರುವಂಥಾ ಪಂಚಲೋಹದ ತಗಡು ಶ್ರೀಮಠಕ್ಕೆ ಕಳುಹಿಸುವಂತೆ ನಿರೂಪ

ಅಪ್ಪಣೆಕೊಡಿಸಿ ಇಧೆ. ಅಮಿಲನ ಕಡೆಯಿಂದ ತರಿಸಿಕೊಂಡು ಚಕ್ರವನ್ನು ಶೀಘ್ರದಲ್ಲಿ ಕಳುಹಿಸುವಂತೆ ಮಾಡಿಸತಕ್ಕ ವಿವರಗಳನ್ನು ಚಿತ್ತಕ್ಕೆ ಸರಿತಹಾಗೆ ಮಾಡಿಸಬೇಕು.

Summary : A letter, dated Saturday, 14th day of the bright half of Kārtika, Bhāva *saṁvatsara*, from Krişṇarāja Oḍeyar to *Śrī* Abhinava Sacchidānanda Bhāratī, the disciple of *Śrī* Sacchidānanda Bhāratī *Swāmīji* of Śṛiṅgēri. The king informed the *Guru* that he had asked Manjayya, amil of Koppa, to send a plate of *panchalōha*, measuring one foot, to the Śṛiṅgēri *Maṭha* for preparing a *Śrīchakra yantra,* to be kept at the holy feet of Prasanna Pārvati Amma, in Jnānānandēśvara temple, on the bank of Maṇikarṇikā.

158

L.

1. ಕೃಷ್ಣರಾಜ ವಡಯರವರು
2. ಭಾವ ಸಂವತ್ಸರದ ಮಾರ್ಗಶಿರ ಬ ೨ ಬುಧವಾರದಲ್ಲು ಶ್ರೀಮತ್ತು
3. ॥ ॥ ವೆದಮೂರ್ತಿಗಳಾದ ವೆಂಕಟಾಚಲ ಭಟರ್‍ರಿಗೆ ಬರಶಿಕಳಿ
4. ಹಿಸ್ತ ನಿರೂಪ ಅದಾಗಿ ಶ್ರಿಂಗೆರ್‍ರಿ ಮಠದ ಶ್ರೀಮದಾಚಾರ್ಯ್ಯ ಸ್ವಾಮಿಗಳವ
5. ರು ಮಠದ ಯಜಮಾನತ್ವದ ವಿಚಾರಣೆ ನಿಮಗೆ ನೆಮಕಾ ಮಾಡಿ ಯಿರು
6. ವದಾಗಿ ಅರಮನೆ ಪುರೊಹಿತ ಲಿಂಗಾಭಟರು ಹಜೂರ ಶೃತಪಡಿಸಿ
7. ದ ಕಾರಣ ಅಪ್ಪಣೆ ಕೊಟ್ಟು ಇದ್ದೀತು ಈ ಪೀಠ ದೊಡ್ಡದು ಶ್ರೀಗಳ
8. ವರು ನೂತನರು ಜನರು ಕಾಲೊಚಿತವಾದ ಕಾರ್ಯ್ಯಸ್ತರು ಪದಾರ್ಥ ತುಂ
9. ಬಾ ಯಿರುವದಾಗಿ ಹೆಸರಾದ ಸ್ತಳವಾದ ಕಾರಣ ನಿವು ಅಲ್ಲಿನ ಯಜಮಾ
10. ನತ್ವ ವಹಿಶಿದ ಬಳಿಕ ಮಠದ ಪದಾರ್ಥ ಪೊಲಾಗದ ಹಾಗು ಜನರು ತಂಮತಂ
11. ಮ ನಿಬಂಧನೆ ಲಾಗಾಯಿತುಯಿಂದ ನಡದು ಬಂದದರಲ್ಲಿ ನಿಸ್ಪೃಹರಾಗಿ ಏ
12. ಕ ನಿಷ್ಠೆಯಿಂದ ಯಿರುವ ಹಾಗು ಪೀಠದ ಮಹಿಮೆ ಪ್ರಕಾಶವಾಗುವಂತ್ತೆ
13. ತಪೊಬಲ ವಿದ್ಯಾ ಪ್ರಕಾಶದಯಿಂದ ಭೂಮಂಡಲದಲ್ಲಿ ಯಿವರ ವೃತ್ತಾಂ
14. ತ ಪ್ರಶಿಧವಾಗಿ ಯಿರುವ ಹಾಗೆ ಮಾಡತಕ್ಕ ಬಾದ್ಯತ್ವ ಯೊಗ್ಯತೆ ಸಹ ವುಂ
15. ಟೆಂದು ನೆಮಿಶಿ ಯಿರುವ ವಿಚಾರಣೆಯಲ್ಲಿ ಪ್ರಕಾಶತ್ವ ವುಂಟು ಮಾಡಿಕೊ
16. ಳುವದು ತಾರ್‍ರಿಕು ೨೮ ನೆ ಮಾಹೆ ಡಿಸಂಬರ ಸನ್ ೧೮೧೪ ನೆ ಯಿಸವಿ ಖತ್ತ
17. ಪ್ರಸಂನ್ನೆಯ ಮುನಷಿ ಹುಜೂರು ಶ್ರೀ ಕೃಷ್ಣ

Summary : On Wednesday, the 2nd day of the dark half of Mārgaśira, Bhāva *saṁvatsara*, corresponding to 28th December, 1814, Krişṇarāja Oḍeyar wrote to Vēdamurthy

Veṅkaṭāchala Bhaṭṭa, reminding him the responsibility. The appointment of Veṅkaṭāchala Bhaṭṭa as the administrative head of the Śṛiṅgēri *Maṭha* was communicated to the king by Liṅgā Bhaṭṭa, the royal chaplain. The king wished Veṅkaṭāchala Bhaṭṭa to maintain the dignity and honour of the *ŚrīMaṭha*.

159

P. 1
L.

1. ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾ
2. ಣ ಪಾರಾವಾರ ಪಾರೀಣ ಯುಮನಿಯುಮಾಸನ ಪ್ರಾಣಾಯಾಮ ಪ್ರತ್ಯಾಹಾ
3. ರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೊಗಾನುಷ್ಠಾನ ನಿಷ್ಠ ತಪಶ್ಚಕ್ರವರ್ತ್ಯನಾದ್ಯ
4. ವಿಚ್ಛಿಂನ್ನ ಗುರುಪರಂಪರಾಪ್ರಾಪ್ತ ಷಡ್ದರ್ಶನ ಸ್ಥಾಪನಾಚಾರ್ಯ ವ್ಯಾಖ್ಯಾನ
5. ಸಿಂಹ್ವಾಸನಾಧೀಶ್ವರ ಸಕಲ ನಿಗಮಾಗಮ ಸಾರಹೃದಯ ಸಾಂಖ್ಯತ್ರಯ
6. ಪ್ರತಿಪಾದಕ ವೈದಿಕಮಾರ್ಗ ಪ್ರವರ್ತಕ ಸರ್ವತಂತ್ರಸ್ವತಂತ್ರಾದಿ ರಾಜಧಾನೀ
7. ವಿದ್ಯಾನಗರ ಮಹಾರಾಜಧಾನೀ ಕರ್ನಾಟಕ ಸಿಂಹ್ವಾಸನ ಪ್ರತಿಷ್ಠಾಪನಾಚಾ
8. ರ್ಯ ಶ್ರೀಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ ರೃಶ್ಯಶೃಂಗಪುರ
9. ವರಾಧೀಶ್ವರ ತುಂಗಭದ್ರಾತೀರವಾಸ ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾ
10. ಧಕ ಶ್ರೀಮತ್ಸಚ್ಚಿದಾನಂದ ಭಾರತೀ ಸ್ವಾಮಿ ಗುರುಕರಕಮಲ ಸಂಜಾತ ಶೃಂ
11. ಗೆರಿ ಶ್ರೀಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳವರ ಸಂನ್ನಿ
12. ಧಾನಕೆ ।

P. 2
L.

1. ಶ್ರೀಮದ್ರಾಜಾಧಿರಾಜ ರಾಜಪರಮೆಶ್ವರ ಪ್ರೌಢಪ್ರತಾಪಾಪ್ರತಿಮವೀರ ನರಪತಿ ಬಿರದಂ
2. ತೆಂಬರ ಗಂಡ ಲೊಕೈಕ ವೀರ ಯದುಕುಲ ಪಯಃ ಪಾರಾವಾರ ಕಳಾನಿಧಿ ಶಂಖ ಚಕ್ರ ಅಂಕು

3. ಶ ಕುಠಾರ ಮಕರ ಮತ್ಸ್ಯ ಶರಭ ಗಂಡಭೆರುಂಡ ಧರಣೀ ವರಾಹ ಹನುಮದ್ಗರುಡ ಕಂಠಿರವಾದ್ಯ
4. ನೆಕ ಬಿರುದಾಂಕಿತರಾದಂಥಾ ಮಹಿಶೂರ ಕೃಷ್ಣರಾಜ ವಡೆಯರವರು ತ್ರಿಕಾಲದಲ್ಲು ಮಾ
5. ಡುವ ಪ್ರಣಾಮ ಪೂರ್ವಕ ವಿಜ್ಞಾಪನಾ ಯುವ ಸಂವತ್ಸರದ ಆಷಾಢ ಶುದ್ಧ ೧೫ ವರ್‍ರಿಗೆ ಸ
6. ರ್ವರು ಸಹ ನಾವು ಕ್ಷೆಮದಲ್ಲಿ ಯಿದ್ದೆವೆ ಸ್ವಾಮಿಗಳವರ ತಪಃಸಾಮ್ರಾಜ್ಯಾತಿಶಯಗಳಿಗೆ ಅನ
7. ವರತವು ಅನುಗ್ರಹವೆರಶಿ ಶ್ರೀಮುಖವನ್ನು ಅಪ್ಪಣೆ ಕೊಟ್ಟು ಕಳುಹ್ಸಬೆಕು ಸಾಂಪ್ರತ

P. 3
L.

1. ಯಿಾಗ ಅರಮನೆಯಲ್ಲಿ ಯಿರುವ ಗ್ರಂಥಗಳ ಸರ್‍ರಿ ನೊಡತಕ್ಕ ಬಗ್ಯೆ ಕೆಲವು ಪುಸ್ತಕ ಆಗಬೆ
2. ಕಾದ ಕಾರಣ ಘಟ್ಟದ ಮೆಲೆ ಘಟದ ಕೆಳಗೆ ಯಿನ್ನು ಸುತ್ತಮುತ್ತಯಲ್ಲಿ ಯಿದ್ದಾಗ್ಯು ವಿಚಾರ್‍ರಿ
3. ಶಿ ಜ್ಯೊತಿಷ ವಿಷಯದಲ್ಲಿ ಕಸ್ಯಪ ಸಂಹಿತೆ ಪುಸ್ತಕ ವಂದು ವರಾಹ ಸಂಹಿತೆ ವಂದು ಗಾರ್ಗ್ಯ
4. ಸಂಹಿತೆ ವಂದು ಪರಾಶರ ಸಂಹಿತೆ ವಂದು ಜೈಮಿನಿ ಸೂತ್ರ ಯಂಟು ಅಧ್ಯಾಯದ ಪುಸ್ತಕ ವಂದು
5. ಭಾರ್ಗವಸೂತ್ರ ವಂದು ಸರ್ಗಸೂತ್ರ ವಂದು ಸರ್ಗಮನೊರಮೆ ವಂದು ಮದನರತ್ನ ವಂದು ಭಾ
6. – – ನಾಡಿ ಗ್ರಂಥ ವಂದು ಬೃಹಸ್ಪತಿ ನಾಡಿ ಗ್ರಂಥ ವಂದು ಯಿದರ ವ್ಯಾಖ್ಯಾನಗಳು ಯಿದು ಹೊರ
7. ತಾಗಿ ಯಿಂನ್ನು ಜ್ಯೊತಿಷ ವೈದ್ಯ ಧರ್ಮಶಾಸ್ತ್ರಗಳಲ್ಲಿ ಸಹ ಪ್ರಾಚೀನ ಆರ್ಷವಾಗಿ ಅಪೂರ್ವ ಗ್ರಂಥಉ
8. ಯಿದ್ದದೆಲ್ಲಾ ತರ್‍ರಿಶಿ ಯಿಾ ಬಗೆ ಪುಸ್ತಕಗಳನ್ನು ಅತಿ ಅಗತ್ಯವಾಗಿ ದಯವಿಟ್ಟು ಅಂಚೆಮೆಲೆ ಕ
9. ಳಹಸುವ ಹಾಗೆ ಮಾಡ್ಸತ್ಕದ್ದು ಪುಸ್ತಕಗಳು ಬಂದ ಬಳಿಕಾ ಯಿಲ್ಲಿ ಯಿರುವ ಗ್ರಂಥಗಳ ಸರ್‍ರಿ ನೊ
10. ಡಿ ಯಿಾ ಪುಸ್ತಕಗಳ ತಿರ್‍ರಿಗಿ ಕಳುಹಸುತ್ತಾ ಯಿದೆಯಾಗಿ ಯಿಾ ಪುಸ್ತಕಗಳ ಮಾತ್ರ ಕೆವಲ
11. ಅಗತ್ಯವಾಗಿ ಕಳುಹಸುವ ಹಾಗೆ ಮಾಡ್ಸಿತ್ಕ ವಿವರ್‍ರ ಪರಾಂಬರ್‍ರಿಶಿ ಸ್ವಾಮಿಗಳವರ ತಪಸ್ಸಾಮ್ರಾ

Scanned by CamScanner

12. ಜ್ಯಾತಿಶಯಗಳಿಗನವರತವು ಅನುಗ್ರಹವೆರಶಿ ಶ್ರೀಮುಖವನ್ನು ಅಪ್ಪಣೆಕೊಟ್ಟು ಕಳು
13. ಹಸುವ ಹಾಗೆ ಮಾಡ್ಸಿಬೆಕು ರುಜು ಶ್ರೀಕೃಷ್ಣ

Summary : A letter, dated 15th day of the bright half of Āṣāḍha, Yuva *saṁvatsara*, Krisṇarāja Oḍeyar sent a *binnavattaḷe* to *Śrī* Abhinava Sacchidānanda Bhāratī *Swāmīji*, the disciple of *Śrī* Sacchidānanda Bhāratī of Śṛiṅgēri, requesting him to find out and dispatch *Kaṣyapa-Saṁhite, Varāha-Saṁhite, Gārgya-Saṁhite, Paraśara-Saṁhite, Jaimini-Sūtra, Bhārgava-Sūtra, Sarga-Manōrame, Madanaratna, Brihaspati-Nāḍigrantha, Vaidya-Dharmaśāstra*, etc., relating to astrology. In order to verify the treatises in the Mysore palace, the king wanted the above cited treatises.

160

P. 1

L.

1. ಕೃಷ್ಣರಾಜ ವಡಯುರವರ್ರು
2. ಯುವ ಸಂವತ್ಸರದ ಮಾರ್ಗಶಿರ ಶು ೧೪ ಶುಕ್ರವಾರದಲ್ಲು ಶ್ರೀಮತು
3. ॥ ॥ ವೆಂಕಟಾಚಲ ಭಟರ್ರೈನವರ್ರಿಗೆ ಬರಶಿ ಕಳಿಹಿಸಿದ ನಿರೂಪ ಅ
4. ದಾಗಿ ಶ್ರೀ ॥ ॥ ಗಳವರ ಅನುಗ್ಣೆ ಪ್ರಕಾರ ಯಾವತು ವಿಚಾರ್ರಿಶಿಕೊಂಡು
5. ಹಣಗಳ ಬರಮಾಡಿ ನಡಯುತಕಂಥಾದಂನು ಸಾಂಗವಾಗಿ ನಡಸಿಕೊಂ
6. ಡು ಬರತಕ ವಿಚಾರವಂನ್ನು ಅರಮನೆ ಪುರೋಹಿತ ಲಿಂಗಾಭಟರು ಹಜೂ
7. ರಲ್ಲಿ ಅರ್ರಿಕೆ ಮಾಡಿದ ಕಾರಣ ಕಟ್ಲೆ ಮಾಡಿಸಿ ಯಿದಿತ್ತು ಶ್ರೀಗಳವರ ಅನು
8. ಗ್ಣೆಯಿಂದ ವಿಚಾರಣೆ ಮುದ್ರೆಯುಂನ್ನು ವಹಿಶಿದಂತವರ್ರು ಪ್ರಾಕು
9. ಮರ್ರ್ಯಾದೆ ಮೆರೆಗೆ ಯಾವತು ವಿಚಾರ್ರಿಶಿ ಬರತಕ ಹಣ ತರ್ರಿಸಿ ನಡಯುತಕಂ
10. ಥ್ಥಾ ಧರ್ಮಾದಿಗಳಂನ್ನು ಸಾಂಗವಾಗಿ ನಡಶಿಕೊಂಡು ಬರುವದು ತಾರ್ರಿಕು ೧೫
11. ನೆ ಮಾಹೆ ಡಿಸಂಬರ್ ಸನ್ ೧೮೧೫ ನೆ ಯಿಸವಿ ಖತ ಪ್ರಸಂನ್ಯೆಯ ಮುನಷಿ
12. ಹುಜುರ್ರು ಶ್ರೀ ಕೃಷ್ಣ

Summary : A *nirūpa*, dated Friday, 14th day of the bright half of Mārgaśira, Yuva *saṁvatsara*, corresponding to 15th December, 1815, from Krisṇarāja Oḍeyar to Veṅkaṭāchala Bhaṭṭa. The king informed that in accordance with the wish of the *Guru*, the law was passed regarding the collection of *kāṇike* etc., by the authorised agents of the *Maṭha*. It was the wish of the king to maintain *dharma*.

161

ಶ್ರೀ

L.

ಕೃಷ್ಣರಾಜ ವಡಯುರವರ್ರು

1. ಧಾತು ಸಂವತ್ಸರದ ಶ್ರಾವಣ ಶು ೧೪ ಮಂಗಳವಾರದಲ್ಲು ಶ್ರೀಮತು ॥ ॥
2. ಕೊಪ್ಪದ ಆಮಿಾಲ ಆನಂದರಾಯುಗೆ ಬರಶಿ ಕಳಿಹ್ಸಿದ ನಿರೂಪ ಅದಾಗಿ ಶ್ರಿಂಗೆರ್ರಿ
3. ಶ್ರೀ
ಸ್ವಾಮಿಗಳವರ ಮಠಕೆ ಚಾತುರ್ಮಾಸ ವ್ಯಾಸಪೂಜೆ ಕಟ್ಲೆಗೆ ಸಾಲಬಸಾಲು ನಗದು
4. ಜಿನಸು ವಗ್ಯೆರೆ ಹಜೂರ ಖಜಾನೆಯಿಂದಾ ಸಲುವದ ಮೊಖೂಪು ಮಾಡಿ
5. ತಾಲೂಕಿನಿಂ
6. ದ ಕೊಡತಕದಕೆ ಅಪ್ಪಣೆ ಕೊಟಿರುವದು ನಗದು ಕಂಟಿರಾಯಿ ದಪಾ ವಂದಕೆ ೧೫೦
. ೦ ಗು
7. ಲ್ಲು ದಪೆ ಯರಡಕೆ ಕಂಟಿರಾಯಿ ೩೦೦ . ೦ ಮುನೂರು ವರಹ ದೊತ್ರ ಜೊಡಿ ೨
ಯರಡಕೆ ಕಂ
8. ಟಿರಾಯಿ ಮೂವತು ಹಣದ ಕ್ರಯುದಲು ಕಂಟಿರಾಯಿ ೬ . ೦ ಆರು ವರಹದು ಸಹ
ಯಿಾ
9. ಶ್ವರ ಸಂವತ್ಸರದ ಆಷಾಡ ಮಾಸ ಲಾಗಾಯಿತ್ತು ವರಷಂ ಪ್ರತ್ತಿಯುಲು ತಾಜಾ
ಸಂನದ ವು
10. ಜೂರ್ ಮಾಡದೆ ಶ್ರೀಯುವರ ಮಠಕೆ ತಲಪ್ಸಿ ಪಾ಼ರಪತ್ಯಗಾರನ ರಶೀತಿ
ತೆಗದುಕೊಳುತಾ ಬರೊ
11. ದು ಯಿಾ ಸಂನದ ನಕಲು ತಾಲೂಕಿನ ಶಿರಸ್ತಾರ ದಪ್ತರಕೆ ಬರಶಿ ಅಸಲ ಸಂನದು
ವಾಪ್ಸು ಕೊ
12. ಡೊದು ತಾರ್ರಿಕು ೬ ನೆ ಮಾಹೆ ಅಗಸ್ಟು ಸನ್ ೧೮೧೬ ನೆ ಪ್ರಸಂನ್ಯೆಯ ಮು
13. ನಷಿ ಹುಜೂರ್ರು ಕಂಟಿರಾಯಿ ಮುನ್ನೂರು ವರ
14. ಹಾ ಸದರಿ ಅಪ್ಪಣೆ ಕೊಡಿಸಿರುವ ಮೆರೆ
15. ಗೆ ಕಡಮೆ ಸಾಮಾನ್ನು ಸಹ ಕೊಡಿಸು
16. ವದು

Summary : On Tuesday, 14th day of the bright half of Śrāvaṇa, Dhātu *saṁvatsara*, corresponding to 6th Aug. 1816, Krisṇarāja Oḍeyar issued a *nirūpa* to Ānandarāya, *āmīl* of Koppa. The *āmīl* was ordered to supply cash and provisions to the Śṛiṅgēri *Maṭha*, in connection with the observance of *chāturmāsya* by the *Guru*.

Scanned by CamScanner

162

L.

ಶ್ರೀ

1. ಕೃಷ್ಣರಾಜ ವಡಯರವರ್ರು
2. ಈಶ್ವರ ಸಂವತ್ಸರದ ನಿಜ ಶ್ರಾವಣ ಶು ೧ ಬುಧವಾರದಲ್ಲು ಶ್ರೀಮತು ॥ ॥
3. ಕೌಲೆದುರ್ಗದ ಆಮಿಾಲ ವೆಂಕಟರಾಮ್ಮೈಗೆ ಬರಶಿಕಳಿಹ್ಸಿದ ನಿರೂಪ ಆದಾಗಿ ಶ್ರಿಂ
4. ಗೆರ್ರಿ ಶ್ರೀಮಠಕೆ ತಾಲೂಕು ಮಜಕೂರಲ್ಲಿ ಭೂಮಿ ವುತ್ತಾರ ನಡಯುತಾ ಯಿದ್ದು
5. ಧಾತು ಸಂವತ್ಸರ ಮಾಘ ಮಾಸದಲ್ಲಿ ಜಪ್ತು ಮಾಡುವಂತೆ ಅಪ್ಪಣೆ ಕೊಟದ್ದು
6. ಯತಾ ಪ್ರಕಾರ ಜಾರ್ರಿಗೆ ಅಪ್ಪಣೆ ಆಗಬೆಕೆಂದು ಯಿಾ ಮಠಮುದ್ರೆ ಅರಮ
7. ನೆ ಪುರೊಹಿತ ಲಿಂಗಾಭಟರು ಅರ್ರಿಕೆ ಮಾಡಿದ ಪ್ರಕೃತ ಅಪ್ಪಣೆಕೊಟ್ಟು
8. ಯಿಧಿತ್ತು ಶ್ರಿಂಗೆರ್ರಿ ಶ್ರೀಮಠಕೆ ಸಂನದು ಮೆರೆ ನಡೆತಾ ಯಿದ್ದ ಭೂಮಿ ಜಪ್ತು
9. ಆಗಿ ಯಿರುವದನ್ನು ಯತಾಪ್ರಕಾರ ಜಾರ್ರಿಯಾಗಿ ವರಷಂಪ್ರತ್ತಿಯಲ್ಲು ತಾ
10. ಜಾ ಸಂನದು ವುಜುರ ಮಾಡದೆ ನಿರುಪಾಧಿಕದಲ್ಲಿ ನಡಸಿಕೊಂಡು ಬರೂದು ಯಿಾ
11. ನಿರೂಪದ ನಕಲು ತಾಲೂಕು ಶಿರಸ್ತಾರ ದಪ್ತರಕೆ ಬರೆಶಿ ಅಸಲ ನಿರುಪಾ ವಾಪ್ಸು
12. ಕೊಡೂದು ತಾರ್ರಿಕು ೧೩ ನೆ ಮಾಹೆ ಅಗಷ್ಟ ಸನ್ ೧೮೧೭ ನೆ ಯಿಸವಿ ಖಿತ್ತ ಪ್ರ
13. ಸಂನ್ಯೆಯ ಮುನಷಿ ಹುಜುರ್ರು ಶ್ರಿ
14. ಪ್ರವಸ್ತಾಗಿ । ಭಾದ್ರಪದ ಶು ೫ ಲ್ಲು

Summary : A letter, dated 13th August 1817, from Krișṇarāja Oḍeyar to Veṅkaṭarāmayya, *āmīl* of Kauledurga. The king ordered him to maintain the time-honoured privilege of the Śṛiṅgēri *Maṭha* with regard to *uttāra* lands.

163

L.

ಶ್ರೀ

1. ಕೃಷ್ಣರಾಜ ವಡಯರವರ್ರು
2. ಈಶ್ವರ ಸಂವತ್ಸರದ ನಿಜಶ್ರಾವಣ ಶು ೧ ಬುಧವಾರದಲ್ಲು ಶ್ರೀಮತು ॥ ॥
3. ಕೊಪ್ಪದ ಆಮಿಾಲ ವೆಂಕಟಕೃಷ್ಣೈಗೆ ಬರಶಿಕಳಿಹಿಸಿದ ನಿರೂಪ ಅದಾಗಿ ಶ್ರಿಂ
4. ಗೆರ್ರಿ ಶ್ರೀಮಠಕೆ ಚಾತುರ್ಮಾಸ್ಯ ಸಂಕಲ್ಪದ ಕಟ್ಲೆ ಬಗ್ಯೆ ನೆಮಕಾ ಮಾಡಿಕೊಡತ
5. ಕದಕೆ ಅಪಣೆ ಕೊಟದದಂನು ಧಾತು ಸಂವತ್ಸರದ ಮಾಘ ಮಾಸದಲ್ಲಿ ಮೊಕೂ
6. ಫು ಮಾಡುವಂತ್ತೆ ಅಪ್ಪಣೆ ಕೊಟದದ್ದು ಯತಾಪ್ರಕಾರ ಜಾರ್ರಿಗೆ ಅಪ್ಪಣೆ ಆ
7. ಗಬೆಕೆಂದು ಯಿಾ ಮಠ ಮುದ್ರೆ ಅರಮನೆ ಪುರೊಹಿತ ಲಿಂಗಾಭಟರು ಹಜೂ
8. ರ್ರು ಅರ್ರಿಕೆ ಮಾಡಿದ ಪ್ರಕೃತ ಅಪ್ಪಣೆ ಕೊಟ್ಟು ಯಿಧಿತ್ತು ಶ್ರಿಂಗೆರ್ರಿ ಶ್ರೀ ಸ್ವಾ
9. ಮಿಗಳವರ್ರಿಗೆ ಚಾತುರ್ಮಾಸ ಕಟ್ಲೆ ಬಗ್ಯೆ ಅಪ್ಪಣೆ ಕೊಟದ ಸಂನದು ಮೆರೆಗೆ
10. ಯತಾ ಪ್ರಕಾರ ಜಾರ್ರಿಯಾಗಿ ವರಷಂ ಪ್ರತ್ತಿ ತಾಜಾ ಸಂನದು ವುಜೂರು ಮಾಡ

11. ದೆ ನಿರುಪಾಧಿಕದಲ್ಲಿ ನಡಸಿಕೊಂಡು ಬರುದು ಯಿಾ ನಿರೂಪದ ನಕಲು ಶಿರಸ್ತೆದಾ
12. ರ ದಪ್ತರಕೆ ಬರಶಿ ಅಸಲ ನಿರೂಪಾ ವಾಪಸು ಕೊಡುವದು ತಾರ್ರಿಕು ೧೩ ನೆ ಮಾಹೆ
13. ಅಗಸ್ಟ ಸನ್ ೧೮೧೭ ನೆ ಯಿಸವಿ ಖಿತ್ತ ಪ್ರಸಂನ್ಯೆಯ ಮುನಷಿ ಹುಜೂ
14. ರ್ರು ಶ್ರೀ ಕೃಷ್ಣ

ಪ್ರ । ಭಾದ್ರಪದ ಬ ೨ ಸ್ಥಿರವಾರ ದಾಖಿ
ಲ ದರಜಾಗಾ ಮುಳವಳ್ಳಿ

Summary : A *nirūpa*, dated 13th August 1817, from Krișṇarāja Oḍeyar to Veṅkaṭa Krișṇaiya, *āmīl* of Koppa. The king ordered the *āmīl* not to issue orders, annually, regarding *Chāturmāsya* observed by the Śṛiṅgēri *Swāmīji*, but to continue the time-honoured privilege in this regard.

164

L.

ಶ್ರೀ

1. ಕೃಷ್ಣರಾಜ ವಡಯರವರ್ರು
2. ಪ್ರಮಾಥಿ ಸಂವತ್ಸರದ ಚೈತ್ರ ಬ ೧೩ ಗುರುವಾರದಲ್ಲೂ ಶ್ರೀಮತು ॥ ॥ ಅರ
3. ಮನೆ ಶೀಮೆ ಗಡಿಗಳ ಆಮಿಾಲ ಕಿಲ್ಲೆದಾರ ಸಾಯಿರ ಮಣೆಗಾರ್ರಿಗೆ ಸಹಾ ಬರಶಿ ಕಳುಹಿ
4. ದ ನಿರೂಪಾ ಅದಾಗಿ । ಶ್ರಿಂಗೇರ್ರಿ ಶ್ರೀಮಠಕ್ಕೆ ನಡೆಯುವ ಸರ್ವಮಾಂನ್ಯದ ಗ್ರಾಮ ಅರ್ಧ
5. ಮಾಂನ್ಯದ ಗ್ರಾಮದಲ್ಲಿ ಸಹಾ ಯಿರುವ ಶ್ರೀಗಂಧದ ಗಿಡಗಳು ಶ್ರೀ ಅಂಮ್ಮನವರ ಸೇವಾ ವು
6. ಪಯುಕ್ತವಾಗಿ ಬಿಟ್ಟು ಯಿಧೆ । ಯಿಾ ಗಿಡಗಳು ಶ್ರೀಮಠದವರು ಕಡಿಶಿ ಸಲಾಕೆ ಮಾ
7. ಡಿ ಮಠಕ್ಕೆ ತೆಗದುಕೊಂಡಾಗ್ಯು ವರ್ತಕರ್ರಿಗೆ ಪುರೊಖ್ತು ಮಾಡಿಕೊಟ್ಟಾಗ್ಯು ಅಟಕಾ
8. ವು ಮಾಡಕೆಲಸವಿಲ್ಲಾ ವರ್ತಕರು ಯಿಾ ಗಂಧವಂನ್ನು ಖರ್ರಿದಿ ಮಾಡಿ ತೆಗದುಕೊಂಡು
9. ಹೊಗುವಲ್ಲಿ ನಿಂಮ್ಮ ನಿಂಮ್ಮ ಗಡಿಗಳ ಮಾರ್ಗದ ಸಾಲಕಟೆ ಸುಂಕ್ಕಾ ಮಾಮೂಲ ಮೆರ್ರೆಗೆ
10. ಆಯಾಯ ಕಟ್ಲೆ ಪ್ರಕಾರ ಪಧತ್ತಿ ಪ್ರಕಾರ ಸುಂಕಾ ವಸೂಲ ಮಾಡಿಕೊಂಡು ಸರ ರಾಸು
11. ಬಿಟ್ಟು ಬಿಡುವದು ಬ ತಾರ್ರಿಕು ೨೨ ನೆ ಮಾಹೆ ಯೆಪ್ರಿಲ್ ಸಂನ್ ೧೮೧೯ ನೆ ಯಿಸವಿ ಖಿತ್ತ

Summary : A *nirūpa*, dated 22nd April 1819, from Krisṇarāja Oḍeyar to *āmīls, killedārs* and *maṇiyagārs*. Since the sandal-wood grown in *sarvamānya* and *ardhamānya* villages of the Śṛiṅgēri *Maṭha* was meant for the services of *Śrī* Śāradāmbā, the *Maṭha* was not to be prevented from either cutting the sandal-wood or selling to the merchants. However, a duty was to be collected from the merchants who carried sandal-wood pieces.

165

L.

1. ಕೃಷ್ಣರಾಜ ವಡಯುರವರು
2. ವಿಕ್ರಮ ಸಂವತ್ಸರದ ಭಾದ್ರಪದ ಬ ೮ ಲ್ಲು ಶ್ರೀಮತು ॥ ॥ ನಂಮ ಸಿಮೆ ಗಡಿಗಳ ಗುರಿ
3. ಕಾರು ಅಠವಣೆ ಪಾರುಪತ್ಯಗಾರ್ರಿಗೆ ಸಹ ಬರಸಿ ಕಳುಹಿದ ನಿರೂಪ ಅದಾಗಿ। ಶ್ರಿಂಗೆರಿ ಶ್ರೀ
4. ಮಠದ ಹವಾಲಿಗೆ ರಂಗಸಮುದ್ರದ ಹೊಬಳಿಯಲ್ಲು ಹಿಟ್ಟುವಳಿ ಗ್ರಾಮ ೧ ಕಾಮನ
5. ಮಠದ ಗ್ರಾಮ ೧ ಶ್ರೀಕೃಷ್ಣರಾಜನಗರ ಸ್ಥಳದಲ್ಲು ಸಿಗೆಕುಪ್ಪೆಗ್ರಾಮ ೧ ಮಹಾರಾ
6. ಜನದುರ್ಗ ಸ್ಥಳದಲ್ಲು ಕಿರುವಾಲೆ ಗ್ರಾಮ ೧ ಕಂದಿಕೆರೆ ಸ್ಥಳದ ಯೆರೆಹಳ್ಳಿ ಗ್ರಾಮ
7. ೧ ಸಹ ಪ್ರಾಕಾರಭ್ಯಾ ದೆವತಾ ಶೆವೆಗೆ ನಡದು ಬರುವದು ಸರಿಯಷ್ಟೆ। ಯಿಾ ಗ್ರಾ
8. ಮಗಳಲ್ಲಿ ವರಿ ವರಾಡ ಚರಾದಾಯು ಮುಂತಾಗಿ ಬರಬೆಕೆಂದು ಚಿಲ್ಲರೆ ಉಪದ್ರಗ
9. ಳ ನಡಸುವದಾಗಿ ಕೆಳಪಟ್ಟು ಯಿದ್ಧಿತು। ಪೂರ್ವಾರಭ್ಯಾ ಶ್ರೀಮಠಕ್ಕೆ ನಡದು ಬ
10. ---- ಗಳ ಪಟ್ಟಿನಲ್ಲಿ ಯಿಾ ರಿತಿಗೆ ನಡಸುವದಕ್ಕೆ ಕಾರಣವೆನು। ಯಿಂನು ಹಿ
11. --- ದ ಶ್ರಿಂಗೆರಿ ಶ್ರೀಮಠದ ಹವಾಲಿಗೆ ನಡದುಬರುವ ರಂಗಸಮುದ್ರದ ಹೊ
12. ಬಳಿಯಲ್ಲು ಹಿಟ್ಟುವಳಿ ಗ್ರಾಮ ೧ ಕಾಮನ ಮಠದ ಗ್ರಾಮ ೧ ಶ್ರೀಕೃಷ್ಣರಾಜ
13. ನಗರದಲ್ಲು ಸಿಗೆಕುಪ್ಪೆಗ್ರಾಮ ೧ ಮಹಾರಾಜನದುರ್ಗ ಸ್ಥಳದಲ್ಲು ಕಿರುವಾ
14. ಲೆ ಗ್ರಾಮ ೧ ಕಂದಿಕೆರೆ ಸ್ಥಳದ ಯೆರೆಹಳ್ಳಿ ಗ್ರಾಮ ೧ ಬೆಲೂರು ಸ್ಥಳದ ರಣಗಟ್ಟ ಸೂ
15. ರಾಪುರದ ಗ್ರಾಮದಲ್ಲಿ ಸಹ ಸುಂಕ ಪೊಂಮು ವರಿ ವರಾಡ ಮುಂತಾಗಿ ಬರಬೆಕೆಂ
16. ದು ಕೆಳದೆ ನಿರುಪಾಧಿಕ ಸರ್ವಮಾಂನ್ಯವಾಗಿ ಶಾಶ್ವತವಾಗಿ ಶ್ರೀಮಠದ ಹವಾಲಿನಲ್ಲಿ
17. ದೆವತಾ ಶೆವೆ ಬಗ್ಯೆ ನಡಸಿಕೊಂಡು ಬರುವದು। ಯಿಾ ನಿರೂಪವಂನ್ನು ಶಾನಭಾಗರ ಕ
18. ಡಿತಕ್ಕೆ ಬರೆಸಿ ತಿರಿಗಿ ಕೊಡುವದು। ಶ್ರೀ

Summary : A *nirūpa*, dated 8th day of the dark half of Bhādrapada, Vikrama *saṁvatsara*, from Krisṇarāja Oḍeyar to *gurikārs* and *aṭhavaṇe pārupatyagārs*. Since Hiṭṭuvaḷi *grāma* and Kāmanamaṭha *grāma* in Raṅgasamudra hōbḷi, Sigekuppe *grāma* in Śrī Krisṇarājanagar, Kiruvāle *grāma* in Mahārājanadurga, Yarehaḷḷi *grāma* in Kandikere, Raṇaghaṭṭa in Bēlūru and Sūrāpur *grāma* happened to be the *sarvamānya* villages of the Śṛiṅgēri *Maṭha*, duty, tax on tobacco and other such taxes were not to be colled from the *Maṭha*. These *sarvamānya* villages in the possession of the Śṛiṅgēri *Maṭha* were meant for the services of the deities.

166

P. 1

L.

1. ಶ್ರೀಮತ್ಪರಮಹಂಸ ಪರ್ರಿವ್ರಾಜಕಾಚಾರ್ಯವರ್ಯ ಪದವಾ
2. ಕ್ಯಪ್ರಮಾಣ ಪಾರ್ರಾವಾರ ಪಾರ್ರೀಣ ಯಮನಿಯಮಾಸನ ಪ್ರಾಣಾ
3. ಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೊ
4. ಗ ನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಚಿನ್ನ ಗುರುಪರಂಪರಾಪ್ರಾಪ್ತ
5. ಷಡ್ದರ್ಶನ ಸ್ಥಾಪನಾಚಾರ್ಯ ವ್ಯಾಖ್ಯಾನ ಸಿಂಹ್ಮಾಸನಾದೀಶ್ವರ ಸ
6. ಕಲ ನಿಗಮಾಗಮ ಸಾರಹೃದಯ ಸಾಂಖ್ಯತ್ರಯ ಪ್ರತ್ತಿಪಾಲ
7. ಕ ವೈದಿಕಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರ ಆದಿ ರಾ
8. ಜಧಾನಿ ವಿದ್ಯಾನಗರ ಮಹಾರಾಜಧಾನಿ ಕರ್ನಾಟಕ ಸಿಂಹ್ಮಾ
9. ಸನ ಪ್ರತ್ತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜಗುರು ಭೂಮಂ
10. ಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ ತುಂಗಭದ್ರಾ
11. ತ್ತೀರವಾಸ ಶ್ರೀವಿದ್ಯಾಶಂಕರ ಪಾದಪದ್ಮಾರಾಧಕ ಶ್ರೀಮದ
12. ಭಿನವ ಸಚ್ಚಿದಾನಂದ್ದ ಭಾರತ್ತಿಸ್ವಾಮಿ ಗುರುಕರಕಮಲ
13. ಸಂಜಾತ ಶ್ರೀ ಶ್ರಿಂಗೆರ್ರಿ ಶ್ರೀ ನರಸಿಂಹ್ಮ ಭಾರತ್ತಿಸ್ವಾಮಿಗಳವರ
14. ಸಂನ್ನಿಧಾನಕ್ಕೆ

P. 2

L.

1. ಮೈಸೂರು ಕೃಷ್ಣರಾಜ ವಡಯುರವರ್ರು ಮಾಡುವ ಬಿಂನ್ನಹಾ ಅದಾಗಿ ಚಿತ್ರಭಾ
2. ನು ಸಂವತ್ಸರದ ಚೈತ್ರ ಶುದ್ಧ ೬ ಗುರುವಾರದವರ್ರಿಗೆ ಸ್ವಾಮಿಯವರ ಪರಮಾನುಗ್ರ

Scanned by CamScanner

3. ಹದಿಂದ್ದ ನಾವು ಕ್ಷೆಮದಲ್ಲಿ ಯಿಧೆವೆ । ಸಂಸ್ಥಾನ ಸಹಿತ ಸ್ವಾಮಿಯವರ್‍ರು ಮೈಸೂ
4. ರ್‍ರಿಗೆ ಚಿತ್ತೈಶಿ ಶ್ರೀ ಶಾರದಾ ಚಂದ್ರಮೌಳೀಶ್ವರ ರತ್ನಗರ್ಭಗಣಪತ್ತಿ ವೇಣುಗೋಪಾಲ
5. ಸ್ವಾಮಿಯವರ ದರ್ಶನ ಶ್ರೀಪಾದುಕಾ ದರ್ಶನದಿಂದ್ದಲು ಸಮಸ್ತರ್‍ರು ಕೃತಾರ್ಥ
6. ರಾಗತ್ಕ ಬಗ್ಯೆ ಸ್ವಾಮಿಾಯವರ್‍ರು ದಿಗ್ವಿಜಯಾ ಮಾಡಬೆಕೆಂಬ ಪ್ರಯ್ಯುಕ್ತವಾಗಿ
ರಹದಾ

7. ರ್‍ರಿಯಂನ್ನು ಸಂನಿಧಾನಕ್ಕೆ ಕಳುಹಿಶಿ ಯಿಧೆ ಸಂಸ್ಥಾನ ಸಹಿತವಾಗಿ ಸ್ವಾಮಿಯವರ್‍ರು
ಜಾ

8. ಗ್ರುತ್ತೆಯಿಂದ್ದ ಮೈಸೂರ್‍ರಿಗೆ ದಯಮಾಡಿ ದರ್ಶನ ಮಾತ್ರುದಿಂದ್ದ ಸಮಸ್ತ ಜನರ
9. ನ್ನು ಕೃತಾರ್ಥರನ ಮಾಡ್ಸಿತ್ಕದ್ದೆಂಬ ಯಿತ್ಯಾದಿ ವಿವರಗಳಂನ್ನು ಚಿತದಲ್ಲಿ ಪರ್‍ರಾಂಬ
10. ರ್‍ರಿಶಿ ಸ್ವಾಮಿಾಯವರ ನಿರಂತರ ತಪಸ್ಸಾಂಬ್ರಾಜ್ಯಾತ್ತಿಶಯಗಳಿಗು ಶ್ರಿಂಗೆರ್‍ರಿಯಿಂ
11. ದ್ದ ಮೈಸೂರ್‍ರಿಗೆ ದಯಮಾಡತ್ಕ ಬಗ್ಯೆ ತೆರಳಿದ ವಿದ್ಯಮಾನಕ್ಕು ಅಪ್ಪಣೆ ಕೊಟ್ಟು

- -

Summary : A letter, dated Thursday, 6th day of the bright half of Chaitra, Chitrabhānu *saṁvatsara*, from Krişṇarāja Oḍeyar to *Śrī* Narasiṃha Bhāratī *Swāmīji*, the disciple of *Śrī* Abhinava Sacchidānanda Bhāratī *Swāmīji* of Śṛiṅgēri. The king requested the *Guru* to visit Mysore and offer a *darśana* of *Śrī* Śāradā, *Śrī* Chandramauḷīśvara, *Śrī* Ratnagarbha Gaṇapati, *Śrī* Vēṇu-Gōpāla and *Śrī Pādukā*.

Note : The *binnavattaḷe* is incomplete. The last few lines are missing.

167

L.

ಶ್ರೀ

1. ಕೃಷ್ಣರಾಜ ವಡಯರವರು
2. ಚಿತ್ರಭಾನು ಸಂವತ್ಸರದ ಆಷಾಡ ಶು ೮ ಬುಧವಾರದಲ್ಲೂ ಶ್ರೀ
3. ಮತು ॥ ॥ ಅರಮನೆ ಶಿಮೆ ಗಡಿಗಳ ಆಮಿಾಲ ಕಿಲೆದಾರ್‍ರಿಗೆ ಬರಶಿ
4. ಕಳುಹಿದ ನಿರ್‍ರುಪಾ ಅದಾಗಿ ಶ್ರಿಂಗೆರಿ ಶ್ರೀಮಠದಯಿಂದ ಮಠ
5. ಮುದ್ರೆ ಬ್ರಾಂಹ್ಮರು ಬಂದು ನಿಂಮ ನಿಂಮ ತಾಲೂಕಿನಲ್ಲಿ ಅವರ ಶಿ
6. ಷ್ಯವರ್ಗದ ವರ್ನಾಶ್ರಮದ ಆಚಾರವಿಚಾರಾ ವಿಚಾರಿಶಿಕೊಂಡು
7. ಶ್ರೀಮಠಕೆ ಬರತಕ್ಕ ಚರಣಕಾಣಿಕೆ ಮೂಲಾನಕ್ಷತ್ರ ಕಾಣಿಕೆ
8. ಅಗ್ರುತಾಂಬೂಲ ದೀಪಾರಾಧನೆ ಕಾಣಿಕೆ ವಿಶೆಷ ಪ್ರಾಯಶ್ಚಿತ್ತ ಕಾ
9. ಣಿಕೆ ಮುಂತಾಗಿ ಶಿಷ್ಯವರ್ಗದ ಜನರಲ್ಲಿ ಬರಮಾಡಿಕೊಳುವಲ್ಲಿ
10. ಯಾರಾದರು ಕಾಣಿಕೆ ಕೊಡದೆ ಮಠದ ಮುದ್ರಾತಿಕ್ರಮವಾಗಿ

ನಡದುಕೊಂಡು ತುಂಟತನಾ ಮಾಡಿದಲ್ಲಿ ಆ ಜನರಿಗೆ ಯಿಾ ಮ
11. ಠ ಮುದ್ರೆ ಬ್ರಾಂಹ್ಮರ ವಶಾ ಮಾಡಿದಲ್ಲಿ ಅದಕ್ಕೆ ತಕ್ಕ ಬಂದೊಬ
12. ಸ್ತು ಅವರು ಮಾಡುತ್ತಾ ಯಿಧಾರೆ ಯಿಾ ಶ್ರಿಂಗೆರಿ ಶ್ರೀಮಠಕ್ಕೆ ಕಾ
13. ಣಿಕೆ ಹಣಾ ಕೊಟ್ಟುಕೊಂಡು ಮುದ್ರಾನುಸಾರವಾಗಿ ನಡ
14. ದುಕೊಳುವಂತೆ ತ್ತಿಳಿಯುವದಕ್ಕೊಸ್ಕರಾ ಧಂಡೊರಾ ಹಾ
15. ಕಿಸುವದೂ । ತಾರಿಕು ೨೬ ನೆ ಮಾಹೆ ಜುನ್ ಸನ್ ೧೮೨೨ ನೆ ಯಿಸವಿ
16. ಖತ್ತ ಪ್ರುಸಂನ್ಯೆಯ ಮುನಷಿ ಹುಜೂರ್‍ರು ಶ್ರೀ ಕೃಷ್ಣ
17.

Summary : A *nirūpa*, dated Wednesday, 8th day of the bright half of Āṣāḍha, Chitrabhānu *saṁvatsara*, corresponding to 26th June, 1822, from Krişṇarāja Oḍeyar to *āmīls* and *killedārs*. "The *Maṭha-Mudre* Brahmaṇās are making proper *bandōbast* of their such disciples who fail to remit *charaṇakāṇike, mūlānakṣatrakāṇike, agratāmbūla, dīpārādhane-kāṇike, Viśēṣa-prāyaschitta kāṇike*, to the Śṛiṅgēri *Maṭha*." The *āmīls* and *killedārs* were ordered to honour the time-honoured practice by *daṇḍōra* or proclamation by beat of a drum.

168

L.

ಶ್ರೀ

1. ಕೃಷ್ಣರಾಜ ವಡಯರವರು
2. ಚಿತ್ರಭಾನು ಸಂವತ್ಸರದ ಭಾದ್ರುಪದ ಶು ೧೩ ಶುಕ್ರವಾರದಲ್ಲು
3. ಶ್ರೀಮತು ॥ ॥ ಅರಮನೆ ಶೀಮೆ ಗಡಿಗಳ ಅಮಲದಾರ್‍ರ ಕಿ
4. ಲಿದಾರ್‍ರಿಗೆ ಬರಶಿಕಳುಹಿಸ್ತ ನಿರ್‍ರೂಪ ಅದಾಗಿ ಶ್ರಿಂಗೆರ್‍ರಿ ಸ್ವಾಮಿಗಳ
5. ವರು ಹರಕೆರ್‍ರಿಯಿಂದ್ದಾ ಶ್ರಿಂಗೆರ್‍ರಿಗೆ ಚಿತ್ತೈಸುವ ಮಜಲು ವಿವರ್‍ರಾ
6. ೧ ಹರಕೆರ್‍ರಿಯಿಂದ್ದಾ ಶಿವಮೊಗ್ಗೆ ೧ ಆಯನೂರ್‍ರು ಮಜಲು
7. ೧ ಕುಮಶಿ ಮಜಲು ೧ ಅನಂತಪುರ್‍ರ
8. ೧ ಹುಮುಚದಕಟ್ಟೆ ೧ ಆರಗ ಮಜಲು
9. ೧ ಭದ್ರುರಾಜಪುರ್‍ರ ೧ ಬೊಂಮ್ಮಲಾಪುರ್‍ರ
10. ೧ ಮುಳವಳ್ಳಿ
11. ಯಿಾ ಮೆರ್‍ರೆಗೆ ವಂಭತ್ತು ಮಜಲು ಮಾಡಿಕೊಂಡು ಶ್ರಿಂಗೆರ್‍ರಿಗೆ ತಲಪು
12. ವದರ್‍ರಿಂದ್ದಾ ಯಿಾ ಮಜಲುಗಳಲ್ಲಿ ಯಿಳದ ದಿವ್ಸ ವಂದಕ್ಕೆ ಮಾತ್ರಾ ದೆವರ
13. ಅಭಿಷೇಕ ನೈವೆದ್ಯ ಬ್ರಾಂಹ್ಮರ ಸಂತರ್ಪಣೆ ಮುಂತಾದಕ್ಕೆ ಸಹಾ ಆಷಾಡ
14. ಶು ೭ ತಾರ್‍ರಿಖಿನಲ್ಲು ಅಪ್ಪಣೆ ಕೊಡ್ಸಿ ಯಿರ್‍ರುವ ರಹದಾರ್‍ರಿ ಮೆರ್‍ರೆಗೆ ಸದರ್‍ರಿ
15. ಮಜಲುಗಳಲ್ಲಿ ಪದಾರ್ಥ ಮುಂತ್ತಾಗಿ ಕೊಟ್ಟು ರಶಿತ್ತಿ ತೆಗದುಕೊಂಡು ಲಾ

Scanned by CamScanner

16. ಗವಡಪಟ್ಟಿ ಕಳುಹಿಸುವದು ತಾರ್‍ರಿಖ ೩೦ ನೆ ಮಾಹೆ ಅಗಸ್ಟ ಸನ್ ೧೮೨೨ ನೆ ಯಿಸವಿ ಖತ್ತ

17. ಅಂಣ್ಣೈಯ ಮುನಶಿ ಹಜೂರ್‍ರು ಶ್ರೀಕೃಷ್ಣ

Summary : A *nirūpa*, dated 30th August 1822, from Krișṇarāja Oḍeyar to *amaldārs* and *killedārs*. Since the Śṛiṅgēri *Swāmīji* was moving from Harakeri to Śṛiṅgēri, in accordance with the *rahadāri*, provisions were to be supplied at nine halting places in between, for *abhiṣēka* anḍ *naivēdya* of the deities and for Brāhmaṇa *santarpaṇe*. A receipt be obtained for having provided provisions. Śivamogge, Kumśi, Humchadakaṭṭe, Bhadrarājapura, Muḷavaḷḷi, Āyanūru, Anantapura, Āraga and Bommalāpura, are the nine halting places mentioned in the *nirūpa*.

169

L.

ಶ್ರೀ

1. ಕೃಷ್ಣರಾಜ ವಡಯರವರು
2. ಚಿತ್ರಭಾನು ಸಂವತ್ಸರದ ವುಭಯಾತ್ಮಕ ಪುಷ್ಯ ಶು ೧೨ ಬುಧವಾರದಲ್ಲು ಶ್ರೀ
3. ಮತ್ತು ॥ ॥ ಅರಮನೆ ಸೀಮೆ ಗಡಿಗಳ ಅಮಲದಾರ ಕಿಲೆದಾರಗೆ ಬರಸಿ ಕ
4. ಳುಹಿದ ನಿರೂಪಾ ಅದಾಗಿ ॥ ॥ ಶ್ರಿಂಗೆರ್‍ರಿಗೆ ರುದ್ರಾಕ್ಷಿ ಮಂಟಪಾ ಕಳುಹ್ಸಿ
5. ಯಿರುವದರ ಯಿಂದ್ದಾ ಯಿಾ ಮಂಟಪ ಬರುವದಂನು ಕೈದವಾರ ಸ್ತಳದಲ್ಲಿಟ್ಟು
6. ಗಡಿಯಿಂದಾ ಮೂಡಣಗರಿ ವರ್‍ರಿಗೂ ಮಂಟಪ ಸಾಗತಕ ಬಗ್ಯೆ ಹೊರ್‍ರೆಗೆತ್ಕ
7. ಷ್ಟು ಆಳು ಕೊಟ್ಟು ರವಾನೆ ಮಾಡಿ ಮಂಟಪ ಮುಂದಕ್ಕೆ ರವಾನೆ ಆದ ಬಗ್ಯೆ ಹಜೂ
8. ರ್‍ರಿಗೆ ಅರ್ಜಿ ಬರದು ಕಳುಹಿಸುವದು ತಾರ್‍ರಿ ೨೫ ನೆ ಮಾಹೆ ಡಿಶಂಬರ ಸಂನ್ ೧೮೨೨
9. ನೆ ಯಿಸವಿ ಖತ ಸುಬರಾವು ಮುನಷಿ ಹಜೂರ್‍ರು ಶ್ರೀ ಕೃಷ್ಣ

Summary : A *nirūpa*, dated 25th December 1822, from Krișṇarāja Oḍeyar to *amaldārs* and *killedārs*, ordering them to despatch *Rudrākṣi-Manṭapa*, sent from Mysore to Śṛiṅgēri.

170

P.

L.

ಶ್ರೀ

1. ಕೃಷ್ಣರಾಜ ವಡಯರವರು
2. ಸ್ವಭಾನು ಸಂವತ್ಸರದ ಭಾದ್ರಪದ ಶು ೧೧ ಮಂಗಳವಾರದಲ್ಲು ಶ್ರೀ
3. ಮತು ॥ ॥ ನಗರ್‍ರ ೧ ಅನಂತಪುರ್‍ರ ೧ ಕುಮಶಿ ೧ ಬಿದರ್‍ರಿ ೧ ಹೊಂನಾಳಿ ಶಿಕಾ

4. ರಿಪುರ್‍ರ ೧ ಹರ್‍ರಿಹರ ೧ ಲಕ್ಕುವಳಿ ೧ ವುಡಗಣಿ ೧ ಆನವಟ್ಟಿ ೧ ಚಂದ್ರಗುತ್ತಿ ೧ ಶಿವಮೊಗ್ಗೆ ೧
5. ಹೊಳೆಹೊಂನೂರ್‍ರು ೧ ಸೊರಬಾ ೧ ವಸುಧಾರ್‍ರೆ ೧ ಚಂನಗಿರ್‍ರಿ ೧ ಬಸವಾಪಟ್ಣ ೧ ಯಿ
6. ಕ್ಕೆರ್‍ರಿ ೧ ಸಾಗರ್‍ರ ಮಂಡಗದ್ದೆ ೧ ಕವಲೆದುರ್ಗ ೧ ಕೊಪ್ಪ ೧ ಯಿಾ ತಾಲ್ಲೂಕು ಆಮಿಾ
7. ಲ ಕಿಲ್ಲೆದಾರ್‍ರಿಗೆ ಬರಶಿಕಳುಹಿದ ನಿರೂಪಾ ಅದಾಗಿ ಶ್ರೀಶ್ರಿಂಗೆರ್‍ರಿ ಶ್ರೀ ಸ್ವಾ
8. ಮಿಗಳವರ ಮಠದ ಶಿಷ್ಯರ ಪೈಕಿ ಯಾರಾದರ್‍ರು ಬೆವಾರಸು ಜನಗಳು
9. ಮೃತವಾದಲ್ಲಿ ತೆಗದುಕೊಂಡು ನಿಂತದ್ದು ವಂದುಸಾವಿರ ರೂಪಾಯಿ ವಳ
10. ಯಿದ್ದರ್‍ರೆ ತೆಗದುಕೊಂಡು ನಿಂತದ್ದು ವಂದುಸಾವಿರ ರೂಪಾಯಿ ವಳ
11. ಗಾಗಿ ಅವರ ಜಿಂದಗಿ ಯಿದ್ದಲ್ಲಿ ಅವನಿಗೆ ಹಾಲ್ಲಿ ವಾರಸು ಯಾರ್‍ರು ಇಲ್ಲ
12. ದ್ದು ಚಂನ್ನಾಗಿ ವಿಚಾರ್‍ರಿಶಿ ಯಿಾ ಮಠದವರ ವಶಕ್ಕೆ ಕೊಟ್ಟು ರಶಿತ್ತಿ ತೆಗ
13. ದುಕೊಳ್ಳುವದು ಸಾವಿರ ರೂಪಾಯಿ ಮ್ಯಾಲೆ ಹೆಚ್ಚು ಜಿಂದಗಿ ಯಿದ್ದ
14. ಲ್ಲಿ ಆ ವಿವರಕ್ಕೆ ಹಜೂರ್‍ರಿಗೆ ಬರದು ಕಳುಹಿಶಿ ಅಪ್ಪಣೆಬಂದ ಮೆರ್‍ರೆ
15. ಗೆ ನಡದುಕೊಳ್ಳುವದು ಯಿದಲ್ಲದೆ ಹರ್‍ರಿಹರಪುರದ ಮಠದ ಸಂನ್ಯಾ

P. 2

L.

1. ಶಿಯು ನೂತನವಾಗಿ ಯಾವದಾದರ್‍ರು ಬಿರದು ಮುಥತ್ತಾಗಿ ತೆಗದುಕೊಂ
2. ಡು ಬಂದಲ್ಲಿ ಅಟಕಾಯಿಸುವದು ಬಿಡಕೆಲಸವಿಲ್ಲಾ ಬ ತಾರ್‍ರಿಕು
3. ೧೬ ನೆ ಮಾಹೆ ಶಪಟಂಬರ ಸಂನ್ ೧೮೨೩ ನೆ ಯಿಸವಿ ಖತ್ತ ಜಗನ್ನಾಥೈ
4. ಯ್ಯ ಮುನಷಿ ಹಜೂರ್‍ರು ಶ್ರೀ ಕೃಷ್ಣ

Summary : A *nirūpa*, dated 16th Sept. 1823, from Krișṇarāja Oḍeyar to *āmīls* and *killedārs* of Nagar, Anantapur, Kumśi, Bidri, Honnāḷi, Śikāripur, Harihar, Lakkuvaḷi, Uḍgaṇi, Anvatti, Chandragutti, Śivamogge, Hoḷehonnūru, Sorab, Vasudhāre, Channagiri, Basavāpaṭṭaṇa, Ikkēri, Sāgar, Maṇḍgadde, Kavaledurga and Koppa tāluks, asking them to hand over the property of the heirless person, after his death, to the Śṛiṅgēri *Maṭha*, provided the value of his property did not exceed Rs. 1,000/-. If the value exceeded Rs. 1,000/-, the same was to be communicated to the Hajūr and act in accordance with the Hajur's order.

Scanned by CamScanner

171

P. 1

L.

1. ಶ್ರೀಮತ್ಪರಮಹಂಸ ಪರ್ರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾ
2. ರಾವಾರ ಪಾರ್ರಿಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ
3. ಸಮಾಧ್ಯಷ್ಟಾಂಗ ಯೊಗಾನುಷ್ಠಾನ ನಿಷ್ಠ ತಪಶ್ಚಕ್ರವರ್ತನಾದ್ಯವಿಛಿಂನ್ನ ಗುರುಪರಂ
4. ಪರಾಪ್ರಾಪ್ತ ಷಡ್ದರ್ಶನ ಸ್ಥಾಪನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧಿಶ್ವರ ಸಕಲ ನಿ
5. ಗಮಾಗಮ ಸಾರಹೃದಯ ಸಾಂಖ್ಯತ್ರಯ ಪ್ರತಿಪಾದಕ ವೈದಿಕಮಾರ್ಗ ಪ್ರವ
6. ರ್ತಕ ಸರ್ವತಂತ್ರ ಸ್ವತಂತ್ರಾದಿ ರಾಜಧಾನಿ ವಿದ್ಯಾನಗರ ಮಹಾರಾಜಧಾನಿ ಕರ್ನಾಟ
7. ಕ ಸಿಂಹ್ವಾಸನ ಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜಗುರು ಭೂಮಂಡಲಾ
8. ಚಾರ್ಯ ರೃಷ್ಯಶ್ರುಂಗಪುರವರಾಧಿಶ್ವರ ತ್ತುಂಗಭದ್ರಾತ್ತೀರವಾಸ ಶ್ರೀಮದ್ವಿದ್ಯಾಶಂ
9. ಕರ ಪಾದಪದ್ಮಾರಾಧಕ ಶ್ರೀಮದಭಿನವ ಸಚ್ಚಿದಾನಂದ ಭಾರತ್ತಿ ಸ್ವಾಮಿ ಗುರು
10. ಕರಕಮಲ ಸಂಜಾತ ಶ್ರುಂಗೆರ್ರಿ ಶ್ರೀ ನರಸುಂಹ್ವಭಾರತ್ತಿ ಸ್ವಾಮಿಗಳವರ ಸಂನಿಧಾ
11. ನಂಗಳಿಗೆ –

P. 2

L.

1. ಮಹಿಶೂರ್ರು ಕೃಷ್ಣರಾಜ ವಡಯರವರ್ರು ಮಾಡುವ ಬಿಂನಹ । ತ್ತಾರಣ ಸಂವತ್ಸರದ ಪುಷ್ಯ ಶುದ್ಧ ೧೦ ಗುರುವಾರ
2. ದವರ್ರಿಗೆ ಸ್ವಾಮಿಯವರ ಪರಮಾನುಗ್ರಹದಿಂದಾ ನಾವು ಕ್ಷೆಮದಲ್ಲಿ ಯಿಧೆವೆ ಸ್ವಾಮಿಯವರ ತಪೊ ಸಾಂಬ್ರಾ
3. ಜ್ಯಾತ್ತಿಶಯಗಳಿಗೆ ಅಪ್ಪಣೆ ಕೊಟ್ಟು ಕಳುಹ್ಸಿತ್ಕದು ತ ನಂಜುಂಡ ಶಾಸ್ತ್ರಿಗಳ ಸಂಗಡ ಅಪ್ಪಣೆ ಕೊಟ್ಟು ಕಳುಹಿದ

4. ಶ್ರೀಮುಖದಿಂದಾ ಸಕಲ ಅಭಿಪ್ರಾಯವು ತ್ತಿಳಿಯಪಟಿತ್ತು ಮಹಿಸುರ್ರು ಸಿಮೆ ಆಚಾರ ವಿಚಾರವಂನ್ನು ಅರಮನೆ ಪು
5. ರೊಹಿತ ನಂಜುಂಡ ಶಾಸ್ತ್ರಿಗೆ ನೆಮಕಾ ಮಾಡ್ಸಿ ಅಪ್ಪಣೆ ಕೊಡ್ಸಿ ಯಿರ್ರುವದರ್ರಿಂದಾ ಶ್ರೀಮಠಕೆ ಆಗತ್ಕ ಕಾರ್ಯಗಳಂನ್ನು
6. ಯಿಾತ ಶೃತ ಪಡ್ಸಿದ ಪ್ರಕಾರ ಸಂದರ್ಭಾ ಮಾಡ್ಸಿಕೊಟ್ಟು ಪೂರ್ಣ ಸಾಭಿಮಾನವಿಟ್ಟು ವಿಚಾರ್ರಿಶಿಕೊಳುವ ಹಾಗೆ ಮಾಡ್ಸಿ
7. ಬೆಕೆಂದು ಅಪ್ಪಣೆ ಕೊಟ ಬಗ್ಯೆ ಯಿಾ ನಂಜುಂಡ ಶಾಸ್ತ್ರಿಗಳು ದಿವಾರಾತ್ರೆಯಲ್ಲು ಹಜುರಲ್ಲಿ ಯಿರಬೆಕಾದ್ದರ್ರಿಂದಲು

P. 3

L.

1. ಪುರ್ರೊಹಿತ ಲಿಂಗಾಶಾಸ್ತ್ರಿಗಳ ಮಗ ಚ್ಕಿವನಾದ್ದರ್ರಿಂದಲು ಆಚಾರ ವಿಚಾರದ ಕಾರ್ಯಗಳು ಯಿವರ್ರಿಂದಾ ಸಾ
2. ಗತ್ಕದಲ್ಲವಾಗಿ ಮಠದ ಕಾರ್ಯಗಳ ಬಗ್ಯೆ ಶ್ರೀ ಸ್ವಾಮಿಯವರ್ರು ಅಪಣೆ ಕೊಟ ವಿವರಾ ಹಜುರಲ್ಲಿ ತ್ತಿಳಶಿ ಹಜುರ್ರಿಂ
3. ದಾ ಸಂನ್ನಿಧಾನಕ್ಕೆ ಶೃತಪಡ್ಸಿ ತ್ಕದಕ್ಕೆಲ್ಲಾ ಶ್ರೀಮಠದ ಕಡೆಯಿಂದಾ ಮೊಕಾಮುಗಳಾಗಿ ಯಿರ್ರುವಂತ್ತೆ ಅರಮನೆ ಪು
4. ರೊಹಿತರ್ರಿಗೆ ನೆಮಕಾ ಮಾಡ್ಸಿ ಶ್ರೀಮಠದ ಕಾರ್ಯಗಳು ಸರಾಗವಾಗಿ ನಡಿಯಬೆಕಾದ್ದರ್ರಿಂದಾ ಆಚಾರ ವಿಚಾರ
5. ದ ಕೆಲಸಕ್ಕೆ ತ್ಕ ಜನ ಯಿರಬೆಕೆಂದ್ದು ಪುರ್ವದಲ್ಲಿ ವಿಚಾರ್ರಿಶಿಕೊಳುತ್ತಾ ಯಿದ್ದ ಸುಂದರಕಾಂಡ ಸುಬಾಶಾಸ್ತ್ರಿಯಿಂ
6. ದಾ ವಿಚಾರಣೆ ಕಾರ್ಯಗಳು ಆಧಿತೆಂದ್ದು ನೆಮಕಾ ಮಾಡ್ಸಿ ಯಿಧೆ ಸ್ವಾಮಿಯವರು ಅಪಣೆ ಕೊಟ ಮೆರ್ರೆಗೆ ನಡಸಲ್ಲಿಲ್ಲವೆಂ
7. ದ್ದು ಚಿತ್ತಕೆ ತೊರ್ರಿತ್ತು ಮುಖ್ಯಶಿಷ್ಯರಾದ್ದರ್ರಿಂದಾ ಬಿಂನಹಂ ಮಾಡಿ ಯಿಧೆ ಅಥವಾ ಮಠದಿಂದಾಲೆ ಯಿಂನ್ಯಾರ್ರಿ
8. ಗಾದರ್ರೂ ಅಪ್ಪಣೆ ಕೊಟ್ಟು ಕಳುಹ್ಸುವದಾದಲ್ಲಿ ಆಚಾರವಿಚಾರದ ವಿಚಾರಣೆ ಮಾಡಿಕೊಂಡಾರ್ರು ಶ್ರೀಸ್ವಾಮಿಯ
9. ವರ್ರು ಅಪ್ಪಣೆ ಕೊಟ್ಟು ಕಳುಹಿದ ಫಲಮಂತ್ರಾಕ್ಷತ್ತೆ ಶಿರಸಾವಹ್ಸಿಕೊಂಡದಾಯಿತ್ತು ನಿರಂತ್ತರದಲ್ಲು ಸರಕಾರ
10. ದ ಶ್ರೆಯಃ ಪ್ರಾರ್ಥನೆ ಮಾಡುತ್ತಾ ಯಿರ್ರುವಲ್ಲಿ ಬಿಂನಹಂ ಮಾಡತ್ಕದೆನು ಯಿದೆ ಯಿತ್ಯಾದಿ ವಿವರಗಳಂನ್ನು ಚಿತ್ತದಲ್ಲಿ
11. ಪರಾಂಬರ್ರಿಸಿ ಶ್ರೀ ಸ್ವಾಮಿಯವರ ತಪೊಸಾಂಬ್ರಾಜ್ಯಾದಿ ವೈಭವಂಗಳಿಗೆ ಅಪ್ಪಣೆ ಕೊಟ್ಟು ಕಳುಹ್ಸಿತ್ಕದು ।

Scanned by CamScanner

12. ತ್ತಾರ್ರಿಖ ೩೦ ನೆ ಮಾಹೆ ಡಿಶೆಂಬರ ಸನ್ ೧೮೨೪ ನೆ ಯಿಸವಿ । ಖತ್ತ ಅಪ್ಪಾಜಿರಾವ
ಮುನಷಿ ಹಜೂರ್ರು ಪೂರ
13. ನೂರ್ರು ಇಂತಿ ವಿಜ್ಞಾಪನಾ ರ್ರುಜು ಶ್ರೀ ಕೃಷ್ಣ

Summary : A *binnavattaḷe,* dated 30th December, 1824, from Krisṇarāja Oḍeyar to *Śrī* Narasimha Bhāratī *Swāmīji*, the disciple of *Śrī* Abhinava Sacchidānanda Bhāratī *Swāmīji* of Śṛiṅgēri. The king informed the *Guru,* that since the son of Liṅgā Śāstry, *purōhita* in the Mysore palace, was still a small boy, the duty of *āchāra-vichāra* was entrusted to Sundarkāṇḍa Subā Śāstry. However, the king further requested that he would gracefully accept a person recommended by the *Guru* for the said duty.

172

L.

ಶ್ರೀ

1. ಕೃಷ್ಣರಾಜ ವಡಯರವರು
2. ವ್ಯಯ ಸಂವತ್ಸರದ ಭಾದ್ರಪದ ಶು ೧೧ ಮಂಗಳವಾರದ
3. ಲ್ಲು ಶ್ರೀಮತು ॥ ॥ ಅರಮನೆ ಶೀಮೆ ಗಡಿಗಳ ಅಮಲದಾ
4. ರ ಕಿಲಿದಾರ ಸುಂಕದವರ್ರಿಗೆ ಸಹ ಬರಶಿಕಳುಹಿದ ನಿರ್ರೂಪ ಅ
5. ದಾಗಿ ಶ್ರಿಂಗೆರ್ರಿ ಶ್ರೀಮಠಕ್ಕೆ ಮಾಫಿ ಜಿನಸು ವಜನಿ ಜಿನಸು ಅದ
6. ದಿ ಜಿನಸು ನವರಾತ್ರೆ ಉತ್ಸವಕ್ಕೆ ಜವಳಿ ಸಹ ಮಠದವರು ಖರ್ರಿ
7. ದಿ ಮಾಡಿ ತೆಗದುಕೊಂಡು ಹೊಗುವಲ್ಲಿ ಮಠದ ಪಾರ್ರುಪತ್ಯಗಾರ್ರ
8. ಯಾದಾಸ್ತು ಮೆರೆಗೆ ಸುಂಕಾ ಕೆಳದೆ ಬಿಡುತ್ತಾ ಬರುವದು ತಾ
9. ರ್ರಿಖ ೧೨ ನೆ ಮಾಹೆ ಶಪಟಂಬರ ಸನ್ ೧೮೨೬ ನೆ ಯಿಸವಿ ಖತ್ತ ಅಂ
10. ಣ್ಯೆಯ ಮುನಷಿ ಹಜೂರ್ರು ಶ್ರೀ ಕೃಷ್ಣ

Summary : A *nirūpa*, dated 12th September, 1826, from Krisṇarāja Oḍeyar to *amaldārs, killedārs* and toll-collectors. Accordingly, they were not to collect duty on provisions and cloth carried to the Śṛiṅgēri *Maṭha.*

173

P.

L.

ಶ್ರೀ

1. ಕೃಷ್ಣರಾಜ ವಡೆಯರವರು

2. ವ್ಯಯ ಸಂವತ್ಸರದ ಭಾದ್ರಪದ ಶು ೧೧ ಮಂಗಳವಾರದಲ್ಲು
3. ಶ್ರೀಮತು ॥ ॥ ಅರಮನೆ ಶೀಮೆ ಗಡಿಗಳ ಅಮಲದಾರ್ರ ಕಿಲಿ
4. ದಾರ್ರಿಗೆ ಬರಶಿ ಕಳುಹಿದ ನಿರ್ರೂಪ ಅದಾಗಿ ಶ್ರಿಂಗೆರಿ ಶ್ರೀಮಠದ
5. ಶಿಷ್ಯರ ಆಚಾರವಿಚಾರವಂನ್ನು ಮಾಡತಕ್ಕ ಬಗ್ಯೆ ಶ್ರೀಮಠದಿಂದ್ದಾ
6. ಸುಂದರಕಾಂಡದ ಸುಬ್ಬಾಶಾಸ್ತ್ರಿಗಳಿಗೆ ನೆಮಕವಾಗಿ ಯಿರುವದ
7. ರ್ರಿಂದ್ದಾ ಯಿ ಶಾಸ್ತ್ರಿಗಳ ಕಡೆಯವರು ನಿಂಮ್ಮ ನಿಂಮ್ಮ ತಾಲ್ಲುಕಗಳ
8. ಲ್ಲಿ ಶ್ರೀಮಠಕ್ಕೆ ಶೆರ್ರಿದ ಶಿಷ್ಯ ವರ್ಗದ ವರ್ಣಾಶ್ರಮದ ಜನರ ಆಚಾರ್ರ
9. ವಿಚಾರ್ರ ವಿಚಾರ್ರಿಶಿಕೊಂಡು ಶ್ರೀಮಠಕ್ಕೆ ಬರತಕ್ಕ ಚರಣ ಕಾಣಿಕೆ
10. ಅಗ್ರತಾಂಬೂಲ ದೀಪಾರಾಧನೆ ಕಾಣಿಕೆ ವಿಶೆಷ ಪ್ರಾಯಶ್ಚಿತ್ತ ಕಾಣಿ
11. ಕೆ ಮುಂತ್ತಾಗಿ ಮಾಮೂಲು ಮೆರ್ರೆಗೆ ಬರಮಾಡಿಕೊಳ್ಳುವಲ್ಲಿ ಮಠದ ಮ
12. ರ್ರ್ಯಾದೆ ಯಾರಾದರ್ರು ಅತಿಕ್ರಮಿಶಿ ನಡದವರ್ರಿಗೆ ಅವರು ಬಂದೊಬಸ್ತು
13. ಮಾಡಿಕೊಳ್ಳುವಲ್ಲಿ ಸಹ ನೀವು ಜನರ್ರಿಗೆ ಆಸರ್ರೆ ಕೊಡ ಕೆಲಸವಿಲ್ಲಾ

P. 2

L.

1. ತಾರ್ರಿಖ ೧೨ ನೆ ಮಾಹೆ ಶಪಟಂಬರ ಸನ್ ೧೮೨೬ ನೆ ಯಿಸವಿ ಖತ್ತ ಅಂಣ್ಯೆ
2. ಯ ಮುನಷಿ ಹಜೂರ್ರು ಶ್ರೀ ಕೃಷ್ಣ

Summary : A *nirūpa*, dated 12th September, 1826, from Krisṇarāja Oḍeyar to *amaldārs* and *killedārs*. While the authorised representatives of Sundarkāṇḍa Suba Śāstry, were making proper *bandōbast* of such disciples who failed to pay the time-honoured *charaṇa-kāṇike, agratāmbūla, dīpārādhane-kāṇike, Viśēṣa-prāyaschitta kāṇike*, the *amaldārs* and *killedārs* were not to support such culprits. However, *kāṇike* was collected from the disciples of the *Śrī-Maṭha.*

174

P.

L.

ಶ್ರೀ

1. ಕೃಷ್ಣರಾಜ ವಡಯರವರ್ರು
2. ಸರ್ವಜಿತ್ತು ಸಂವತ್ಸರದ ಚೈತ್ರ ಬ ೧ ಗುರುವಾರದಲ್ಲು ಶ್ರೀಮತ್ತು ॥
3. ॥ ಶ್ರಿಂಗೆರ್ರಿ ಮಠದ ಪಾರ್ರುಪತ್ತೆಗಾರ ಬಿಷ್ಟೈ ಶಾಸ್ತ್ರಿಗಳಿಗೆ ಬ
4. ರಶಿ ಕಳುಹಿದ ನಿರ್ರೂಪಾ ಅದಾಗಿ ಚಿಕ್ಕಬಳ್ಳಾಪುರದ ನರಹರ್ರಿಶಾ
5. ಸ್ತ್ರಿ ಪ್ರತಿವಾದಿ ಬುಚಭಟ್ಟ ಯಿವರ್ರಿಬ್ಬರ್ರ ಜಿಂದಗಿ ವಿಭಾಗಕ್ಕೆ ಕಮಿ

Scanned by CamScanner

6. ಟಿಯಲ್ಲಿ ಪೈಸಲು ಆದ್ದು ಯಿಲ್ಲಿ ಸಮುಖದ ವಿದ್ವಾಂಸರ್ರು ತೀರ್ವಾ(ನ)
7. ಮಾಡಿದ್ದ ನೊಡಿ ವಾದಿಪ್ರತ್ತಿದಿರ್ರು ಕಬೂಲು ಆಗಲ್ಲಿಲ್ಲಾ ಯಿವರ ಮೊ
8. ಕದ್ದಮೆ ಪಿರ್ಯ್ಯಾದು ಕಚೆರ್ರಿ ಮಾರ್ರಿಪತ್ತ ರ್ರುಬರ್ರು ಶ್ರುತವಾದ್ದ
9. ರ್ರಿಂದ್ದಾ ಕಟ್ಲೆ ಮಾಡಿಶಿ ಯಿದಿತ್ತು ಯಿವರ ಮಠಕ್ಕೆ ಕಳುಹ್ಸಿ
10. ಯಿಥೆಯಾಗಿ ಶ್ರೀ ಸ್ವಾಮಿಯವರ್ರಿಗೆ ಅರ್ರಿಕೆ ಮಾಡಿ ಕಮಿಟಿಯ
11. ಲ್ಲಿ ಆದ್ದು ಪೈಸಲು ನಾಮಾ ವಿದ್ವಾಂಸರ್ರು ಮಾಡಿದ ತೀರ್ವಾನ ಸಹ ಅ
12. ಡ್ಡಿ ಯಿಡದೆ ವಾದಿಪ್ರತ್ತಿವಾದಿರ ಯಿಟ್ಟುಕೊಂಡು ವಾಜಬಿ ಯಿಥೆ ಆ

P. 2

L.

1. ಪ್ರಕಾರ ಪೈಸಲು ಮಾಡಿ ನಿವು ಪೈಸಲು ಮಾಡಿದ ಪ್ರಕಾರ್ರ ನಡದು
2. ಕೊಳ್ಳುತೆವೆಂಬದಾಗಿ ವಾದಿ ಪ್ರತ್ತಿವಾದಿ ಕಡೆಯಿಂದ್ದಾ ರಾಜೀನಾ
3. ಮಾ ತೆಗದುಕೊಂಡು ಸದರ ಹಾಪಿಸ್‌ನಲ್ಲಿ ಪೈಸಲ ಮಾಡಿದ ಪೈಸಲು
4. ನಾಮಾ ರಾಜೀನಾಮಾ ಸಹ ಹಜೂರ್ರಿಗೆ. ಕಳುಹಿಸುವದು
5. ತಾರ್ರಿಖು ೧೨ ನೆ ಮಾಹೆ ಯಪ್ರಿಲ ಸಂನ್ ೧೮೨೭ ನೆ ಯಿಸವಿ ಖತ್ತ ರಾ
6. ಮೈಯ ಮುನಷಿ ಹಜೂರ್ರು ಶ್ರೀ ಕೃಷ್ಣ

Summary : A letter, dated 12th April, 1827, from Krisṇarāja Oḍeyar to Bisṭai Śāstry, *pārupatyagār* of the Śṛiṅgēri *Maṭha*. The king ordered the *pārupatyagār* to settle the dispute between Narahari Śāstry and Bucha Bhaṭṭa, regarding property, and despatch *faisal nāmā* and *rājīnāma* to the Hajūr.

175

P. 1

L.

1. ಶ್ರೀಮತ್ಪರಮಹಂಸ ಪರ್ರಿವ್ರಾಜಕಾಚಾರ್ಯ್ಯವರ್ಯ್ಯ ಪದವಾಕ್ಯ ಪ್ರಮಾಣ
2. ಪಾರಾವಾರ ಪಾರ್ರಿಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ
3. ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೊಗಾನುಷ್ಠಾನ ನಿಷ್ಠ ತಪಶ್ಚಕ್ರವರ್ತ್ಯನಾದ್ಯ
4. ವಿಛಿಂನ ಗುರುಪರಂಪರಾಪ್ರಾಪ್ತ ಷಡ್ದರ್ಶಸ್ಥಾಪನಾಚಾರ್ಯ್ಯ ವ್ಯಾಖ್ಯಾನ ಸಿ
5. ಂಹಾಸನಾಧೀಶ್ವರ ಸಕಲ ನಿಗಮಾಗಮ ಸಾರಹೃದಯ ಸಾಂಖ್ಯತ್ರಯ
6. ಪ್ರತಿಪಾದಕ ವೈದಿಕಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರಾದಿ ರಾಜಧಾ

7. ನೀ ವಿದ್ಯಾನಗರ ಮಹಾರಾಜಧಾನಿ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾ
8. ಚಾರ್ಯ್ಯ ಶ್ರೀಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ ರೃಷ್ಯ
9. ಶ್ರುಂಗ ಪುರವರಾಧೀಶ್ವರ ತ್ತುಂಗಭದ್ರಾತಿರವಾಸ ಶ್ರೀಮದ್ವಿದ್ಯಾಶಂಕ
10. ರ ಪಾದಪದ್ಮಾರಾಧಕ ಶ್ರೀಮದಭಿನವ ಸಚ್ಚಿದಾನಂದ ಭಾರತಿ ಸ್ವಾ
11. ಮಿ ಗುರುಕರಕಮಲ ಸಂಜಾತ ಶ್ರುಂಗೆರ್ರಿ ಶ್ರೀನರಸಿಂಹ ಭಾರತೀ ಸ್ವಾಮಿ
12. ಗಳವರ ಸಂನಿಧಾನಂಗಳಿಗೆ ।

P. 2

L.

1. ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯ ಮಾನ ನಿಖಿಲ ದೇಶಾವತಂಸ ಕರ್ನಾಟಕ ಜನಪದ
2. ಸಂಪದಧಿಷ್ಠಾನಭೂತ ಶ್ರೀಮನ್ಮಹಿಶೂರ ಮಹಾಸಂಸ್ಥಾನ ಮಧ್ಯ ದೆದಿಪ್ಯಮಾನಾ ವಿಕಲ ಸುಧಾ
3. ಕರ ಕುಲತ್ರ ಮಾನತ ರಾಜಕ್ಷಿತಿಪಾಲ ಪ್ರಮುಖ ನಿಖಿಲ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂ
4. ಡಲಾನುಭೂತ ದಿವ್ಯ ರತ್ನಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೆಶ್ವರ ಪ್ರೌಢ ಪ್ರ
5. ತಾಪಾಪ್ರತ್ತಿಮ ವೀರನರಪತ್ತಿ ಬಿರುದಂತೆಂಬರ ಗಂಡ ಲೊಕೈಕವೀರ ಯದುಕುಲ ಪಯಃ ಪಾರಾವಾರ
6. ಕಲಾನಿಧಿ ಶಂಖಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೆರುಂಡ ಧರಣೀವರಾಹ
7. ಹನುಮದ್ಗರುಡ ಕಂಠಿರವಾದ್ಯನೆಕ ಬಿರುದಾಂಕಿತ ಮಹಿಶೂರ ಶ್ರೀಕೃಷ್ಣರಾಜ ವಡಯರ
8. ವರು ಸಾಷ್ಟಾಂಗ ನಮಸ್ಕರ್ರಿಸಿ ಮಾಡುವ ಬಿಂನಹಾ । ಸರ್ವಜಿತ್ಸಂವತ್ಸರದ ಮಾಘ ಶುಧ ೧೦ ಸ್ಥಿ
9. ರವಾರ ನಿರುಧಕೆ ಸ್ವಾಮಿಗಳವರ ಪರಮಾನುಗ್ರಹದಿಂದಾ ನಾವೂ ಕ್ಷೆಮದಲ್ಲಿ ಯಿಥೆವೆ ಸ್ವಾಮಿಗಳ
10. ವರ ತಪಃ ಸಾಂಬ್ರಾಜ್ಯ ವೈಭವಾತಿಶಯಂಗಳಿಗೆ ಅನವರತ ಶ್ರೀಮುಖವಂನು ಅಪ್ಪಣೆ ಕೊಟ್ಟು
11. ಕಳುಹಿಸುವಂತೆ ಮಾಡಿಸಬೆಕು । ಸಾಂಪ್ರತ ಸ್ವಾಮಿಯವರ ಸಂದರ್ಶನವಾಗಿ ಬಹಳ ದಿವಸವಾ
12. ದ ಪ್ರಯುಕ್ತ ದರ್ಶನಾಪೇಕ್ಷೆಯಿಂದಾ ಅರ್ರಿಕೆ ಮಾಡಿ ಯಿಥೆ ಸಂಸ್ಥಾನ ಸಹಾ । ಮೆಶೂರ್ರಿಗೆ ಚಿತ್ತೈಸ

Scanned by CamScanner

13. ತಕ ಬಗ್ಯೆ ಮಾರ್ಗದಲ್ಲಿ ಪದಾರ್ಥ ಮುಂತಾಗಿ ಕೊಟ್ಟು ಮರ್ರ್ಯಾದೆಯಿಂದಾ ನಡದುಕೊಳುವಂತ್ತೆ ಅ

P. 3

L.

1. ರಮನೆ ಸಿಮೆ ಗಡಿಗಳ ಆಮಿಲ ಕಿಲ್ಲೆದಾರ್ರಿಗೆ ರಹದಾರ್ರಿ ನಿರೂಪವಂನ್ನು ಕೊಟ್ಟು ಹರಕಾರಂನ ಕಳು
2. ಹಿಸಿ ಯಿಥೆ ಜಾಗ್ರುತೆಯಿಂದ್ದಾ ದಿಗ್ವಿಜಯಾ ಮಾಡಿ ಅನುಗ್ರಹಾ ಮಾಡತಕದ್ದು ಸಂನಿಧಾನಂಗಳಿ
3. ಗೆ ವಪಿಸತಕ್ಕ ಬಗ್ಯೆ ಯಿಾ ಹರಕಾರನ ಕೈಯಲ್ಲಿ ಶಾಲು ಜೊಡಿ ಕಳುಹಿಸಿ ಯಿರ್ರುವದಂನು ಸ್ವೀಕರ್ರಿ
4. ಸಿ ಸೀಘ್ರುವಾಗಿ ಚಿತ್ತೈಸುವ ವಿದ್ಯಮಾನಕೆ ಶ್ರೀಮುಖವಂನು ಅಪ್ಪಣೆಕೊಟ್ಟು ಕಳಹಸುವ ಹಾಗೆ
5. ಮಾಡಿಸಬೆಕ್ಕು ತಾರ್ರಿಕು ೨೬ ನೆ ಮಾಹೆ ಜನವರ್ರಿ ಸಂನ್ ೧೮೨೮ ನೆ ಯಿಸವಿ ಖತ್ತ ಸುಬರಾವು
6. ಮುನಷಿ ಹಜೂರ್ರು ಇಂತಿ ಬಿಂನಹಾ ಸ್ವಾಮಿ

Summary : The *binnavattaḷe* begins with the usual titiles of the Śṛiṅgēri *Jagadguru*. It is a *binnavattaḷe* dated 26th January 1828, from Krisṇarāja Oḍeyar to *Śrī* Narasimha Bhāratī *Swāmiji.* The king invited the *Guru* to Mysore. He informed the *Guru* that he had issued *rahadāri-nirupa* to *āmīls* and *killedārs*, ordering them to provide the required provisions to *Swāmiji's* retinue and extend a warm welcome at their respective places. He requested the *Guru* to accept a pair of *shawl* sent by him and issue a *śrīmukha*.

176

P:

L.

1. ಕೃಷ್ಣರಾಜ ವಡಯರವರ್ರು
2. ಸರ್ವಜಿತ್ಸಂವತ್ಸರದ ಮಾಘ ಶು ೧೦ ಸ್ಥಿರವಾರದಲ್ಲು ಶ್ರೀ ಮತ್ತು ॥ ॥
3. ಅರಮನೆ ಸೀಮೆ ಗಡಿಗಳ ಅಮಲದಾರ ಕಿಲೆದಾರ ಸಾಯ್ರಿ ಯಿಲಾಖೆಯವರ್ರಿಗೆ ಸಹಾ ಬರಸಿ

4. ಕಳುಹಿದ ನಿರೂಪಾ । ಅದಾಗಿ ಶ್ರಿಂಗೆರ್ರಿ ಶ್ರೀಸ್ವಾಮಿಗಳವರ್ರು ಶ್ರಿಂಗೆರ್ರಿಯಿಂದಾ ಮಹಿಶೂರ್ರಿಗೆ ದಿ
5. ಗ್ವಿಜಯಾ ಮಾಡಿ ಬರ್ರುವದರಯಿಂದ್ದಾ ನಿಂಮು ನಿಂಮು ಗಡಿಗಳ ಮಾರ್ಗವಾಗಿ ಬರ್ರುವ ವರ್ತಮಾ
6. ನಾ ತ್ತ್ರಿಳದು ಅಸೆಷ ಮಹಾಜನಂಗಳು ಅಮಲದಾರ ಕಿಲೆದಾರ ಶಟಿ ವರ್ತಕರ್ರು ಬಾಜಾ ಬಜಂತ್ರಿ ಸಹಾ
7. ಯಿಸ್ತ್ತಕಬಾಲ ಯಿದ್ದು ಶ್ರೀಗಳವರ್ರು ಬರ್ರುತಲೆ ಬಹಳ ಮರ್ರ್ಯಾದೆಯಿಂದ್ದಾ ಕಾಣಿಸಿಕೊಂಡು ಕರತಂ

P. 2

L.

1. ದ್ದು ವಳ್ಳೆ ಜಾಗಾದಲ್ಲಿ ಯಿಳಿಸಿ ಶ್ರೀಗಳವರ ಸಂಗಡ ಯಿರ್ರುವ ಬ್ರಾಂಹ್ಮರ್ರು ಜನ ೩೫೦ ಮುಂನೂರ್ರೈವತು
2. ಶೂದ್ರುಜನ ೨೦೦ ಯಿಂನೂರ್ರು ಪಾಲಖಿ ೪ ನಾಲ್ಕು ಆನೆ ೪ ನಾಲ್ಕು ಕುದುರ್ರೆ ೨೦ ಯಿಪತ್ತು ತಟ್ಟು ೪೦ ನಾಲ್ವತು ಯತು
3. ೧೦೦ ನೂರ್ರು ಭೊಯಿಜನ ೬೦ ಅರವತ್ತು ಸಹಾ ಬರ್ರುವದರ ಯಿಂದ್ದಾ ಯಿಾ ೮ ರ ದಿನ ವಂದಕ್ಕೆ ಸರಕಾರದ ಯಿ
4. ಂದಾ ಅಕಿ ಪಕಾಸೆರ್ರು ೫೦೦ ಅಯಿನೂರ್ರು ಯಿದಕೆ ತಕ ಪದಾರ್ಥ ಅವಲು ಲವಾಜಮೆ ಮೆರ್ರೆ ಕೊಡ್ಸಿಕೊಟ್ಟು
5. ಸಿವಾಯಿ ಯತ್ತು ಕುದುರ್ರೆ ರಾತಬ ಬಗ್ಯೆ ಹುರ್ರುಳಿ ಪಕಾಸೆರ್ರು ೨೦೦ ಯಿಂನೂರ್ರು ದುಡು ೨೦೦ ಯಿಂನೂರ್ರು ಯ
6. ತ್ತು ಕುದುರ್ರೆ ಮೆವಿಗೆ ತಕಷ್ಟು ಹುಲು ಕಟಿಗೆ ಕುಂಬಾರ ನಗ ಮುಂತಾಗಿ ಕೊಡ್ಸಿಕೊಟ್ಟು ಶ್ರೀಮಠದ ಪಾ
7. ರಪತ್ಯಗಾರನ ಸಂಗಡ ಸದರ ಸಾಮಾನು ಮುಂತ್ತಾಗಿ ಸಂದ ಬಗ್ಯೆ ರಸಿತ್ತಿ ತೆಗದುಕೊಂಡು ಕ್ರಯ ವಿವರ
8. ದ ಪಟ್ಟಿ ಹಜೂರ್ರಿಗೆ ಕಳಹ ಸುವದ್ದು ಸಾಮಾನಿನ ಸಂಗಡ ಗಡಿಯಿಂದಾ ಮುಂದಣ ಗಡಿವರ್ರಿಗೂ
9. ಹತ್ಯಾರ ಸುದಾ ಯಿಪತ್ತು ಜನ ಕಂದಾಚ್ಯಾರದವರ ಕೊಡುತ್ತಾ ಸುಂಕಕೆ ಅಟಕಾಯಿಸದೆ ಬಿಡುವದ್ದು ಶ್ರೀ
10. ಯವರ್ರು ದಯಮಾಡತಕ ಮಜಲ ವಿವರಾ । ಶ್ರಿಂಗೆರ್ರಿಯಿಂದಾ ಬಗುಂಜಿಕಟ್ಟೆ ಬಾಳೆಹೊಂನೂ
11. ರ್ರು ಖಾಂಡ್ಯ ೧ ಬಸವನಕೊಟೆ ೧ ವಸ್ತಾರ್ರೆ ೧ ಚಿಕಮುಗಳೂರ್ರು ೧ ಬೆಲೂರ್ರು ೧ ಹಳೆಬಿಡು ೧ ಹಾಸನಾ ೧ ಮಾವಿ

Scanned by CamScanner

12. ನಕೆರ್ರೆ ೧ ನರಸಿಪುರಾ ೧ ರಾಮನಾಥಪುರ್ರ ೧ ಹನಸೊಗೆ ೧ ಯಡತ್ತೊರೆ ೧ ಲಕ್ಷ್ಮಣಕಟೆ ೧ ಯಿಾ ಬಗೆ ಹದಿನೈ

13. ದು ಮಜಲಗಳಲ್ಲಿಯು ಸದರ ಅಪ್ಪಣೆ ಕೊಡ್ಸಿ ಯಿರ್ರುವ ಮೆರ್ರೆ ಪದಾರ್ಥ ಮುಂತ್ತಾಗಿ ಕೊಟ್ಟು

P. 3

L.

1. ಸರಬರಾಯಿ ಮಾಡಿ ಶ್ರೀಗಳವರ್ರು ಮಜಲು ಯಿಂದ್ದಾ ಮುಂದಣ ಮಜಲ್ಲಿಗೆ ಸಾಗಿಬಂದ ಬಗ್ಯೆ ಅರ್ಜಿ
2. ಬರದು ಕಳಹಸುವದ್ದು ತಾರ್ರಿಕು ೨೬ ನೆ ಮಾಹೆ ಜನವರ್ರಿ ಸಂನ್ ೧೮೨೮ ನೆ ಯಿಸವಿ ಖತ ಸುಬರಾ
3. ವು ಮುನಷಿ ಹಜೂರ್ರು ಸದರ್ರಿಮೆರ್ರೆಗೆ ಪದಾರ್ಥ ಕೊಡ್ಸುವದು
4. ಶ್ರೀಕೃಷ್ಣ

Summary : On the 26th January 1828, Krisṇarāja Oḍeyar issued *nirupas* to *amaldārs* and *killedārs*, ordering them to give a warm wel-come to the Śṛiṅgēri *Swāmīji* at their respective places and provide the required provisions. A receipt was to be obtained from the *pārupatyagār* of the Śṛiṅgēri *Maṭha*, for having received the provisions. During this Mysore tour, the *Swāmīji* was accompanied by 350 Brāhmaṇas, 200 Śūdras, 4 palanquins, 4 elephants, 20 horses, 40 ponies, 100 oxen, and 60 Bōyis. Bagunjikaṭṭe, Bāḷehonnūru, Khāṇḍya, Basavanakōṭe, Vastāre, Chikkamagaḷūru, Bēlūru, Haḷebīḍu, Hāsana, Māvinakere, Narasīpura, Rāmanāthapura, Hansoge, Yaḍatore and Lakṣmaṇkaṭṭe were the 15 halting places of the *Swāmīji*, while he was to travel from Śṛiṅgēri to Mysore.

177

P. 1

L.

ಶ್ರೀ

1. ಕೃಷ್ಣರಾಜ ವಡಯರವರ್ರು
2. ಸರ್ವಜಿತು ಸಂವತ್ಸರದ ಫಾಲ್ಗುಣ ಶು ೩ ಸೊಮವಾರದಲ್ಲು ಶ್ರೀಮತ್ತು
3. ॥ ॥ ಅರಮನೆ ಶಿಮೆ ಗಡಿಗಳ ಆಮಿಾಲ ಕಿಲ್ಲೆದಾರ್ರಿಗೆ ಕಳುಹಿದ
4. ನಿರೂಪ ಅದಾಗಿ ಶ್ರಿಂಗೆರ್ರಿ ಸ್ವಾಮಿಗಳವರ್ರು ಮೈಸೂರ್ರಿಗೆ ದಯಮಾಡುವದ

5. ರ್ರಿಂದಾ ಮಾರ್ಗದ ಮಜಲುಗಳಲ್ಲಿ ಸಾಮಾನ್ನು ಮುಂತ್ತಾದ್ದು ಕೊಟ್ಟು ಸರಬರಾಯಿ
6. ಮಾಡುವಂತ್ತೆ ರಹದಾರ್ರಿ ಅಪ್ಪಣೆ ಕೊಡ್ಸ ಯಿಧಿ ಯಷ್ಟೆ ಶ್ರೀಸ್ವಾಮಿಗಳವರ್ರು
7. ಫಾಲ್ಗುಣ ಶು ೭ ಶುಕ್ರವಾರ ದಿವ್ಸ ಮೈಸೂರ್ರಿಗೆ ತಲಪಬೆಕಾದರ್ರಿಂದ್ದಾ ಜಾಗ್ರ
8. ತ್ತೆಯಿಂದ್ದಾ ದಯಮಾಡುತ್ತಾರಾಗಿ ನಿಂಮ ನಿಂಮ ಗಡಿಗಳ ಮಾರ್ಗವಾಗಿ ಬಂದು
9. ಇಳದ ಮಜಲನಲ್ಲಿ ಮೊದಲು ಕಟ್ಲೆ ಮಾಡ್ಸ ಯಿರ್ರುವ ರಹದಾರ್ರಿ ಮೆರ್ರೆಗೆ
10. ಸಾಮಾನ್ನು ಮುಂತ್ತಾದು ಕೊಟು ಬಾಹಳ ಮರ್ರಿಯಾದೆಗುಡಿ ನಡದುಕೊಂಡು
11. ಸಾಮಾನ್ನು ಮುಂತ್ತಾಗಿ ಸಾಗತ್ಕ ಬಗ್ಯೆ ಮಜೂರ್ರಿ ಆಳು ಯೆತ್ತು ಕುದುರ್ರೆಗೆ ಸಹಾ
12. ಸರಕಾರದಿಂದ ಮಜುರ್ರಿಕೊಟು ಸಾಮಾನಿಗೆ ತ್ಕಷ್ಟು ಆಳು ಯೆತ್ತು ಭಂಡಿ
13. ಸಹಾ ವದಗಿಶಿಕೊಟ್ಟು ಜಾಗ್ರತೆಯಿಂದ್ದಾ ಶ್ರೀಸ್ವಾಮಿಗಳವರ್ರು ದಯಮಾ
14. ಡುವಂತ್ತೆ ತ್ತಿಳಶಿ ಗಡಿಯಿಂದಾ ಗಡಿ ವರ್ರಿಗು ನಿವೆ ಸಂಗಡ ಬಂದು ಮುಂದಿನ
15. ಮಜಲ್ಲಿಗೆ ತಲಪ್ಸಿ ಬರ್ರುವ ಮಾರ್ಗದಲ್ಲಿ ಯಿಳದ ಮಜಲನಲ್ಲಿ ಸಹಾ ಕಳ್ಳ

P. 2

L.

1. ಕಾಕರ ವುಪದ್ರ ತಟದಂತ್ತೆ ಖಬರದಾರ್ರಿ ಮಾಡ್ಸಿ ಲೆಶ ನುಂನ್ಯತ್ತೆ ಬಾರದ
2. ರ್ರಿತ್ತಿಗೆ ಸರಬರಾಯಿ ಮಾಡಿಕೊಟು ಮುಂದಕ್ಕೆ ದಯ ಮಾಡಿದ ವಿವರಕ್ಕೆ
3. ಅರ್ಜಿ ಬರದು ಕಳುಯಿಸ್ಸುವದು ತಾರ್ರಿಕು ೧೮ ನೆ ಮಾಹೆ ಫೆಬರವರ್ರಿ ಸಂನ್ ೧೮೨೮
4. ನೆ ಯ್ಸಿವಿ ಖತ್ತ ಹೊಂನಾವರ ಕೃಷ್ಣರಾವ ಮುನಷಿ ಹುಜುರ್ರು ಪುರನ್ನು
5. ರ್ರು ಶ್ರೀಕೃಷ್ಣ

Summary : On the 18th of February, 1828, Krisṇarāja Oḍeyar issued *nirupas* to *āmīls* and *killedārs*, ordering them to provide provisions to the *Swāmīji's* retinue, at all halting places, while the latter was to move from Śṛiṅgēri and reach Mysore on Friday, 7th day of the bright half of Fālguṇa, Sarvajitu *saṁvatsara*.

178

L.

ಶ್ರೀ

1. ಕೃಷ್ಣರಾಜ ವಡಯರವರ್ರು
2. ಸರ್ವಜಿತು ಸಂವತ್ಸರದ ಫಾಲ್ಗುಣ ಶುದ್ಧ ೧೧ ಅಂಗಾರಕವಾರದಲ್ಲು ಶ್ರೀಮತ್ತು
3. ಅರಮನೆ ಶಿಮೆ ಗಡಿಗಳ ಆಮಿಲ ಕಿಲ್ಲೆದಾರಗೆ ಬರಶಿಕಳುಹಿದ ನಿರ್ರೂಪಾ ಅದಾಗಿ।
4. ಶ್ರೀ ಶ್ರಿಂಗೆರ್ರಿ ಸ್ವಾಮಿಗಳವರ್ರು ಮಹಿಸುರ್ರಿಗೆ ದಿಗ್ವಿಜಯ ಮಾಡುವದರ್ರಿಂದಾ ನಿಂಮ್ಮ ನಿಂ

Scanned by CamScanner

5. ಮ್ಮ ಗ(ಡಿ)ಗಳ ಮಾರ್ಗವಾಗಿ ಬಂದಲ್ಲಿ ಬಂದ ದಿನ ವಂದಕ್ಕೆ ದೆವರ್‍ರಿಗೆ ಪಂಚಾಮೃತ ನೈವೆದ್ಯ
6. ದ ಬಗ್ಯೆ ಹಂಣುಕಾಯಿ ದ್ರಾಕ್ಷೆ ಖರ್ಜುರಾ ಸಖರ್‍ರೆ ಲವಂಗ ಜಾಯಿಕಾಯಿ ಪತ್ರೆ
7. ಕಸ್ತೂರ್‍ರಿ ಕೆಶರ್‍ರಿ ಅರ್‍ರಿಸಿನ ಕ್ಕುಂಕಮ ಕರ್ಪುರ ಸಾಂಬ್ರಾಣಿ ಮುಂತ್ತಾದ್ದು ತಕದ್ದುಕೊ
8. ಟ್ಟು ಸಂದದಕ್ಕೆ ಶ್ರೀಮಠದ ಕಡೆಯಿಂದಾ ರಶಿದಿ ತೆಗದುಕೊಂಡು ಕ್ರಯ ವಿವರದ
9. ಪಟಿ ಹಜುರ್‍ರಿಗೆ ರವಾನೆ ಮಾಡುವದು ಶ್ರೀ ಸ್ವಾಮಿಯವರ್‍ರು ಶ್ರಿಂಗೆರ್‍ರಿಯಿಂದಾ ಮಹಿಸುರ್‍ರಿಗೆ
10. ದಯವಾಡುವಲ್ಲಿ ಸರಬರಾಯಿ ಬಗ್ಯೆ ವೊದಲು ರಹದಾರ್‍ರಿ ಅಪ್ಪಣೆ ಕೊಟ್ಟಿರುವದು ಸರ್‍ರಿಯ
11. ಷ್ಟೆ ಆ ರಹದಾರ್‍ರಿಯಲ್ಲಿ ಸದರ್‍ರಿ ಸಾಮಾನು ಕೊಳುವಂತ್ತೆ ದಾಖಲೆಯಿಲ್ಲದರ್‍ರಿಂದಾ ಯಿಾಗ ಅ
12. ಪ್ಪಣೆ ಕೊಟ್ಟಿರುವ ಮೆರ್‍ರಿಗೆ ನಡದುಕೊಳುವದು ತಾರ್‍ರಿಖ ೨೬ ನೆ ಮಾಹೆ ಫೆಬರವರಿ ಸನ್ ೧೮೨೮
13. ನೆ ಯ್ಸಿವಿ ಖತ್ತ ಅಪ್ಪಾಜಿರಾವ ಮುನಷಿ ಹಜುರ್‍ರು ಶ್ರೀ ಕೃಷ್ಣ

Summary : On 26th Feb. 1828, Krisṇarāja Oḍeyar issued *nirūpas* to *āmīls* and *killedārs*, ordering them to provide fruits, coconuts, grapes, date, sugar, cloves, leaves of bael tree, musk, saffron, turmeric, Kuṅkum, camphor, perfume, etc., to the retinue of the *Swāmīji*, in connection with *Panchāmṛita-naivēdya* offered to the deities, at the halting places, during the *Swāmīji's* travel from Śṛiṅgēri to Mysore. The receipt was to be obtained for having provided the said provisions.

179

P. 1

L.

ಶ್ರೀ

1. ಕೃಷ್ಣರಾಜ ವಡಯರವರ್‍ರು
2. ಸರ್ವಧಾರ್‍ರಿ ಸಂವತ್ಸರದ ಜ್ಯೆಷ್ಟ ಬ ೮ ಗುರುವಾರದಲ್ಲು ಶ್ರೀಮತು ॥ ॥
3. ಅರಮನೆ ಶಿಮೆ ಗಡಿಗಳ ಆಮಿಾಲ ಕಿಲ್ಲೆದಾರ್‍ರಿಗೆ ಬರಶಿಕಳುಹಿದ ನಿರ್‍ರುಪ ಅದಾ
4. ಗಿ ಶ್ರಿಂಗೆರ್‍ರಿ ಮಠದ ಶ್ರೀ ಸ್ವಾಮಿಗಳವರ ಆಗ್ನಾನುಸಾರವಾಗಿ ನಡದುಕೊಳತಕ್ಕ
5. ರಾಮಚಂದ್ರಪುರ ಹೊಂನೆಹಳಿ ತೀರ್ಥಹಳಿ ಹರಿಹರಪುರ ಮುಳುಬಾಗಿಲು
6. ಮುಂತಾದ ತುಂಡು ಮಠದವರು ಬಿರ್‍ರುದು ಬಾವಲಿ ಶ್ವೆತ ಛತ್ರ ಮಕರತೊರ
7. ಣ ಮೊದಲಾದ ಹೆಚ್ಚು ಕಟಡೆ(ಲೆ) ಬಿರುದುಗಳು ಹೆಚ್ಚು ಹವ್ಯಾಸ ಮಾಡಿಕೊಂಡು
8. ತ್ತಿರುಗುವದರ್‍ರಿಂದ ರಾಮಚಂದ್ರಪುರದ ಮಠದ ಬಿರ್‍ರುದು ಬಾವಲಿ ಶ್ರಿಂಗೆರ್‍ರಿ

9. ಮಠಕೆ ತೆಗದುಕೊಂಡು ಯಿರ್‍ರುವದು ಸರ್‍ರಿಯಷ್ಟೆ ಬಿರುದು ಬಾವಲಿಗಳು
10. ಶ್ರೀ ಶ್ರಿಂಗೆರ್‍ರಿ ಮಠಕೆ ಸಲತಕ್ಕದ್ದೆ ಹೊರತು ಸದರ್‍ರಿ ಬರದು ಯಿರುವ ತುಂ
11. ಡು ಮಠಗಳಿಗೆ ಯೆಂದಿಗು ಸಲತಕ್ಕದಲ್ಲ । ಶ್ರೀ ಶ್ರಿಂಗೆರ್‍ರಿಮಠದ ಶ್ರೀಪಾದ
12. ಪಿಠಕ್ಕೆ ಕಾಣಿಕೆ ಕಪ್ಪಾ ಕೊಟ್ಟು ಅಲ್ಲಿನ ಆಜ್ಞಾನುಸಾರವಾಗಿ ನಡಯು
13. ತ್ತಾ ಯಿರ್‍ರುವಲ್ಲಿ ಯಿಾಗ ನೂತನ ಪದ್ಧತಿ ನಡಸಬಾರದಲ್ಲ ಯಿಂನೂ ಯಾ
14. ರಾದರು ಯಿ ತುಂಡು ಮಠದ ಸನ್ಯಾಶಿಗಳು ತಂಮ ತಂಮ ಆಶ್ರಮಧರ್ಮ
15. ದಲ್ಲಿ ವಿಹಿತವಾಗಿ ಯಿರದೆ ಯಿಲ್ಲದ ಹವ್ಯಾಸ ಬಿರುದು ಬಾವಲಿಗಳು ಮಾಡಿ
16. ಕೊಂಡು ಮನಶ್ವಿ ನಡದಲ್ಲಿ ಶ್ರೀಮಠದವರು ವಿಚಾರ್‍ರಿಶಿ ಅದಕೆ ತಕ ಬಂದ್ದೊ
17. ಬಸ್ತು ಮಾಡಿಶ್ಯಾರ್‍ರು ಯಿಾ ವಿಚಾರವಾಗಿ ಶ್ರೀಮಠದವರು ನಿಂಮ ನಿಂ

P. 2

L.

1. ಮ ಸಂಗಡ ಹೆಳಿದಲ್ಲಿ ಯಿದಕ್ಕೆ ತಕ್ಕ ಬಂದ್ದೊಬಸ್ತು ಮಾಡಿಶಿಕೊಟ್ಟು ಆ
2. ಬಗೆ ಹೆಚ್ಚು ಕಟ್ಟಡೆ(ಲೆ) ಬಿರುದು ಬಾವಲಿಗಳ ಶ್ರೀಮಠಕೆ ಕೊಡಿಶಿಕೊಟ್ಟು
3. ಮುಂದ್ದೆ ಯಿಂಥಾ ಹವ್ಯಾಸ ಪದ್ಧತಿ ನಡಯದೆ ಶ್ರೀಮಠದ ಅಪ್ಪಣೆ ಪ್ರಕಾ
4. ರ ನಡದುಕೊಳ್ಳುವಂತೆ ಹೆಳುವದು ತಾರ್‍ರಿಕು ೫ ನೆ ಮಾಹೆ ಜುನ್ ಸನ್ ೧೮೨೮ ನೆ
5. ಯಿಸವಿ ಖತ್ತ ಕೊನೆ ಪ್ಪಯ ಮುನಶಿ ಹಜೂರ್‍ರು ಶ್ರೀ ಕೃಷ್ಣ

Summary : On the 5th May, 1828, Krisṇarāja Oḍeyar issued *nirūpas* to *āmīls* and *killedārs*, ordering them to make proper *bandōbast* by preventing the *Swamijis* of the branch *maṭhas* like Rāmachandrāpur, Honnehaḷḷi, Tīrthahaḷḷi, Hariharpur and Muḷubāgilu, from assuming undue titles and insignias, to which the Śṛiṅgēri *Maṭha* alone was entitled.

180

P. 1

L.

1. ಕೃಷ್ಣರಾಜ ವಡಯರವರ್‍ರು
2. ಸರ್ವಧಾರ್‍ರಿ ಸಂವತ್ಸರದ ಅಧಿಕ ಆಷಾಡ ಶು ೬ ಬುಧವಾರದಲ್ಲು ಶ್ರೀಮತ್ತು ॥ ॥
3. ಅರಮನೆ ಸೀಮೆ ಗಡಿಗಳ ಅಮಲದಾರ ಕಿಲೆದಾರ್‍ರಿಗೆ ಸಹಾ ಬರಸಿಕಳುಹಿದ ನಿರ್‍ರೂಪಾ ಅದಾಗಿ ಶ್ರಿಂಗೆರ್‍ರಿ
4. ಶ್ರೀ ಶ್ರೀಸ್ವಾಮಿಗಳವರ್‍ರು ಮಹಿಶೂರ್‍ರಿಗೆ ದಯಮಾಡಿ ಯಿದ್ದು ಪುನಹಾ ಶೃಂಗೆರ್‍ರಿಗೆ ಚಿತ್ತೈಸುವದರ ಯಿ

Scanned by CamScanner

5. ಂದ್ದಾ ನಿಂಮ ನಿಂಮ ಗಡಿಗಳ ಮಾರ್ಗವಾಗಿ ಬರ್ರುವ ವರ್ತಮಾನಾ ಯಿಟು ಅಸೆಷ ಬ್ರಾಂಹ್ಮರ್ರು ಅಮಲದಾ
6. ರ್ರು ಕಿಲೆದಾರ್ರು ಹರದೊ ಯಿಲಾಖೆ ಸಿರಸ್ತೆದಾರ್ರು ಶಟಿ ವರ್ತಕ ಬಾಜಾ ಬಜಂತ್ರಿ ಸಹಾ ಯಿಸ್ತಕಬಾಲ ಹೊ
7. ಗಿ ಯಿದು ಶ್ರೀಗಳವರ್ರು ಬರ್ರುತಲೆ ಬಹಳ ಮರ್ರ್ಯಾದೆಯಿಂದಾ ಕಾಣಿಸಿಕೊಂಡು ಸಂಗಡಲೆ ಬಂದು ವಳೆ

P. 2

L.

1. ಜಾಗಾದಲ್ಲಿ ಯಿಳಿಸಿ ಶ್ರೀಗಳವರ ಸಂಗಡ ಬರ್ರುವ ಬ್ರಾಂಹ್ಮರ್ರು ಜನ ೩೫೦ ಶೂದ್ರ ಜನ ೨೦೦ ಪಾಲಖಿ ೪ ಆನೆ ೪ ನಾಲ್ಕು ಕುದುರ್ರೆ ೨೦
2. ತಟ್ಟು ೪೦ ಯತ್ತು ೧೦೦ ನೂರ್ರು ಭೊಯಿ ಜನ ೬೦ ಸಹಾ ಬರ್ರುವದರಯಿಂದ್ದ ಯಿಳದ ದಿನ ವಂದಕೆ ಸರಕಾರದ ಯಿ
3. ಂದ್ದಾ ಬ್ರಾಂಹ್ಮರ ಸಂತರ್ಪಣೆ ಬಗ್ಗೆ ಪಕಾ ೩೦೦ ಮುಂನೂರ್ರು ಶೆರ್ರು ಅಕಿ ಯಿದಕೆ ತಕ ಪದಾರ್ಥ ಅವಲು ಲವಾಜಮೆ
4. ರ್ರೆ ಕೊಡಿಸುವದ್ದು ದೇವರ ಅಭಿಷೆಕದ ಬಗ್ಗೆ ಪಂಚಾಮೃತದ ಸಾಮಾನ್ನು ಹಾಲು ಮೊಸರ್ರು ತುಪ ಮುಂತ್ತಾಗಿ
5. ಶ್ರೀಮಠದ ಪಾರಪತ್ಯಗಾರನ ಯಾದಾಸ್ತು ಪ್ರಕಾರಾ ಕೊಡ್ಸಿಕೊಟ್ಟು ಸಂದಬಗ್ಗೆ ರಸಿತ್ತಿ ತಕೊಳುವದ್ದು ಆನೆ ರಾ
6. ತ ಆಳುಗಳ ಪಡಿ ಬಗ್ಗೆ ಸಹಾ ಪಕಾ 200 ಯಿಂನೂರ್ರು ಶೆರ್ರು ಅಕಿ ಚ್ಯಾಕರವಾನ ಆಳುಗಳ ಹಾಜರ ನೊಡಿಕೂಂಡು
7. ಜನ ವಂದಕೆ ವಂದು ದುಡು ಮೆರ್ರೆ ಹಾಜರ ಯಿಸಮಿಗೆ ತಕಷ್ಟು ದುಡು ಕೊಡುವದ್ದು ಶ್ರೀಮಠದ ಯತು ಕುದುರ್ರೆ ರಾತಬ ಬ
8. ಗ್ಗೆ ದಿನ ವಂದಕೆ ಹುರ್ರುಳಿ ಪಕಾಸೆರ್ರು 200 ಯಿಂನೂರ್ರು ಸಿವಾಯಿ ಹುಲು ಕಟಿಗೆ ಕುಂಬಾರನಗ ಮುಂತ್ತಾಗಿ ತ
9. ಕಷ್ಟು ಕೊಡ್ಸಿಕೊಟ್ಟು ಯಿಾ ಬಗೆ ಸಾಮಾನ್ನು ಯಾವತ್ತು ಸಂದ ಬಗ್ಗೆ ಶ್ರೀಮಠದ ಪಾರಪತ್ಯಗಾರನ ಕಡೆಯಿಂ
10. ದಾ ರಸಿತ್ತಿ ತೆಗದುಕೊಳುವದ್ದು ರಾತ್ರಿ ಯಿಳದ ಬಳಿ ಕಳ ಕಾಕರ ವುಪದ್ರುವ ಯಿಲದಂತ್ತೆ ಆಳುಗಳ ಯಿ
11. ಟ್ಟು ಖಬರದಾರ್ರಿ ಮಾಡಿಸುವದ್ದು ಸಾಮಾನು ಹೊರತಕ ಬಗ್ಗೆ ಗಡಿಯಿಂದಾ ಮುಂದಣ ಗಡಿವರ್ರಿಗೂ
12. ಸರಕಾರದಯಿಂದಾ ಕಾಯಿದೆ ಪ್ರಕಾರ ಮಜೂರ್ರಿಕೊಟ್ಟು ಅಯಿವತ್ತು ಮಜೂರ್ರಿ ಆಳು ಮಾಡಿ

13. ಕೊಂಡುವದ್ದು ಗಡಿಯಿಂದಾ ಮುಂದಣ ಗಡಿವರ್ರಿಗೂ ಹತ್ಯಾರ ಸುದಾ ಯಿಪತ್ತು ಜನ ಕಂದಾಚಾರ
14. ದವರ ಸಂಗಡ ಕೊಟ್ಟು ರವಾನೆ ಮಾಡುವದ್ದು ಶ್ರೀಗಳವರ್ರು ಮುಂದಣ ಮಜಲ್ಲಿಗೆ ಚಿತ್ತೈಸುತಲೆ ಸದರ ಮೆ

P. 3

L.

1. ರ್ರೆ ಸಂದ ಸಾಮಾನು ಕ್ರಯ ವಿವರ ಪಟ್ಟಿ ಆಳುಗಳಿಗೆ ಮಜೂರ್ರಿ ಸಂದ ಲಾಗವಡ ಪಟ್ಟಿ ಸಹಾ
2. ಹಜೂರ್ರಿಗೆ ರವಾನೆ ಮಾಡುದ್ದು ಶ್ರೀಗಳವರ್ರು ದೇವತಾ ಶೆವೆ ನಿಮಿತ್ಯ ನಂಜನಗೂಡು ತ್ತಿರಮಕೂಡ್ಲು
3. ಚ್ಯಾಮರಾಜನಗರ ಮುಂತ್ತಾದ ಬಳಿ ವಂದೆರಡು ದಿವ್ಸ ನಿಂತಲ್ಲಿ ಸದರ ಮೆರ್ರೆ ಪದಾರ್ಥ ಮುಂತ್ತಾಗಿ ಕೊಡುವದ್ದು
4. ಮೈಶೂರ್ರಿಂದಾ ಶ್ರಿಂಗೆರ್ರಿಗೆ ದಯಮಾಡತಕ ಮಜಲ ವಿವರ । ಮೈಶೂರ್ರಿಂದಾ ನಂಜನಗೂಡು ಬದನಕುಪೆ
5. ಚ್ಯಾಮರಾಜನಗರಾ ೧ ಮೂಗೂರ್ರು ೧ ತಿರಮಕೂಡ್ಲು ೧ ಬಂನೂರ್ರು ೧ ಅಷ್ಟಗ್ರಾಮಾ ೧ ಚಿನಕುರುಳಿ ೧ ಅತಿಗುಪ್ಪೆ ೧ ಕಿಕೆರ್ರಿ ೧
6. ಚಂನರಾಯ ಪಟಣ ೧ ಗ್ರಾಮಾ ೧ ಹಾಸನಾ ೧ ಹಾಲುತೊರ್ರೆ ೧ ಬೆಲೂರ್ರು ೧ ಹಿರ್ರೆಮಗಳೂರು ೧ ಸಖರಾಯಪಟಣ ೧
7. ಕಡೂರ್ರು ೧ ತರ್ರಿಕೆರ್ರೆ ೧ ಲಕವಳಿ ೧ ಯಡೆಹಳಿ ೧ ಕೊಪ ತಾಲೂಕು ತಲಮತಿ ೧ ಕೊಪಾ ೧ ಮುಳರಳಿಯಿಂದಾ ಶ್ರಿಂಗೆರ್ರಿ
8. ಯಿಾ ಮಜಲಗಳಲ್ಲಿ ಶ್ರೀಗಳವರ ಸಂಗಡಲೆ ಯಿದ್ದು ಸರಬರಾಯಿ ಮಾಡಕೊಡತಕ ಬಗ್ಗೆ ಮುತ್ಸರಕಾತ ವೆಂಗ
9. ಟೆಶ್ಯೆಯನ ಅಪ್ಪಣೆ ಕೊಡ್ಸಿ ಯಿದೆ ಸದರ ಮೆರ್ರೆ ಸರಬರಾಯಿ ಮಾಡಿ ಮಜಲು ಯಿಂದಾ ಮುಂದಣ ಮಜಲ್ಲಿಗೆ
10. ಚಿತ್ತೈಸಿದ ವಿವರಕೆ ಅರ್ಜಿ ಬರದು ಕಳಹಸುವದ್ದು ತಾರ್ರಿಕು ೧೮ ನೆ ಮಾಹೆ ಜೂನ್ ಸಂನ್ ೧೮೨೮ ನೆ ಯ್ಸಿವಿ ಖತ ಸುಬರಾ
11. ವು ಮುನಷಿ ಹಜೂರ್ರು ತಾಜಾ ಕಲಂ । ಸದರ ಚ್ಯಾಮರಾಜನಗರದ ಮಜಲನಲ್ಲಿ ಹರದನಹಳಿ ಅಮಲದಾ
12. ರ ಸರಬರಾಯಿ ಮಾಡಬೆಕ್ಕು ತಾರ್ರಿಕು ಸದರ್ರು ಸದರ್ರಿ ಮೆರ್ರೆಗೆ ಪದಾರ್ಥ ಕೊಡುವದು
13. ಶ್ರೀಕೃಷ್ಣ

Scanned by CamScanner

Summary : On 18th June 1828, Krisṇarāja Oḍeyar issued *nirūpas* to *amaldārs* and *killedārs*, ordering them to provide good accomodation to the Śṛiṅgēri *Swāmiji*, at their respective places, while the latter was returning from Mysore to Śṛiṅgēri. The *Swāmiji's* retinue consisted of 350 Brāhmaṇas, 200 Śūdras, 4 palanquins, 4 elephants, 4 horses, 20 ponies, 100 oxen, and 60 Bōyis. The governament was to supply 300 seers of rice and other required provisions for Brāhmaṇa-*santarpaṇe* and 200 seers of horse-gram for feeding oxen and horses. The *amaldārs* and *killedārs* were ordered to maintain servants, whose duty was to protect the *Swāmiji's* camp from thieves and brigands, during night. During his return journey from Mysore to Śṛiṅgēri, the *Swāmiji* was to halt at Nanjangūḍu, Badankupe, Chāmrājnagar, Mūgūru, Tirumakūḍlu, Bannūru, Aṣṭagrāma, Chinakuruḷi, Atiguppe, Kikeri, Channarāyapaṭṭaṇa, Grāma, Hāsana, Hālutore, Bēlūru, Hiremagaḷūru, Sakharāyapaṭṇa, Kaḍūru, Tarīkere, Lakvaḷḷi, Yaḍehaḷḷi, Koppa Tālūku-Talamati Koppa and Muḷaraḷi.

181

P. 1

L.

1. ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ
2. ಪಾರಾವಾರ ಪಾರೀಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾ
3. ನ ಧಾರಣ ಸಮಾಧ್ಯಷ್ಟಾಂಗ ಯೊಗಾನುಷ್ಠಾನ ನಿಷ್ಠ ತಪಶ್ಚಕ್ರವರ್ತ್ಯನಾದ್ಯವಿ
4. ಛಿನ್ನ ಗುರುಪರಂಪರಾಪ್ರಾಪ್ತ ಷಡ್ದರ್ಶನ ಸ್ಥಾಪನಾಚಾರ್ಯ ವ್ಯಾಖ್ಯಾನಸಿಂ
5. ಹಾಸನಾದೀಶ್ವರ ಸಕಲ ನಿಗಮಾಗಮ ಸಾರಹೃದಯ ಸಾಂಖ್ಯತ್ರಯ ಪ್ರತಿ
6. ಪಾದಕ ವೈದಿಕ ಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರಾದಿ ರಾಜಧಾನೀ ವಿದ್ಯಾ
7. ನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಶ್ರೀ
8. ಮ್ಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀ
9. ಶ್ವರ ತುಂಗಭದ್ರಾತೀರವಾಸ ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ ಶ್ರೀ

10. ಮದಭಿನವ ಸಚ್ಚಿದಾನಂದ ಭಾರತಿ ಸ್ವಾಮಿ ಗುರುಕರಕಮಲ ಸಂಜಾತ
11. ಶೃಂಗೆರಿ ಶ್ರೀನೃಸಿಂಹ ಭಾರತಿ ಸ್ವಾಮಿನಾಂ ಚರಣಸನ್ನಿಧಿಂ ಪ್ರತಿ ॥

P. 2

L.

1. ಶ್ರೀಮದ್ರಾಜಾಧಿರಾಜ ರಾಜ ಪರಮೆಶ್ವರ ಪ್ರೌಢ ಪ್ರತಾಪಾಪ್ರತಿಮವೀರನರಪತಿ ಬಿರುದಂತೆಂಬರ ಗಂಡ ಲೊಕೈಕ
2. ವೀರ ಯದುಕುಲ ಪಯಃ ಪಾರಾವಾರ ಕಳಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೆರುಂ
3. ಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೆಕ ಬಿರುದಾಂಕಿತ ಮಹಿಶೂರ ಪುರವರಾಧೀಶ ಶ್ರೀಕೃಷ್ಣ ರಾ
4. ಜ ಮಹೀಪತಿ ಕೃತ ಪ್ರಣತಿ ಪರಂಪರಾಪೂರ್ವಕ ವಿಜ್ಞಾಪನಾ ॥ ಸರ್ವಧಾರ್‍ರಿ ಸಂವತ್ಸರದ ನಿಜ ಆಷಾಢ ಶು ೨ ಸೊಮ
5. ವಾರದವರ್‍ರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರು ಸಹಾ ನಾವು ಕ್ಷೆಮದಲ್ಲಿಧೆವೆ ಶ್ರೀಗಳವರು ಸರ್ವದಾ
6. ತಪಸ್ಸಾಮ್ರಾಜ್ಯವನ್ನನುಭವಿಸುವ ಬಗ್ಯೆ ಆಶೀರ್ವಾದ ರೂಪ ಶ್ರೀಮುಖವನ್ನನುಗ್ರಹಿಸುತ್ತಾ ಬರುವಂತ್ತೆ ಮಾಡಿಸುತ್ತ
7. ಬರಬೆಕು ಸಾಂಪ್ರತ । ಶೃಂಗೆರಿಗೆ ಸೆರಿದ ಗ್ರಾಮಗಳಲ್ಲಿ ಚರಾದಾಯ ಸುಂಕ ಯಲ್ಲೆ ಮುಂತಾದ ಬಾಬುಗಳಲ್ಲಿ ಕೊಪ್ಪ
8. ದ ತಾಲ್ಕು ಬೆಲೂರು ತಾಲ್ಕು ನಗರ ತಾಲ್ಕು ಮಹಾರಾಜನದುರ್ಗ ತಾಲ್ಕುಗಳಿಗೆ ಸಹಾ ಬಂದ ಮಾಮಲೆದಾರ್‍ರುಗಳು ಸರ್ವ
9. ಮಾನ್ಯವಾಗಿ ನಡೆಯುವ ಶೃಂಗೆರ್‍ರಿ ಜೊಡಿಯಾಗಿ ನಡೆಯುವ ರಣಘಟ್ಟ ಸುರಾಪುರ ಗವಟೂರ್‍ರು ಕಿರವಾಲೆ ಯಿಾ ಗ್ರಾಮ
10. ಗಳ ವಿಷಯವಾಗಿ ಸನ್ನದು ಪತ್ರಗಳ ದಾಖಲೆ ಯೆನು ಯಿರುತ್ತೆ ಯಂಬದಾಗಿ ಆಕ್ಷೆಪಿಸುವದಾಗಿ ಶ್ರುತವಾಗಿಧೆ ಯಿಾ
11. ಗ್ರಾಮಗಳಿಗೆ ಅನಾದಿಯಾಗಿ ಬಂದಂಥಾ ಸನ್ನದುಗಳು ಕೆಲವು ಕಾಲದೊಳಗೆ ಕೆಲವು ಗೈರ ವಿಲೆ ಬಂದಿರುವ ಹಾಗೆ ಯಿಧೆ
12. ಯಂಬದಾಗಿ ಅಪ್ಪಣೆ ಕೊಡಿಶಿದ ಬಗೆ ಯಿಾ ಗ್ರಾಮಗಳು ಬಹುಕಾಲದಿಂದಾ ಶಿಲ ಶಿಲೆಯಾಗಿ ನಡದು ಬಂದು ಯಿರುವಂ
13. ಥಾದ್ದಕೆ ಸನ್ನದು ಪತ್ರಗಳು ಶಿಕ್ಕದೆ ಯಿದ್ದದ್ದರ್‍ರಿಂದ ಬಾಧಕವೆನು ಯಿಧೀತು । ಯಿಾ ಮೆರೆ ಸನ್ನದು ಪತ್ರಗಳನ್ನು ಕೆ
14. ಳುವ ವಿಚಾರ ನಮಗೆ ಶ್ರುತವಾಗಿ ಯಿಲ್ಲ ಯಿಾಗಲೂ ಪೂರ್ವಾರಭ್ಯ ಶ್ರೀಮಠಕ್ಕೆ ಅನುಭವವಿರುವ ಮೆರೆ ಯಿಾ ಗ್ರಾ

Scanned by CamScanner

P. 3

L.

1. ಮಗಳನ್ನು ಅನುಭವಿಸಿಕೊಂಡು ಬರುವದಕ್ಕೆ ಅಡ್ಡಿ ಯಷ್ಟು ಮಾತ್ರವೂ ಯಿಲ್ಲ ಪೂರ್ವದ ಮೆರೆ ಸರ್ವವನ್ನು ಅನುಭ
2. ವಿಸುತ್ತಾ ಶ್ರೀ ಶಾರದಾ ಅಂಮನವರು ಶ್ರೀಚಂದ್ರಮೌಳೀಶ್ವರ ಸ್ವಾಮಿಯವರ ಸನ್ನಿಧಿಯಲ್ಲಿ ನಂಮ ಶ್ರೇಯಃ ಪ್ರಾರ್ಥನೆ
3. ಮಾಡುತ್ತಾ ಬರಬೆಕು । ಹಾಗೆ ಯಾರಾದರೂ ಹರಕತ್ತು ಹೆಳುವ ವಿವರ ಶ್ರೀಗಳವರ ಸನ್ನಿಧಿಗೆ ಶ್ರುತವಾದಲ್ಲಿ ಯಿಾ ಬಿ
4. ನ್ನಹಾ ಪತ್ರಿಕೆ ಸನ್ನದನ್ನೇ ಅವರುಗಳಿಗೆ ತೊರ್‍ರಿಶಿದಲ್ಲಿ ಯಾರಿಂದಲೂ ಯೆನೂ ಅಡ್ಡಿ ಬರಲಾರದು । ಯಿಾ ವಿವರ ಶ್ರು
5. ತವಿರಬೆಕು । ಬ ತಾರ್‍ರಿಖ ೧೪ ನೆ ಮಾಹೆ ಜುಲಯಿ ಸನ್ ೧೮೨೮ ನೆ ಯಿಸವಿ ಖತ್ತ ಅರಮನೆ ಸುಬರಾಯ ಮುನಷಿ ಹ
6. ಜೂರ್‍ರು ಇಂತಿ ತ್ರಿಕಾಲದಲ್ಲು ಶಿರಸಾಷ್ಟಾಂಗವಾಗಿ ನಮಸ್ಕರ್‍ರಿಶಿ
7. ಮಾಡುವ ಅನಂತಾನಂತ ಬಿನ್ನಹ ಸ್ವಾಮಿ ರ್‍ರುಜು ಶ್ರೀ
8. ಕೃಷ್ಣ

Summary : On 14th July 1828, Krisṇarāja Oḍeyar wrote to *Śrī* Narasimha Bhāratī *Swāmiji* of Śṛiṅgēri, requesting him to continue enjoying the time-honoured *sarvamānya* villages - Raṇaghaṭṭa, Surāpur, Gavṭūru and Kirvāle. He requested the *Guru* to offer prayers to *Śrī* Śāradāmbā and *Śrī* Chandramauḷīśvara, wishing him success.

Note : *Śrī* Narasimha Bhāratī VIII (A.D. 1817-1879), the 32nd in the illustrious line was the then *Jagadguru* of the Śṛiṅgēri *Maṭha*.

182

ಶ್ರೀಕಂಠಾಚ್ಯುತಪದ್ಮಜಾದಿದಿವಿಷದ್ವಕ್ತ್ರೋತ್ಥತೇಜಶ್ಛಟಾ
ಸಂಭೂತಾಮತಿಭೀಷಣಪ್ರಹರಣಪ್ರೋದ್ಭಾಸಿಬಾಹಾಷ್ಟಕಾಂ ।
ಗರ್ಜತ್ಸೈರಿಭದೈತ್ಯಪಾತಿತಮಹಾಶೂಲಾಂ ತ್ರಿಲೋಕೀಭಯ
ಪ್ರೋನ್ಮಾಥವ್ರತದೀಕ್ಷಿತಾಂ ಭಗವತೀಂ ಚಾಮುಂಡಿಕಾಂ ಭಾವಯೇ ॥
11. ಯಲಿಲ್ಲ ಯಾವಾಗ್ಯು ಚಾತುರ್ಮಾಸ್ಯದಲ್ಲಿ ಬರುತ್ತಾ ಯಿದ್ದಂಥಾ ಶ್ರೀಮುಖವು ಬರಲಿಲ್ಲ ಯಿಲ್ಲಿ
12. ಗೆ ದಯಮಾಡಿಶಿ ನಮಗೆ ಚರಣದರ್ಶನವನ್ನು ಕೊಡುವ ವಿಷಯದಲ್ಲಿ ಸಾವಕಾಶವಾದ್ದರಿಂ
13. ದ ನಮ್ಮ ಮೆಲೆ ಪೂರ್ವದಂತೆ ಅನುಗ್ರಹವಿಲ್ಲವೆಂಬದಾಗಿ ತಿಳಿಬರುತ್ತೆ ಯಾವಾಗ ಅನುಕೂಲವಾಗಿ

P. 3

L.

1. ಚರಣದರ್ಶನ ಮಾಡಿ ಕೃತಾರ್ಥರಾದೆವೊ ತಿಳಿದು ಯಿಲ್ಲ ಅರಮನೆಯಲ್ಲಿ ಶಿಲಾಯಂತ್ರ ನಿರ್ಮಿತ
2. ವಾದಂಥಾ ಚತುರಂಗದ ಕುದುರೆ ಹಾರಿಶಿರುವ ಪೂರ್ಣತಾರಾಕಲ್ಪತರುವೆಂಬ ಚಕ್ರವನ್ನು ಸಂನಿಧಾ

3. ನದಲ್ಲಿ ಪರಾಂಬರಿಸತಕ್ಕ ಬಗ್ಯೆ ವೆದಮೂರ್ತಿ ಕೃಷ್ಣ ಜೊಯಿಸರ ಮಾರಿಪತು ಅಪ್ಪಣೆ ಕೊಡಿಶಿ ಯಿ
4. ಧೆ ಸಂನಿಧಾನಕ್ಕೆ ಬಂದು ತಲಪಿ ಪರಾಂಬರ್‍ರಿಶಿದ ಬಗ್ಯೆ ಶ್ರೀಮುಖವನ್ನು ಅನುಗ್ರಹಿಸುವಂತ್ತೆ
5. ಮಾಡಿಸಬೆಕು ಚಿತಕ್ಕೆ ಸಮರ್ಪಕವಾದರೆ ಬಾಲಕನಿಗೆ ಚರಣ ದರ್‍ರು
6. ಶನ ಕೊಟ್ಟು ಕೃತಾರ್ಥನ ಮಾಡಬೆಕ್ಕು ಯಂಬ ಕ್ಕುತೂಹಲ ತುಂ
7. ಬಾ ಇದೆ ಯಿದರ ಮೆಲೆ ಸಂನಿದಿ ಚಿತ ವೃತಿ ಬಂದಂತೆ ಆಜ್ಞಾ
8. ಪಿಸಬಹುದು ಯಿಂತಿ ತ್ರಿಕಾಲದಲ್ಲು ಶಿರಸಾಷ್ಟಾಂಗವಾಗಿ ನಮ
9. ಸ್ಕರ್‍ರಿಶಿ ಮಾಡುವ ಅನಂತಾನಂತ ಬಿಂನಹ ಸ್ವಾಮಿ ರುಜು
10. ಶ್ರೀಕೃಷ್ಣ

Summary : A letter, dated, Monday, 14th day of the bright half of Nija Bhādrapada, Paridhāvi *saṁ.*, from Krisṇarāja Oḍeyar to *Śrī* Narasimha Bhāratī *Swāmīji* of Śṛṅgēri. The king requested the *Guru* to offer *charaṇa-darśana* at Mysore, at an early date. He further requested the *Guru* to despatch *śrīmukha*, for having received *Pūrṇatārā-Kalpataru-chakra*, sent through Vēdamūrthy Krisṇa Jois.

196

P. 1

L.

1. ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾ
2. ಣ ಪಾರಾವಾರ ಪಾರೀಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾ
3. ಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೊಗಾನುಷ್ಠಾನ ನಿಷ್ಠ ತಪ
4. ಶ್ಚಕ್ರವರ್ತ್ಯನಾದ್ಯವಿಛಿನ್ನ ಗುರುಪರಂಪರಾಪ್ರಾಪ್ತ ಷಡ್ದರ್ಶನ ಸ್ಥಾ
5. ಪನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಶ್ವರ ಸಕಲ ನಿಗಮಾಗಮ
6. ಸಾರಹೃದಯ ಸಾಂಖ್ಯತ್ರಯ ಪ್ರತಿಪಾದಕ ವೈದಿಕಮಾರ್ಗಪ್ರವ
7. ರ್ತಕ ಸರ್ವತಂತ್ರ ಸ್ವತಂತ್ರಾದಿ ರಾಜಧಾನೀ ವಿದ್ಯಾನಗರ ಮಹಾರಾಜ
8. ಧಾನೀ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾ
9. ಧಿರಾಜಗುರು ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವ
10. ರ ತುಂಗಭದ್ರಾತೀರವಾಸ ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ
11. ಶ್ರೀಮದಭಿನವ ಸಚ್ಚಿದಾನಂದ ಭಾರತಿ ಸ್ವಾಮಿ ಗುರುಕರಕಮಲ
12. ಸಂಜಾತ ಶ್ರಿಂಗೆರ್‍ರಿ ಶ್ರೀ ನರಸಿಂಹ ಭಾರತಿ ಸ್ವಾಮಿನಾಂ ಚರಣ ಸಂನ್ನಿ

Scanned by CamScanner

P. 2

L.

1. ಧಿಂ ಪ್ರತಿ ॥
2. ಶ್ರೀಮತ್ಪ್ರಿಯ ಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿ ಪರಂಪರಾ ಪೂರ್ವಕ ವಿಜ್ಞಾಪನಾ ಸ್ವಾಮಿ
3. ಪರಿಧಾವಿ ಸಂವತ್ಸರದ ಮಾಘ ಶು ೬ ಸೊಮವಾರದವರ್‍ರಿಗೆ ಶ್ರೀಗಳವರ ಚರಣಾನುಗ್ರಹದಿಂದ
4. ಸರ್ವರು ಸಹಾ ನಾವು ಕ್ಷೆಮದಲ್ಲಿಧೆವೆ ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾ
5. ಜ್ಯವನ್ನನುಭವಿಸುವ ಬಗ್ಯೆ ಆಶೀರ್ವಾದ ರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸಬೆಕು
6. ಸಾಂಪ್ರತ ವೆ। ಶೆಷ ಜೊಯಿಸನ ಮುಖಾಂತ್ರ ಶ್ರೀಗಳವರು ಅನುಗ್ರಹ ಪೂರ್ವಕವಾಗಿ ಅಪ್ಪ
7. ಣೆ ಕೊಡಿಶಿ ಕಳುಹಿದ ಶ್ರೀಮುಖ ಬಂದು ಮುಟ್ಟಿ ಶಿರಸಾವಹಿಶಿ ನೊಡಿಕೊಂಡು ಕೃತಾರ್ಥ
8. ನಾದೆನು । ಶ್ರೀಗಳವರು ಯಿಾ ಪ್ರಾಂತ್ಯದಿಂದ ದಯ ಮಾಡಿ ಬಹಳ ದಿವಸವಾಗಿ ಆಗಾಗ್ಯೆ ಶ್ರೀಮುಖ
9. ವಾದಾಗ್ಯು ಬಂದು ನಂಮ ಮನಸ್ಸಿಗೆ ಸಂತೊಷವಾಗುವದಕ್ಕೆ ಯಿಲ್ಲವಾಗಿ ಯಿತ್ತು ಯಿಾಗ ಶ್ರೀಗ
10. ಳವರು ಯಿಾ ಪ್ರಾಂತ್ಯಕ್ಕೆ ದಯಮಾಡುವದಾಗಿ ವರ್ತಮಾನ ವೆ। ಶೆಷ ಜೊಯಿಸ ಶ್ರುತಪಡಿಶಿದ್ದ
11. ರ್‍ರಿಂದ ಶ್ರೀಗಳವರು ದಯಮಾಡುತ್ತಾರೆಂಬ ಶುಭವಾದ ವಾಕ್ಯವು ನಂಮ ಮನಸ್ಸಿಗೆ ಕೆವಲ ಆನಂ
12. ದಕರವಾಗಿಧೆ ಶ್ರೀಗಳವರು ಮಾರ್ಗದಲ್ಲಿ ಸಾವಕಾಶವಾಗದಂತೆ ಜಾಗ್ರತೆಯಿಂದಾ ದಯಮಾ

P. 2

L.

1. ಡಿಸುತ್ತಾ ಪ್ರಮಾದೀಚ ಸಂವತ್ಸರದ ಚೈತ್ರ ಶು ೧೫ ವಳಗೆ ಮೈಸೂರ್‍ರಿಗೆ ದಯಮಾಡಿಸುವಂತೆ ಅ
2. ನುಗ್ರಹಿಸಬೆಕು ಕಡಮೆ ವಿಚಾರಗಳೆಲ್ಲಾ ವೆ। ಶೆ ಜೊಯಿಸನ ಅಳಿಯ ಶಾಮಭಟ್ಟನು ಶ್ರೀ
3. ಗಳವರ ಸನ್ನಿಧಾನಕ್ಕೆ ಬಂದು ಯಿರುವದರ್‍ರಿಂದ ಯಿಾತನು ಮುಖತಾ ಶ್ರುತಪಡಿಸುವಲ್ಲಿ ಸಕಲ

4. ವೂ ವೆದ್ಯವಾಗುತ್ತಾ ಯಿಧೆ ಯಿಾ ವಿವರ ಶ್ರುತವಿರಬೆಕು ಇಂತಿ ತ್ರಿಕಾಲದಲ್ಲು ಶಿರ
5. ಸಾಷ್ಟಾಂಗವಾಗಿ ನಮಸ್ಕರ್‍ರಿಶಿ ಮಾಡುವ ಅನಂತಾನಂತ ಬಿಂನ
6. ಹಾ ಸ್ವಾಮಿಾ ರ್‍ರುಜು ಶ್ರೀ ಕೃಷ್ಣ

Summary : A letter, dated, Monday, 6th day of the bright half of Māgha, Paridhāvi *saṁ.*, from Krisṇarāja Oḍeyar to *Śrī* Narasimha Bhāratī *Swāmīji* of Śṛiṅgēri. The king acknowledged the receipt of *śrīmukha*, sent by the *Guru*, through Śēṣa Jois. He further requested the *Guru* to visit Mysore, before the 15th day of the bright half of Chaitra, Pramādīcha *saṁvatsara*.

197

P. 1

L.

1. ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾ
2. ಕ್ಯಪ್ರಮಾಣ ಪಾರಾವಾರ ಪಾರೀಣ ಯಮನಿಯಮಾಸನ ಪ್ರಾಣಾ
3. ಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೊಗಾ
4. ನುಷ್ಠಾನ ನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಛಿನ್ನ ಗುರುಪರಂಪರಾ
5. ಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ ವ್ಯಾಖ್ಯಾನಸಿಂಹಾಸನಾಧೀ
6. ಶ್ವರ ಸಕಲ ನಿಗಮಾಗಮ ಸಾರಹೃದಯ ಸಾಂಖ್ಯತ್ರಯ ಪ್ರ
7. ತಿ ಪಾಲಕ ವೈದಿಕಮಾರ್ಗಪ್ರವರ್ತಕ ಸರ್ವತಂತ್ರ ಸ್ವತಂತ್ರಾದಿ
8. ರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ನಾಟಕ ಸಿಂಹಾ
9. ಸನ ಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜಗುರು ಭೂಮಂ
10. ಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ ತುಂಗಭದ್ರಾತೀರವಾಸ
11. ಶ್ರೀಮದ್ವಿದ್ಯಾಶಂಕರ ಪಾದ ಪದ್ಮಾರಾಧಕ ಶ್ರೀಮದಭಿನವ ಸಚ್ಚಿದಾ
12. ನಂದ ಭಾರತಿ ಸ್ವಾಮಿ ಗುರುಕರಕಮಲ ಸಂಜಾತ ಶೃಂಗೆರ್‍ರಿ ಶ್ರೀ ನರ
13. ಸಿಂಹ ಭಾರತಿ ಸ್ವಾಮಿನಾಂ ಚರಣಸನ್ನಿಧಿಂ ಪ್ರತಿ

P. 2

L.

1. ಶ್ರೀಮತ್ಪ್ರಿಯ ಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿ ಪರಂಪರಾಪೂರ್ವಕ ವಿಜ್ಞಾಪನಾ
2. ಪ್ರಮಾದೀಚ ಸಂಘತ್ಸರದ ಫಾಲ್ಗುಣ ಬ ೮ ಬುಧವಾರದವರ್‍ರಿಗೆ ಶ್ರೀಗಳವರ ಚರಣಾನುಗ್ರಹ

Scanned by CamScanner

3. ದಿಂದಾ ಸರ್ವರು ಸಹಾ ನಾವು ಕ್ಷೆಮದಲ್ಲಿಥೆವೆ ಶ್ರೀಗಳವರು ನಿರಂತರ ನಿರಂತರಾಯವಾಗಿ ತ
4. ಪಸ್ಸಾಮ್ರಾಜ್ಯವನ್ನನುಭವಿಸುವ ಬಗ್ಯೆ ಆಗಾಗ್ಯೆ ಆಶೀರ್ವಾದ ರೂಪ ಶ್ರೀಮುಖವನ್ನನುಗ್ರಹಿ
5. ಸುವಂತೆ ಮಾಡಿಸಬೆಕು ಸಾಂಪ್ರತ ಶ್ರೀಮಠದ ದೆಶಾಧಿಕಾರಿ ಶೆಷ ಜೊಯಿಸರು ಪ್ರಮಾದೀಚ ಸಂ
6. ವತ್ಸರದ ಫಾಲ್ಗುಣ ಶು ೧೪ ಸೊಮವಾರ ರಾತ್ರೆ ೨೫ ಘಳಿಗೆ ವೆಳೆಯಲ್ಲಿ ಮೈಸೂರಲ್ಲಿ ದೈವಾಧೀ
7. ನವಾದ್ದರಿಂದ ಕಾಲಧರ್ಮಕ್ಕೆ ಯಾರ ಯತ್ನವೂ ಯಿಲ್ಲ ಯಂಬದು ಚಿತ್ತಕ್ಕೆ ವೆದ್ಯವೆ ಯಿಥೆ ಯಿ
8. ವರ ಮಗ ಮಲ್ಲಿಕಾರ್ಜುನ ಶಾಸ್ತ್ರಿಯೂ ಕೂಡ ಯೊಗ್ಯನಾಗಿ ಬುದ್ಧಿವಂತನಾಗಿಯೂ ಯಿಥಾನೆ
9. ಜೊತೆಲಿರತಕ್ಕ ಬಗ್ಯೆ ಅಳಿಯನೂ ಬುದ್ಧಿವಂತನಾಗಿಥಾನೆ ಶೆಷ ಜೊಯಿಸರನ್ನ ಮಾನದಿಂದಾ
10. ಸಂರಕ್ಷಣೆ ಮಾಡಿದ ಮೆರೆ ಯಿವರನ್ನೂ ಸಂರಕ್ಷಣೆ ಮಾಡಿಕೊಂಡು ಬಂದರೆ ನಮಗೂ ಬಹ
11. ಳ ಸಂತೊಷವಿಥೆ ಶ್ರೀಗಳವರ ಚರಣದರ್ಶನಾಪೆಕ್ಷೆ ನಮಗೆ ಬಹಳವಾಗಿರುವದ್ದರಿಂದ

P. 3
L.

1. ಶ್ರೀಗಳವರು ಜಾಗ್ರತೆಯಿಂದಾ ಯಿಾ ಪ್ರಾಂತಕ್ಕೆ ದಯಮಾಡಿ ನಮಗೆ ದರ್ಶನವನ್ನು ಕೊಡುವಂತೆ
2. ಮಾಡಿಸಬೆಕು । ಬಳ್ಳಾರಿ ಪ್ರಾಂತಕ್ಕೆ ಶ್ರೀಗಳವರು ದಯಮಾಡುವದು ನಾಲ್ಕಾರು ದಿವಸ ಯಿರುವಾಗ
3. ಲೆ ನಮಗೆ ತಿಳಿಯತಕ್ಕ ಬಗ್ಯೆ ಶ್ರೀಮುಖವಂನನುಗ್ರಹಿಶಿ ಕಳುಹಿಶಿಕೊಟ್ಟಲ್ಲಿ ಯಿಲ್ಲಿಂದಾ ವೆ।
4. ಶಾಮಭಟ್ಟರ್ರಿಗೂ ಅಪ್ಪಣೆ ಕೊಡಿಶಿ ಸನ್ನಿಧಾನಕ್ಕೆ ಕಳುಹಿಶಿಕೊಡುತ್ತಾ ಯಿಥೆ ಯಿಾ ವಿವರ
5. ಚಿತ್ತಕ್ಕೆ ತಂದು ಯಿಾ ಬಿನ್ನಹಾಪತ್ರಿಕೆ ಬಂದು ಮುಟ್ಟಿದ ಬಗ್ಯೆ ಶ್ರೀಮುಖವಂನನುಗ್ರಹಿಸು
6. ವಂತೆ ಮಾಡಿಸಬೆಕು ದಿವ್ಯ ಚರಣ ದರ್ರುಶನ ಅಪೆಕ್ಷೆ ತುಂಬಾ ಇಥೆ
7. ಪ್ರಾಪ್ತಿ ಹ್ಯಾಗೊ ತಿಳಿಕ್ಕೂಡದು ಜನಗಳ ಆಡುವ ಮಾತಿನಲ್ಲಿ
8. ಶ್ರೀ ಸಾಂನಿಧ್ಯ ಆಗದ ಹಾಗೆ ದುರಾಲೊಚನೆ ಮಾಡುತಾರೆ ಶೆವಕನ

9. ಪುಣ್ಯ ಲಭ್ಯ ಹ್ಯಾಗೆ ಯಿದೆಯೊ ಶ್ರೀ ಜಗದಿಶ್ವರ್ರಿಗೆ ತಿಳಿಬೆ
10. ಕ್ಕು ವಂದಾವರ್ತಿ ಶ್ರೀ ಚರಣ ದರ್ರುಶನ ಶಿಘ್ರುದಲೆ ದಯಪಾ
11. ಲ್ಲಿಶಿ ಕೃತಾರ್ಥನ ಮಾಡಬೆಕ್ಕು ವಿಶೆಷವಾಗಿ ವಿಜ್ಞಾಪಿಸುವದಕ್ಕೆ ಶಕ್ತ
12 ನಲ್ಲಾ ತ್ರಿಕಾಲದಲ್ಲು ಶಿರಸಾಷ್ಟಾಂಗವಾಗಿ ನಮಸ್ಕರ್ರಿಶಿ ಮಾಡುವ ಅನೆ
13. ಕ ಬಿಂನಹಾ ಸ್ವಾಮಿ ರ್ರುಜು ಶ್ರೀಕೃಷ್ಣ

Summary : A *binnavattaḷe,* dated, Wednesday, the 8th day of the dark half of Fālguṇa, Pramādīcha *saṁ.*, from Krisṇarāja Oḍeyar to *Śrī* Narasimha Bhāratī *Swāmīji* of Śṛiṅgēri. The death of Śēṣa Jōis, the *Dēśādhikāri* of the *Śrīmaṭha*, at Mysore, at 25 *ghaḷige* on Monday, 14th day of the bright half of Fālguṇa, Pramādīcha *saṁvatsara,* was communicated by the king to the *Guru*. The king informed that Mallikārjuna śāstry, son of Śēṣa Jōis, was competant and intelligent and son-in-law, to accompany him, was also intelligent, who may be accepted and protected by the *Śrīmaṭha*. The king being anxious to have *darśan* of the *Guru,* requested him to visit Mysore.

198

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ಪದವಾಕ್ಯಪ್ರಮಾಣ ಪಾರಾವಾರ ಪಾರೀಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ, ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೊಗಾನುಷ್ಠಾನನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾ ಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ ವ್ಯಾಖ್ಯಾನಸಿಂಹಾಸನಾಧೀಶ್ವರ ಸಕಲನಿಗಮಾಗಮ ಸಾರ ಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು, ಭೂಮಂಡಲಾಚಾರ್ಯ ಋಷ್ಯಶೃಂಗ ಪುರವರಾಧೀಶ್ವರ, ತುಂಗಭದ್ರಾತೀರ ವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವ ಸಚ್ಚಿದಾನಂದಭಾರತೀಸ್ವಾಮಿ ಗುರುಕರಕಮಲ ಸಂಜಾತ, ಶೃಂಗೇರಿ ಶ್ರೀನರಸಿಂಹ ಭಾರತೀಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

ಶ್ರೀಗಳವರ

ಆನಂದನಾಮ ಸಂವತ್ಸರದ ಚೈತ್ರ ಶು. ೧೦ ಸ್ಥಿರವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರು ಸಹ ನಾವು ಕ್ಷೇಮದಲ್ಲಿಥೇವೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಅನುಗ್ರಹರೂಪ ಶ್ರೀಮುಖವನ್ನು ಅಪ್ಪಣಿಕೊಟ್ಟು ಕಳುಹಿಸುತ್ತಾ ಬರಬೇಕು ; ಸಾಂಪ್ರತ. ಈಗ ನಾಲ್ಕೈದು ವರ್ಷದಿಂದ ಶ್ರೀಗಳವರು ಇಂಥಾ ಸ್ಥಳದಲ್ಲಿ ಇಥಾರೆಂದು ಗೊತ್ತು ವರ್ತಮಾನವು

Scanned by CamScanner

ತಿಳಿಯಲಿಲ್ಲ. ಒಂದಾವರ್ತಿ ಶೇಷಜೋಯಿಸರು ಬಂದು ಇದ್ದು ಶ್ರೀಗಳವರ ದರ್ಶನವಾಗಿತ್ತು, ದಯಮಾಡುತ್ತಾರೆಂಬದಾಗಿ ಶ್ರುತಪಡಿಸಿದ್ದರು. ಆಮಾತು ಇದುವರಿಗೂ ದೃಷ್ಟಾಂತಕ್ಕೆ ಬರಲಿಲ್ಲ. ಈಚೆಗೆ ಸನ್ನಿಧಾನದಿಂದ ಶ್ರೀಮುಖವೂ ಬರಲಿಲ್ಲ. ವರ್ಷಂಪ್ರತಿ ಚಾತುರ್ಮಾಸ್ಯ ಸಂಕಲ್ಪಕ್ಕೆ ದಯಮಾಡಿದಬಗ್ಗೆ ಬರುತ್ತಿದ್ದ ಶ್ರೀಮುಖವೂ ಬರಲಿಲ್ಲ. ಶ್ರೀಗಳವರ ಚರಣದರ್ಶನ ಮಾಡಬೇಕೆಂಬ ಕುತೂಹಲದಿಂದ ಬಿನ್ನಹಪತ್ರಿಕೆ ಬರೆಸಿ ಕಳುಹಿಸಿದ್ದಬಗ್ಗೆ ಜವಾಬು ಶ್ರೀಮುಖವೂ ಬರದೆ ಇರುವ ನಿಮಿತ್ತ ಇಲ್ಲಿ ಇರುವಂಥಾ ಜನರುಗಳಲ್ಲಿ ಪರಮತಸ್ಥರು ತಮ್ಮ ತಮ್ಮ ಮನಸ್ಸುಬಂದಂತೆ ಶ್ರೀಗಳವರ ವಿಷಯದಲ್ಲೂ, ನಮ್ಮ ವಿಷಯದಲ್ಲೂ, ಹೇಳುತ್ತಾರೆಂದು ಶ್ರುತವಾಗುತ್ತೆ. ಹೀಗೆ ಆಡುವದ ಕೇಳಿ ಸ್ವಮತಸ್ಥರೂ ಕೂಡ ಮನಸ್ಸು ಬಂದಂತೆ ಆಡುವದಕ್ಕೆ ಅವಕಾಶವಾಗಿಧೆ. ಇದರಿಂದ ಶ್ರೀಗಳವರ ಸನ್ನಿಧಾನಕ್ಕೂ, ನಮುಗೂ, ಗೌರವವಲ್ಲವೆಂಬುದು ಚಿತ್ತಕ್ಕೆ ವೇದ್ಯವಿರಬಹುದು. ಶ್ರೀಗಳವರು ದಯಮಾಡುವಬಗ್ಗೆ ಕೆಲವು ಐವಜು, ಹಜೂರು ಸಾಹುಕಾರ ದಾಮೋದರದಾಸರ ಮಾರೀಫತ್ತು ಹುಂಡಿಮಾಡಿಸಿ ಅಪ್ಪಣೆ ಕೊಡಿಸಿ ಕಳುಹಿಸಿತ್ತು. ಅದು ಸನ್ನಿಧಾನಕ್ಕೆ ಬಂದು ತಲಪಿತೋ, ಇಲ್ಲವೋ, ಆ ಸಮಾಚಾರವೂ ಇಲ್ಲ. ಕೆಲವರು ಹುಂಡಿ ರವಾನೆಯೇ ಆಗಲಿಲ್ಲವೆಂದುಸಹ ಹೇಳುತ್ತಾರೆಂದು ಶ್ರುತವಾಗುತ್ತೆ. ಶ್ರೀಗಳವರು ಒಂದಾವರ್ತಿ ಈ ಪ್ರಾಂತ್ಯಕ್ಕೆ ದಯಮಾಡಿ, ನಮಗೆ ಚರಣಸಂದರ್ಶನವನ್ನು ಕೊಟ್ಟು, ಅನಂತರ ಶ್ರೀಗಳವರ ಆಶ್ರಮಧರ್ಮರೀತ್ಯಾ ಸರ್ವಸಂಗ ಪರಿತ್ಯಾಗಕ್ರಮವಾಗಿ ಇದ್ದಾಗ್ಯೂ, ಲೋಕಾನುಗ್ರಹಾರ್ಥವಾದ ಈ ಪ್ರಕೃತದ ಆಶ್ರಮದರೀತಿಯಿಂದ ಶ್ರೀಮತ್ಪ್ರಿಯಶಿಷ್ಯನಾದ ನನ್ನಲ್ಲೂ ಅಂತಃಕರಣ ವಿಟ್ಟು ದಯಮಾಡಿಸಬೇಕೆಂಬ ವಿಜ್ಞಾಪನೆಯನ್ನು ಚಿತ್ತಕ್ಕೆ ತರಬೇಕು. ವೇ ॥ ಸಮುಖದ ವಿದ್ವಾಂಸ ತಿಮ್ಮಣ್ಣಶಾಸ್ತ್ರಿಗಳು ಈ ಶು. ೧೩ ಶುಕ್ರ ವಾರ ರಾತ್ರೆ ನಾಲ್ಕುಗಳಿಗೆಗೆ ಸ್ವರ್ಗಸ್ಥರಾದರು. ಅವರ ಮಕ್ಕಳನ್ನು ಅವರು ಇದ್ದಮೇರೆಗೆ ಸಂರಕ್ಷಣೆ ಮಾಡುತ್ತೆ. ಶ್ರೀಗಳವರ ಸನ್ನಿ ಧಾನಕ್ಕೆ ಅವರೂ ಹಿಂದಣಿಂದ ಬಿನ್ನಹಪತ್ರಿಕೆಯನ್ನು ವಿಜ್ಞಾಪನೆ ಮಾಡಿಕೊಂಡಾರು. ಶ್ರೀಗಳವರು ಸಮೀಪದಲ್ಲಿ ಹತ್ತೆಂಟು ಗಾವುದ ಇರುವಹಾಗೆ ದಯಮಾಡಿದಕೂಡ್ಲೆ ಇಲ್ಲಿಂದ ಶ್ರೀಗಳವರ ಸನ್ನಿಧಾನಕ್ಕೆ ವೇ ॥ ಶ್ಯಾಮ ಭಟ್ಟರನ್ನು, ಪಹರೆ, ಬೆಸ್ತರು, ಮುಂತಾಗಿ ಅಪ್ಪಣೆಕೊಡಿಸಿ ಕಳುಹಿಸುತ್ತಾ ಇಧೆ. ಮುಖ್ಯವಾಗಿ ಜನರುಗಳು ಹಾಸ್ಯಾಸ್ಪದವಾದ ಮಾತುಗಳ ಆಡುವದಕ್ಕೆ ಅವಕಾಶವಿಲ್ಲದಂತೆ ಶ್ರೀಗಳವರು ದಯಮಾಡಿ ಚರಣ ದರ್ಶನವನ್ನು ಮಾಡಿಸಬೇಕು. ಒಂದುವೇಳೆ ಇಲ್ಲಿಗೆ ದಯಮಾಡುವ ಬಗ್ಗೆ ಚಿತ್ತಕ್ಕೆ ಸಮರ್ಪಕವಿಲ್ಲದೆ ಇದ್ದಲ್ಲಿ, ಇಂಥಾದ್ದರಿಂದ ಅಸಂದರ್ಭವೆಂದು ಶ್ರೀಮುಖವನ್ನನುಗ್ರಹಿಸಿದಲ್ಲಿ ಅಂಥಾ ವಿಷಯ ನಮಗೆ ತಿಳಿಯದೆ ಇದ್ದದ್ದನ್ನು ವಿಹಿತವಿದ್ದಂತೆ ಚಿತ್ತಕ್ಕೆ ವೇದ್ಯವಾಗತಕ್ಕ ಬಗ್ಗೆ ಬಿನ್ನಹ ಮಾಡುತ್ತಾ ಇದೆ. ಶ್ರೀಗಳವರಿಗೆ ನನ್ನಲ್ಲಿ ಬಹಳ ಅಂತಃಕರಣವಿದ್ದದ್ದಕ್ಕೆ ಈಗ ದೂರದೇಶಕ್ಕೂ ಹೋಗಿ, ಆಗಾಗ್ಗೆ ಶ್ರೀಮುಖವನ್ನಾದರೂ ಅನುಗ್ರಹಿಸದೆ ಇರುವದ್ದರಿಂದ ಜನರಲ್ಲಿ ಹಾಸ್ಯಾಸ್ಪದವಾಗಿ ನಮಗೆ ಮನಸ್ಸಿಗೆ ಬಹಳ ವ್ಯಾಕುಲವಾಗಿಯೂ ಇದೆ. ಶ್ರೀಗಳವರ ಚಿತ್ತದಲ್ಲಿ ದಯಮಾಡುವದು ಇಲ್ಲವೆಂಬುದೇ ಖಚಿತವಾಗಿದ್ದರೆ ಆ ವಿಷಯಕ್ಕೆ ಶ್ರೀಮುಖದಿಂದಲಾದರೂ ತಿಳಿಯುವಂತೆ

ಅಪ್ಪಣೆಕೊಡಿಸಬೇಕು. ಸರ್ವವನ್ನೂ ತಿಳಿದಂಥಾ ಚಿತ್ತವೃತ್ತಿಗೆ ವಿಶೇಷ ವಿಜ್ಞಾಪನೆ ಮಾಡಕ್ಕದ್ದು ಏನು ಇದೆ. ಈ ಬಿನ್ನಹ ಪತ್ರಿಕೆ ಸನ್ನಿಧಾನಕ್ಕೆ ಬಂದು ತಲಪಿದಕೂಡ್ಲೆ ಶ್ರೀಮುಖವನ್ನನುಗ್ರಹಿಸಿ ಕಳುಹಿಸುವಂತೆ ಮಾಡಿಸಬೇಕು. ಈ ಊರಲ್ಲಿ ಇರುವಂಥಾ ದುರ್ಬುದ್ಧಿಯುಳ್ಳ ಲೌಕಿಕರಾಗಲಿ, ವೈದಿಕರಾಗಲಿ, ಶ್ರೀ ಸನ್ನಿಧಾನಕ್ಕೇ ಆಗಲಿ, ಮಠದ ಜನರುಗಳಿಗೇ ಆಗಲಿ, ಏನಾದರೂ ಬರೆದರೆ ಅದೊಂದನ್ನೂ ಚಿತ್ತಕ್ಕೆತಾರದೆ ನಾವು ಬಿನ್ನಹಮಾಡಿದ ಬಿನ್ನಹ ಪತ್ರಿಕೆಯನ್ನೇ ಚಿತ್ತಕ್ಕೆತಂದು, ಶ್ರೀಗಳವರು ದಯಮಾಡುವಂತೆ ಅನುಗ್ರಹಿಸಿ ಶ್ರೀಮುಖವನ್ನು ಕಳುಹಿಸಿಕೊಟ್ಟು ನಮ್ಮ ಮನಸ್ಸು ಸಂತೋಷಹೊಂದುವಂತೆ ಮಾಡಿಸಬೇಕು. ಇದು ಏನು ಕಾರಣವೆಂದರೆ ಇಲ್ಲಿಗೆ ಶ್ರೀಗಳವರು ದಯಮಾಡುವುದಕ್ಕೆ ಇಲ್ಲಿರುವ ಲೌಕಿಕರು, ವೈದಿಕರುಗಳು, ಮತ್ತೊಂದು ಮಠದ ಉದ್ದಿಶ್ಯವಾಗಿ ತಮ್ಮ ಸ್ವಾರಿ ಇಲ್ಲಿಗೆ ಬರುವುದಕ್ಕೆ ಅಡ್ಡಿಮಾಡಬೇಕೆಂಬದಾಗಿ ಇರುವದು ನಿಷ್ಕರ್ಷೆಯಾಗಿ ತಿಳಿದಿದ್ದರಿಂದ, ಬಾಲಕನು, ಬಿನ್ನಹಮಾಡುವದಕ್ಕೆ ನಿಮಿತ್ತವಾಯಿತು. ಆದಾಗ್ಯೂ ಶ್ರೀ ಶಾರದಾಪೀಠಕ್ಕೆ ಮುಖ್ಯಸ್ಥಳವಾಗಿರುವ ಶ್ರೀ ಸನ್ನಿಧಿಗೆ ಇತರ ಮಠಗಳು ಶಿಷ್ಯಪ್ರಾಯವಾದ ಮಠಗಳೇಹೊರ್ತು ಸಮಾನ ಮಠಗಳೆಂಬುವದು ನಮ್ಮ ಮನಸ್ಸಿಗೆ ಈಹೊತ್ತಿನವರಿಗೂ ತೋರಿಲ್ಲ. ಶ್ರೀಗಳವರ ಸ್ವಾರಿ ಇಲ್ಲಿಗೆ ಬರುವದಕ್ಕೆ ಏನುತೊಂದರೆ ಇದ್ದಾಗ್ಯೂ ಅದನ್ನೆಲ್ಲಾ ಬಿಟ್ಟು ಇಲ್ಲಿಗೆ ಶ್ರೀಗಳವರು ದಯಮಾಡಿದರೆ ದರ್ಶನವಾದಮೇಲೆ ದರ್ಶನಮಾಡಿದ ಸಂತೋಷವನ್ನು ಹೊಂದಿ ಅನಂತರ ಇಲ್ಲಿ ದುಷ್ಟಜನರು ನಡೆಸಿದ ಚರ್ಯೆಗಳನ್ನೆಲ್ಲಾ ಚಿತ್ತಕ್ಕೆ ವೇದ್ಯಗೊಳಿಸುತ್ತಾ ಇಧೆ. ಈ ಬಿನ್ನಹ ಪತ್ರಿಕೆಯ ಆನುಪೂರ್ವಿಯಾಗಿ ಅಕ್ಷರಾಕ್ಷರವನ್ನೂ ಪರಾಂಬರಿಸಿ, ಅಭಿಪ್ರಾಯವನ್ನು ಚಿತ್ತಕ್ಕೆತಂದು, ಪಂಚ ವರ್ಷದಿಂದ ಸ್ವಾರಿ ಬರುವುದಕ್ಕೆ ಪ್ರಯತ್ನಮಾಡಿರುವ ಬಾಲಕನ ಮನಸ್ಸನ್ನು ಸಂತೋಷಪಡಿಸಿ, ಶ್ರೀಚಂದ್ರಮೌಳೀಶ್ವರಸ್ವಾಮಿ ದರ್ಶನವೂ, ಶ್ರೀಚರಣದರ್ಶನವೂ, ಮಾಡಿಸುವದಕ್ಕೆ, ಶ್ರೀಗಳವರು ಸ್ವತಂತ್ರರು ಇಧಾರೆ. ಶ್ರೀಗಳವರ ಸ್ವಾರಿ ಹತ್ತಿರ ನಾಲ್ಕೈದು ಮಜಲು ಸಮೀಪಕ್ಕೆ ದಯಮಾಡಿದಕೂಡ್ಲೆ ಇಲ್ಲಿಂದ ಹಜೂರು ಸಮುಖದ ವಿದ್ವಾಂಸ ತಿಮ್ಮಣ್ಣಶಾಸ್ತ್ರಿಗಳ ಮಕ್ಕಳು ವೇ ॥ ವೆಂಕಟಸುಬ್ಬಾಶಾಸ್ತ್ರಿಗಳು, ಲಕ್ಷ್ಮೀನಾರಾಯಣಶಾಸ್ತ್ರಿಗಳ ಸಂಗಡ ಶ್ಯಾಮ ಭಟ್ಟರನ್ನು ಕೂಡಿಟ್ಟು ಬೋಯಿಗಳು, ಪಹರೆದವರಸಹ, ಸನ್ನಿಧಾನಕ್ಕೆ ಅಪ್ಪಣೆಕೊಡಿಸಿ ಕಳುಹಿಸುತ್ತಾ ಇಧೆ. ಶ್ರೀಗಳವರ ಸ್ವಾರಿ ಯಾವಾಗ ಬಿಜಯಂಗೈದು ಬಾಲಕನ ಮನೋರಥವಂ ಪೂರೈಸುತ್ತಾ ಇಧೆಯೋ ಆದಿನವೇ ಶ್ರೀಮದಾಚಾರ್ಯ ಸ್ವಾಮಿಗಳವರ ಸಂದರ್ಶನ ವೆಂದು ತಿಳಿಯುತ್ತಾ ಇಧೆ. ಇದರಮೇಲೆ ಸರ್ವಜ್ಞಚಿತ್ತಕ್ಕೆ ಒಪ್ಪಿದಂತೆ ಶ್ರೀಮುಖವನ್ನನುಗ್ರಹಿಸಿ ಕೃತಾರ್ಥನ ಮಾಡಬೇಕು. ವಿಶೇಷ ವಿಜ್ಞಾಪನೆ ಮಾಡುವುದಕ್ಕೆ ಬಾಲಕನು ಶಕ್ತನಲ್ಲ. ಸಾರಾಂಶ–ವೈಶಾಖ ಶು. ೧೫ ಒಳ ಗಾಗಿ ಮೈಸೂರು ರಾಜಧಾನಿಗೆ ಶ್ರೀಗಳವರ ಸ್ವಾರಿ ಬಿಜಯಂಗೈಯ್ಯುತ್ತೆಂದು ತ್ರಿಕರಣ ತ್ರಿವಾಚವಾಗಿಯೂ ನಂಬಿಧೇವೆ. ಶ್ರೀಗಳವರ ಸ್ವಾರಿ ಬಂದಬಳಿಕ ಚಾತುರ್ಮಾಸ್ಯ ಸಂಕಲ್ಪಕ್ಕೂ, ನವರಾತ್ರೆಯ ಉತ್ಸವಕ್ಕೂ, ಶ್ರೀಗಳವರ ಸ್ವಾರಿ ಇಲ್ಲೇ ಚಿತ್ತೈಸಿ ಈ ರಾಜಧಾನಿಯಲ್ಲೇ ಉತ್ಸವ ಬೆಳೆಸಬೇಕೆಂದು ಶ್ರೀ ಚಾಮುಂಡೇಶ್ವರಿ ಪ್ರೇರಣೆಯಿಂದ ನಿಶ್ಚೈಸಿಧೇವೆ. ಈ ಮನೋರಥನ್ನು ನೆರವೇರಿಸುವಬಗ್ಗೆ

Scanned by CamScanner

ದಿನಸಂಖ್ಯೆಗೆ ಮುಂಚೆಯೆ ಯಾವ ತೆರದಲ್ಲಾದರೂ, ಶ್ರೀಗಳವರ ಸ್ವಾರಿ ಬೆಳೆಯುವಂತೆ ಶ್ರೀ ಚಂದ್ರಮೌಳೀಶ್ವರಸ್ವಾಮಿಯು, ಶ್ರೀಶಾರದಾ ಅಮ್ಮನವರುಸಹ, ಚಿತ್ತಕ್ಕೆ ಪ್ರೇರಿಸಬೇಕೆಂದು ಪ್ರಾರ್ಥಿಸುತ್ತೇವೆ. ಯಾವಾಬಗ್ಯೂ ಇದಕ್ಕೆ ಜಾಗ್ರತೆಯಾಗಿ ಸಾವಿರ ಪಾಲುದಾರಿಕೆ ಇದ್ದಾಗ್ಯೂ ತ್ಯಜಿಸಿ, ಕ್ರಮಕ್ರಮವಾಗಿ ಶೀಘ್ರವಾಗಿ ಸ್ವಾರಿ ಬೆಳೆಯುವಂತೆ ಅನುಗ್ರಹಿಸಿ, ಬಾಲಕನನ್ನು ಕೃತಾರ್ಥನ ಮಾಡಬೇಕು.

ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತ ವಿಜ್ಞಾಪನಾ, ಸ್ವಾಮಿ. ಮುಖ್ಯ ಸ್ವಾರಿ ಬಿಜಯಂಗೈದು ಬಾಲಕನಿಗೆ ಸಂದರ್ಶನ ಕೊಡುವದೇ ಮುಖ್ಯಕಾರ್ಯವಾಗಿ ತಿಳಿದು ಇಧೇನೆ.

Summary : A *binnavattaḷe,* dated, Saturday, 10th day of the bright half of Chaitra, Ānandanāma *saṁ.*, (A.D. 1855) from Krisṇarāja Oḍeyar to *Śrī* Narasimha Bhāratī *Swāmīji* of Śṛiṅgēri. The king expressed that he did not come to know anything about the *Swāmiji*, since the past, 4-5 years. The death of Vēda Vidvān Timmaṇṇa Śāstry on Friday, 13th day of the bright half of Ānanda *saṁ.*, was communicated to the *Guru*. The king sent Veṅkaṭa Subbā Śāstry and Lakṣmīnārāyaṇa Śāstry, sons of Timmaṇṇa Śāstry, to the *Guru's* camp. The king upheld the supremacy of the Śṛiṅgēri *Maṭha* over other *maṭhas*. He requested the *Guru* to observe *Chāturmāsya* and Navarātre festival at Mysore, as per the incitation of *Śrī* Chāmuṇḍēśvari.

199

ಶ್ರೀ ಶೃಂಗೇರಿ ಶ್ರೀಗಳವರ ಚರಣಾರವಿಂದಂಗಳಿಗೆ. ಬಾಲಕನು ತ್ರಿಸಂಧ್ಯಾಕಾಲದಲ್ಲೂ ; ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತ ವಿಜ್ಞಾಪನಾ, ಅದಾಗಿ :–

ಈ ಆನಂದ ಸಂವತ್ಸರ ಚೈತ್ರ ಬ. ೨ ಶನಿವಾರದವರಿಗೆ ಶ್ರೀಯವರ ಪರಮಾನುಗ್ರಹದಿಂದ ಈ ಮಟ್ಟಿಗೆ ಕ್ಷೇಮದಲ್ಲಿಧೇನೆ ; ಶ್ರೀಚರಣಾರವಿಂದಂಗಳ ತಪಸ್ಸಾಮ್ರಾಜ್ಯ ವೈಭವಂಗಳಿಗೆ ಶ್ರೀಮುಖ ಅಪ್ಪಣೆಕೊಡಿಸಿ ಪ್ರಿಯಶಿಷ್ಯನ ಮನಸ್ಸಂತೋಷಗೊಳಿಸುವ ಭಾರವನ್ನು ಶ್ರೀಪಾದಾರವಿಂದಗಳಿಂದ ಕಟಾಕ್ಷಿಸಬೇಕು ; ಸಾಂಪ್ರತ. ನಾನು ಎರಡು ಮೂರು ಆವರ್ತಿ ಬಿನ್ನಹಪತ್ರಿಕೆ ಬಿನ್ನವಿಸಿದ್ದೆನು ; ಅದೊಂದಕ್ಕೂ ಪ್ರತಿ ಶ್ರೀಮುಖ ಅಪ್ಪಣೆ ಆಗಲಿಲ್ಲ ; ಅದು ನನ್ನ ದೌರ್ಭಾಗ್ಯವೇ ಸರಿ. ಈಗ ವೇ ॥ ತಿಮ್ಮಣ್ಣಶಾಸ್ತ್ರಿಗಳ ಹೆಸರಿನಿಂದ ಶ್ರೀಮುಖ ಅಪ್ಪಣೆ ಆದದ್ದು ಮತ್ತು ಶ್ಲೋಕ ಅಪ್ಪಣೆ ಆದದ್ದು ಸಹ ನೋಡಿ, ಪರಮಾನಂದಭರಿತನಾದೆನು. ಮುಖ್ಯ ಶ್ರೀಚರಣದರ್ಶನ ಅಪೇಕ್ಷೆ ಬಹಳವಾಗಿ ಇಧೆ. ಅದಕ್ಕೆ ಲಭ್ಯತೆ ಉಂಟೋ, ಇಲ್ಲವೋ, ಶ್ರೀಹರಿ ಬಲ್ಲ ; ಆದಾಗ್ಯೂ ನನ್ನಲ್ಲಿ

ಕೃಪಾಕಟಾಕ್ಷವಿಟ್ಟು ಶ್ರೀಚರಣ ದರ್ಶನಕೊಟ್ಟು ಸಲಹಬೇಕು. ಜನರುಗಳು ಆಡುವ ಮಾತು ಬಾಲಕನಿಗೆ ಕರ್ಣಕಠೋರವಾಗಿ ಇಧೆ. ಜನರು ಬಹಳ ಆಭಾಸ ವಾಗಿ ವಿಘ್ನಗಳ ಮಾಡುತ್ತಾ ಇಧಾರೆ. ಶ್ರೀಗಳವರು ಪ್ರಿಯಶಿಷ್ಯನಲ್ಲಿ ಅನುಗ್ರಹವಿಟ್ಟು ದರ್ಶನಕೊಟ್ಟು, ಜನರುಗಳು ಆಡುವ ದುರ್ಭಾಷೆಯನ್ನೂ, ಬಾಲಕನಿಗೆ ದರುಶನವಿಲ್ಲದ ವ್ಯಸನವನ್ನೂ ಸಹ, ತಪ್ಪಿಸಿ ಶ್ರೀಚರಣ ದರ್ಶನಕೊಟ್ಟು ಕೃತಾರ್ಥನನ್ನು ಮಾಡಬೇಕು. ಮುಖ್ಯ ಈ ವೈಶಾಕ ಶು. ೧೫ ಯಲ್ಲಿ ಸಂದರ್ಶನಕೊಟ್ಟು, ಚಾತುರ್ಮಾಸ್ಯ, ಶಾರದ ಮಹಾ ನವಮ್ಯುತ್ಸವಗಳನ್ನು ಬಾಲಕನ ಸ್ವಗೃಹದಲ್ಲಿ ಆಗಮಾಡಿಸಬೇಕು. ಶ್ರೀ ಚರಣ ದರ್ಶನವನ್ನು ಚಾತಕನ್ಯಾಯವಾಗಿ ತೋರಿರುವ ಈ ಬಾಲಕನ ಮನಸ್ಸಂತೋಷಗೊಳಿಸಬೇಕು. ನಮ್ಮ ಸರಹದ್ದಿಗೆ ಬಿಜಯಂಗೈವುದು ಯಾವ ಮಾರ್ಗ, ಅದನ್ನು ವಿವರವಾಗಿ ಅಪ್ಪಣೆಕೊಡಿಸಬೇಕು. ಕಡಮೆ ವಿದ್ಯಮಾನವೆಲ್ಲಾ ವೆಂಕಟಸುಬ್ಬಾಶಾಸ್ತ್ರಿಗಳು, ಲಕ್ಷ್ಮೀನರಸಿಂಹಶಾಸ್ತ್ರಿಗಳು, ಶ್ಯಾಮಭಟ್ಟ ಸಹ ಇವರ ಬಿನ್ನಹ ಪತ್ರಿಕೆಯಿಂದ ವಿಸ್ತಾರವಾಗಿ ಚಿತ್ತಕ್ಕೆ ವೇದ್ಯವಾಗುತ್ತಾ ಇಧೆ. ವಿಶೇಷವಾಗಿ ಬಿನ್ನವಿಸುವದಕ್ಕೆ ಬಾಲಕನು ಶಕ್ತನಲ್ಲ. ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಸಹಸ್ರ ಬಿನ್ನಹ ಸ್ವಾಮಿ.

Summary : A *binnavattaḷe*, dated, Saturday, 2nd day of the dark half of Chaitra, Ānanda *saṁ.*, (A.D. 1855), from Krisṇarāja Oḍeyar to the Śṛiṅgēri *Swāmīji*. The king requested the *Guru* to offer *Śrī charaṇa-darśana* on the 15th day of the bright half of Vaiśākha, Ānanda *saṁ.*, and observe *chāturmāsya* and Śārada-Mahānavami festival at his residence only. The other developments in the *Śrī-Maṭha* are known from the letters of Veṅkaṭa Subbā Śāstry and Lakṣmī-narasimha Śāstry and Śyāma Bhaṭṭa.

200

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರಪಾರೀಣ, ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮಸಾರಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕಸಿಂ ಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು, ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿ ಗುರುಕರಕಮಲಸಂಜಾತ, ಶೃಂಗೇರಿ ಶ್ರೀನೃಸಿಂಹಭಾ ರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ;

Scanned by CamScanner

ಶ್ರೀಮತ್ಪ್ರಿಯಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

ಆನಂದಸಂವತ್ಸರದ ವೈಶಾಖ ಬ. ೭ ಶುಕ್ರವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರೂಸಹ ನಾವು ಕ್ಷೇಮದಲ್ಲಿಧೇವೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಅನುಗ್ರಹರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸಬೇಕು ; ಸಾಂಪ್ರತ. ಈ ಆನಂದ ಸಂವತ್ಸರದ ವೈಶಾಖ ಶು. ೧ ದಿವಸ ಶ್ರೀ ನಾಸಿಕಾ ಪಂಚವಟೀ ಕ್ಷೇತ್ರದಿಂದ ಅನುಗ್ರಹಿಸಿ ಕಳುಹಿಸಿಕೊಟ್ಟ ಶ್ರೀಮುಖ ಹಜೂರು ಸಾಹುಕಾರ ದಾಮೋದರದಾಸರ ಮಾರೀಫತ್ತು ಬಂದುಮುಟ್ಟಿ ಶಿರಸಾವಹಿಸಿ ನೋಡಿಕೊಂಡು ಕೃತಾರ್ಥನಾದೆನು. ಶ್ರೀ ಗಳವರು ಈ ಪ್ರಾಂತ್ಯದಿಂದ ದಯಮಾಡಿಸಿದಮೇಲೆ ಒಂದಾವರ್ತಿ ಶ್ರೀ ಮುಖವನ್ನನುಗ್ರಹಿಸಿ ಇದ್ದದ್ದೇಹೊರ್ತು, ವರ್ಷಂಪ್ರತಿ ಚಾತುರ್ಮಾಸ್ಯ ಸಂಕಲ್ಪಕ್ಕೆ ದಯಮಾಡಿಸಿದಾಗಲೂಕೂಡ ಶ್ರೀಮುಖಗಳನ್ನು ಅನುಗ್ರಹಿಸಲಿಲ್ಲ. ಈಗ ಅಪ್ಪಣೆಕೊಡಿಸಿದ ಶ್ರೀಮುಖ ಬಂದುಮುಟ್ಟಿದ್ದರಿಂದ ಶ್ರೀಗಳವರ ಚರಣದರ್ಶನವಾದಮೇರೆಗೆ ನಮ್ಮ ಮನಸ್ಸಿಗೆ ಬಹಳ ಸಂತೋ ಷವಾಯಿತು. ಈ ಶ್ರೀಮುಖದಲ್ಲಿ ಜೇಷ್ಠ ಶು. ೧೫ ಒಳಗೆ ಮೈಸೂರಿಗೆ ದಯಮಾಡುವದಾಗಿ ಅಪ್ಪಣೆಕೊಡಿಸುವದಾಗಿಧೆ.. ಅರವತ್ತು ಗಾವುದ ದೂರದಲ್ಲಿ ದಯಮಾಡಿರುವದು ಇಂಥಾ ದಿವಸ ಶ್ರೀಗಳವರ ಸವಾರಿ ಹೊರಡುತ್ತೆ, ಇಂಥಾ ಮಾರ್ಗವಾಗಿ ದಯಮಾಡುತ್ತೆ, ಎಂದು ವಿವರವಿಲ್ಲ ; ಆದ್ದರಿಂದ ಈ ಸಂದೇಹಪರಿಹಾರಾರ್ಥವಾಗಿ ಇಂಥಾ ದಿವಸ ಹೊರಟು, ದಯಮಾಡುತ್ತೇವೆ ; ಇಂಥಾ ಮಾರ್ಗವಾಗಿ ದಯಮಾಡುತ್ತೇವೆಂಬದಾಗಿಯೂ, ಅಪ್ಪಣೆಕೊಡಿಸಬೇಕು. ಸರ್ವಪ್ರಯತ್ನದಲ್ಲೂ ಏನು ಅಡ್ಡಿಗಳು ಇದ್ದಾಗ್ಯೂ ಚಿತ್ತಕ್ಕೆ ತರದೆ, ಮಜಲುವಾರು ಟಾಕೋಟಾಕು ಸವಾರಿ ದಯಮಾಡಿಸಿ ಜ್ಯೇಷ್ಠ ಶು. ೧೫ ಹೊತ್ತಿಗೆ ಮೈಸೂರಿಗೆ ದಿಗ್ವಿಜಯ ಮಾಡಬೇಕೆಂಬದಾಗಿಯೂ, ಚಾತುರ್ಮಾಸ್ಯ ಸಂಕಲ್ಪವನ್ನು ಇಲ್ಲಿಯೇ ಮಾಡಿ, ಆಷಾಡ ಮಾಸದಲ್ಲಿ ನಮ್ಮ ವರ್ಷವರ್ಧಂತಿ ದಿವಸ ನಮಗೆ ಚರಣ ತೀರ್ಥವನ್ನು ಕೊಟ್ಟು ನಮ್ಮನ್ನು ಕೃತಾರ್ಥರನ್ನು ಮಾಡಬೇಕೆಂಬದಾಗಿ ಮನಸ್ಸಿನಲ್ಲಿ ಬಹಳ ಕುತೂಹಲಯುಕ್ತರಾಗಿಧೇವೆ. ಇಷ್ಟು ದಿವಸಕ್ಕೆ ಈಗ ಬಂದ ಶ್ರೀಮುಖದಿಂದ ಶೃಂಗೇರಿಮಠದಲ್ಲಿ ಲೋಕಾನುಗ್ರಹಾರ್ಥವಾಗಿ ಶ್ರೀ ಚಂದ್ರಮೌಳೀಶ್ವರಸ್ವಾಮಿ, ಶಾರದಾ ಅಮ್ಮನವರ ನಿರಂತರ ಸೇವೆಯನ್ನು ನಡೆಸುತ್ತಾ, ಶ್ರೀಮಠಕ್ಕೆ ಕೀರ್ತಿಯನ್ನುಂಟುಮಾಡುತ್ತಾರೆಂದು ನಿಶ್ಚಯಿಸಿಧೇವೆ. ಕಡಮೆ ವಿವರಗಳೆಲ್ಲಾ ವೇ ॥ ಮಲ್ಲಿಕಾರ್ಜುನ ಜೋಯಿಸ, ಕಳಲೆ ಶಾಮಭಟ್ಟ, ಸುಬ್ಬಾಶಾಸ್ತ್ರಿಗಳಿಗೆ ಬಂದಿರುವ ಕಾಗದಗಳಿಂದ ವೇದ್ಯವಾಗುತ್ತೆ. ವಿಶೇಷ ವಿಜ್ಞಾಪನೆ ಮಾಡತಕ್ಕದ್ದೇನು ಇಧೆ ? ಹಜೂರು ಸಾಹುಕಾರ ದಾಮೋದರದಾಸರ ಮಾರೀಫತ್ತು ಕಳುಹಿಸಿದ ಹುಂಡಿ ಬಂದು ಮುಟ್ಟಿತೆಂದು ಅಪ್ಪಣೆಕೊಡಿಸಿದ ವಿವರವನ್ನು ಶಿರಸಾವಹಿಸಿ ನೋಡಿಕೊಂಡೆನು. ಈ ಶ್ರೀಮುಖ ಬಂದದ್ದರಿಂದ ಹುಂಡಿ ಬರೆಸಿ ಕಳುಹಿಸಿ ಕೊಟ್ಟಿದ್ದದ್ದನ್ನು ಇಲ್ಲಿರುವ ಜನಗಳೇ ವಂಚನೆಮಾಡಿ ಇಟ್ಟುಕೊಂಡರು, ಶ್ರೀಗಳವರು ಬದರಿಕಾಶ್ರಮಕ್ಕೆ ದಯಮಾಡಿಸಿದರು, ಗುಹಾಪ್ರವೇಶ ಮಾಡಿದರು, ಎಂಬದಾಗಿ ಇಂಥಾ ಅಯುಕ್ತವಾದ ಮಾತುಗಳನ್ನು ಆಡುತ್ತಿದ್ದ ಇಲ್ಲಿನ ಕ್ಷುದ್ರ

ಜನಗಳಿಗೆ ಮುಖ ಕಪ್ಪಾಗಿ, ನಾಲಿಗೆ ಉಪ್ಪಾಗಿ, ಅಂತರ್ಬಹಿಶ್ಚ ಸಂತಪ್ತರಾಗುವಂತೆ ಆಯಿತು. ಶ್ರೀಮಠಕ್ಕೆ ಪದವಾಕ್ಯಪ್ರಮಾಣ ಪಾರಾವಾರಪಾರೀಣರೆಂಬ ಯಶಸ್ಸು ಇರುವದನ್ನು ಜೇಷ್ಠ ಶು. ೧೫ ಹೊತ್ತಿಗೆ ದಯಮಾಡುತ್ತೇವೆಂಬದಾಗಿ ಅಪ್ಪಣೆಕೊಡಿಸಿರುವದರಲ್ಲಿ ಅನ್ವಯಿಸಿಕೊಂಡು ಚರಣದರ್ಶನವನ್ನು ಮಾಡಿ ಕೃತಾರ್ಥರಾಗುವಂತೆ ಮಾಡಿಸಬೇಕು. ಈ ಅರ್ಥವು ಅಪ್ಪಣೆಕೊಡಿಸಿರುವಮೇರೆ ಜೇಷ್ಠ ಶು. ೧೫ ಹೊತ್ತಿಗೆ ದಯಮಾಡಿಸಿದಲ್ಲಿ ನಮಗೂ ಬಹಳ ಸಂತೋಷವಾಗುತ್ತೆ. ವಿಶೇಷ ವಿಜ್ಞಾಪನೆ ಮಾಡತಕ್ಕದ್ದೇನು ಇಧೆ ? ಯಾವತೆರದಲ್ಲೂ ಈ ಚಾತುರ್ಮಾಸ್ಯಕ್ಕೆ ನಮ್ಮ ರಾಜಧಾನಿಯಲ್ಲೇ ಬಿಜಮಾಡಿಸುವದಕ್ಕೆ ಸಕಲ ಸನ್ನಹವನ್ನೂ ವರ್ಷದಿಂದಲೂ ಸಿದ್ಧಮಾಡಿಕೊಂಡು ತದೇಕಚಿತ್ತನಾಗಿ ಈ ಬಾಲಕನು ಇದ್ದಾಗ್ಯೂ, ಶ್ರೀಚರಣ ದರ್ಶನಕ್ಕೆ ಯೋಗ್ಯತೆ ಇಲ್ಲದ ನನ್ನ ಮೇಲೆ ಪೂರ್ಣಾನುಗ್ರಹವಿಟ್ಟು, ಈ ವರ್ಧಂತಿಯಲ್ಲಿ ಚರಣತೀರ್ಥಕ್ಕೆ ಯೋಗ್ಯನನ್ನು ಮಾಡಿಸಬೇಕು. ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನೇಕಬಿನ್ನಹ, ಸ್ವಾಮಿ.

Summary : A letter, dated, Friday, 7th day of the dark half of Vaiśākha, Ānanda *saṁ.*, from Krisṇarāja Oḍeyar to *Śrī* Narasimha Bhāratī. The king requested the *Guru* to offer *charaṇa-darśana* at Mysore on the 15th day of the bright half of Jyēṣṭha and observe *chāturmāsya*.

201

ಶ್ರೀಗಳವರ ಚರಣಸನ್ನಿಧಾನಂಗಳಿಗೆ ; ಬಾಲಕನು ಮಾಡುವ ವಿಜ್ಞಾಪನೆ, ಅದಾಗಿ :–

ಆನಂದ ಸಂವತ್ಸರದ ಜ್ಯೇಷ್ಠ ಶು. ೮ ಭಾನುವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರೂಸಹ ನಾನು ಕ್ಷೇಮದಲ್ಲಿಧೇನೆ. ಶ್ರೀ ಗಳವರ ತಪಸ್ಸಾಮ್ರಾಜ್ಯಾತಿಶಯಗಳಿಗೆ ಆಗಾಗ್ಯೆ ಶ್ರೀಮುಖವನ್ನನುಗ್ರಹಿಸಬೇಕು ; ಸಾಂಪ್ರತ. ಶ್ರೀಗಳವರ ಚರಣದರ್ಶನ ನಮಗೆ ಜಾಗ್ರತೆಯಿಂದ ಆದೀತೆಂದು ನಮಗೆ ಉಗ್ರಶಾಂತಿ ಆಗುವುದಕ್ಕೆ ಮೊದಲು ಮೂರು ತಿಂಗಳುವರಿಗೂ ನೋಡಿ, ಶ್ರೀಗಳವರು ದಯಮಾಡುವದು ಸಾವಕಾಶವಾದ್ದರಿಂದ ಮಾಘಮಾಸದಲ್ಲಿ ಉಗ್ರಶಾಂತಿಯನ್ನು ಬೆಳೆಸಿದ್ದಾಯಿತು. ಈ ಸಂವತ್ಸರದ ಆಷಾಢ ಮಾಸದಲ್ಲಿ ನಮ್ಮ ವರ್ಧಂತಿ ಆಗುವದರಿಂದ ಇದು ಅರವತ್ತನೇ ವರ್ಷವಾದ್ದರಿಂದ ವರ್ಧಂತಿವೇಳೆಗಾದರೂ ಶ್ರೀಗಳವರ ಚರಣಸಂದರ್ಶನವಾದೀತೆಂದು ಕುತೂಹಲದಿಂದ ಇಧೇವೆ. ಅದು ಘಟನೆ ಆಗುವದಕ್ಕೆ ನಮಗೆ ಪುಣ್ಯವಿದೆಯೋ, ಇಲ್ಲವೋ ತಿಳಿಯದು. ಇದೇ ಕುತೂಹಲನಿಮಿತ್ತವಾಗಿ ಮೂರುನಾಲ್ಕಾವರ್ತಿ ಬಿನ್ನಹ ಪತ್ರಿಕೆಗಳನ್ನೂ ಬರೆಸಿ ಕಳುಹಿಸಿದ್ದು ಚಿತ್ತಕ್ಕೆ ಶ್ರುತವಾಗಿ ಸಮರ್ಪಕವಾಯಿತೋ, ಇಲ್ಲವೋ ತಿಳಿಯದು. ಚನ್ನಾಗಿ ಶ್ರುತವಾಗಿದ್ದರೆ ಶ್ರೀಗಳವರು ದಯಮಾಡುವದಕ್ಕೆ ಇಷ್ಟು ಸಾವಕಾಶವಾಗಲಾರದು. ಈಗಲಾದರೂ ಇದುವರಿಗೆ ನಡದಂಥಾ ಬಿನ್ನಹ ಪತ್ರಿಕೆಯ ಅಭಿಪ್ರಾಯವನ್ನು ಮೊಖತ ಶಾಮಭಟ್ಟರನ್ನೇ ಸನ್ನಿಧಾನಕ್ಕೆ ಅಪ್ಪಣೆಕೊಟ್ಟು ಸನ್ನಿಧಾನದಲ್ಲಿ ಶ್ರುತಪಡಿಸತಕ್ಕಬಗ್ಗೆ ವೇ ॥

ಕಳುಹಿಸಿ ಇಧೆ. ಈತನು ಬಂದು ಸನ್ನಿಧಾನದಲ್ಲಿ ಮೊಖತ ಶ್ರುತಪಡಿಸುವದು ಯಾವತ್ತನ್ನೂ ಚಿತ್ತದಲ್ಲಿ ಚನ್ನಾಗಿ ಪರಾಂಬರಿಸಿ ನಮ್ಮ ಕುತೂಹಲವಿರುವರೀತಿಗೆ ನಮ್ಮ ವರ್ಧಂತಿಹೊತ್ತಿಗೆ ಶ್ರೀಗಳವರು ಮೈಸೂರಿಗೆ ದಯಮಾಡಿಸಬೇಕೆಂದು ಇಚ್ಛೈಸುತ್ತೇವೆ. ಕಡಮೆ ವಿವರವೆಲ್ಲಾ ಇವರು ಮೊಖತ ವಿಜ್ಞಾಪನೆಮಾಡುವಲ್ಲಿ ವೇದ್ಯವಾಗುತ್ತೆ ; ವಿಶೇಷ ವಿಜ್ಞಾಪನೆ ಮಾಡತಕ್ಕದ್ದೇನು ಇಧೆ ?

ಖಾಸ್‌ಷರ– ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಸಹಸ್ರಬಿನ್ನಹ, ಸ್ವಾಮಿ. ಮನೋಭೀಷ್ಟ ಪೂರ್ತಿಮಾಡುವಭಾರ ಚರಣಸನ್ನಿಧಿಗೆ ಸೇರಿ ಇಧೆ. ಕಡಮೆ ವಿದ್ಯಮಾನ ಶಾಮಭಟ್ಟ ಹೇಳಲಾಗಿ ಚಿತ್ತಕ್ಕೆ ವಿದಿತವಾಗುತ್ತಿದೆ ; ಇಂತಿಬಿನ್ನಹ, ಸ್ವಾಮಿ.

Summary : A *binnavattaḷe,* dated, Sunday, 8th day of the bright half of Jyēṣṭha, Ānanda *saṁ.*, from Krisṇarāja Oḍeyar to the Śṛiṅgēri *Swāmīji*. Since the king was observing his 60th *Vardhanti*, he wished the *Guru* to offer *charaṇa-darśana* to him. The king postponed the performance of Ugraśānti by three months, i.e., to Māghā *māsa*, instead of Āṣāḍha.

202

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣ ಪಾರಾವಾರಪಾರೀಣ, ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರು ಪರಂಪರಾಪ್ರಾಪ್ತ ಷಡ್ದರ್ಶನಸ್ಥಾಪನಾ ಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮಸಾರಹೃ ದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು ಭೂಮಂ ಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವಸಚ್ಚಿದಾನಂದ ಭಾರತೀ ಸ್ವಾಮಿ ಗುರುಕರಕಮಲ ಸಂಜಾತ, ಶೃಂಗೇರಿ ಶ್ರೀನರಸಿಂಹಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ ಚರಣಸೇವಕ ಕೃಷ್ಣರಾಜಮಹೀಪತಿಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

ರಾಕ್ಷಸ ಸಂವತ್ಸರದ ಮಾಘ ಶು. ೯ ಶುಕ್ರವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರೂಸಹ ನಾನು ಕ್ಷೇಮದಲ್ಲಿಧೇವೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಆಶೀರ್ವಾದರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸ ಬೇಕು ; ಸಾಂಪ್ರತ. ಶ್ರೀಗಳವರು ಮೈಸೂರಿಗೆ

ದಿಗ್ವಿಜಯಮಾಡಿ, ಅರಮನೆಯಲ್ಲಿ ಸೇವಕನಿಗೆ ಶಿವಗೀತೋಪದೇಶಮಾಡಿದಕಾಲದಲ್ಲಿ, ಶ್ರೀ ಶೃಂಗೇರಿ ಶಾರದಾ ಅಮ್ಮನವರಿಗೆ, ಶ್ರೀ ಚಂದ್ರಮೌಳೀಶ್ವರಸ್ವಾಮಿಯವರಿಗೆಸಹ, ನಿತ್ಯೋತ್ಸವ, ನಿತ್ಯದೀಪಾರಾಧನೆ, ಅಭಿಷೇಕ, ನೈವೇದ್ಯ, ಮುಂತಾದ್ದಕ್ಕೆ ಉಪಯೋಗವಾಗಿ ಶಾಶ್ವತಧರ್ಮ ನಡೆದು ನಮ್ಮ ಶ್ರೇಯಃ ಪ್ರಾರ್ಥನೆ ಮಾಡತಕ್ಕಬಗ್ಗೆ ತಿಂಗಳು ಒಂದಕ್ಕೆ ಕುಂಪಣಿ ಒಂದುಸಾವಿರ ರೂಪಾಯಿ ಒಪ್ಪಿಸುವದಾಗಿ ನಿಶ್ಚಯಿಸಿ ಶ್ರುತಪಡಿಸಿರುವದರಿಂದ ಇಂಗ್ರೇಜಿ ತಿಂಗಳ ಕಾಯಿದೆಮೋರೆ ತಿಂಗಳುಗಟ್ಲೆ ಈ ಸಂವತ್ಸರದ ಮಾರ್ಚಿತಿಂಗಳ ಲಾಗಾಯಿತು, ತಿಂಗಳು ಒಂದಕ್ಕೆ ಒಂದುಸಾವಿರ ಕುಂಪಣಿ ರೂಪಾಯಿಮೋರೆ ನಮ್ಮ ಖಜಾನೆಯಿಂದಾಗಲೂ, ಕಮಿಷನರ ಸಾಹೇಬರವರ ಮಾರೀಫತಿನಿಂದಾಗಲೀ, ಶ್ರೀಮಠಕ್ಕೆ ಶ್ರೀಗಳವರ ಪರಂಪರೆಯಾಗಿ ತಲಪುವಂತೆ ಅಪ್ಪಣಿ ಕೊಡಿಸುತ್ತಾ ಇಧೆ ; ಇದರಲ್ಲಿ ಮೇಲೆ ಶ್ರುತಪಡಿಸಿರುವಮೋರೆ ಶ್ರೀ ಶೃಂಗೇರಿ ಶಾರದಾ ಅಮ್ಮನವರಿಗೂ, ಶ್ರೀ ಚಂದ್ರಮೌಳೀಶ್ವರಸ್ವಾಮಿ ಯವರಿಗೂ, ನಿತ್ಯೋತ್ಸವ, ಮುಂತಾದ್ದಕ್ಕೆ ಉಪಯೋಗ ಮಾಡಿಸುತ್ತಾ ಬರಬೇಕು.

ಬ ತಾರೀಖು ೧೫ನೆ ಮಾಹೆ ಫೆಬರವರಿ, ಸರ್ನ ೧೮೫೬ನೆ ಇಸವಿ.

ಖಾಸ್‌ಷರ. – ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತ ಬಿನ್ನಹ, ಸ್ವಾಮಿ.

Summary : A letter, dated, 15th February 1856, from Krisṇarāja Oḍeyar to *Śrī* Narasimha Bhāratī. The king decided to grant Rs. 1000/- per month to the Śṛiṅgēri *Maṭha*, for the worship of *Śrī* Śāradāmbā and Chandramauḷīśvara and also for *nityōtsava, nitya-dīpārādhane, abhiśēka, naivēdya* and such other *dhārmic* activities. The king assured that this monthly grant would be made either through his own treasury or through the Commissioner.

203

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣ ಪಾರಾವಾರಪಾರೀಣ, ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾ ಪ್ರಾಪ್ತಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮ ಸಾರಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು ಭೂಮಂಡ ಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವಸಚ್ಚಿದಾನಂದಭಾರತೀ ಸ್ವಾಮಿ

Scanned by CamScanner

ಗುರುಕರಕಮಲಸಂಜಾತ, ಶೃಂಗೇರಿ ಶ್ರೀನೃಸಿಂಹಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ, ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲದೇಶಾವತಂಸ ಕರ್ಣಾಟಕಜನಪದಸಂಪದಧಿಷ್ಠಾನಭೂತ ಶ್ರೀಮನ್ಮಹಿಶೂರ ಮಹಾಸಂಸ್ಥಾನಮಧ್ಯ ದೇದೀಪ್ಯಮಾನಾವಿಕಲಕಲಾನಿಧಿ ಕುಲಕ್ರಮಾಗತರಾಜ ಕ್ಷಿತಿಪಾಲಪ್ರಮುಖ ನಿಖಿಲ ನಿಜರಾಜಾಧಿರಾಜ ಮಹಾರಾಜಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರ ನರಪತಿಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃಪಾರಾವಾರ ಕಳಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ್ವರ ಕೃಷ್ಣರಾಜಒಡೆಯರವರು ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ವಿಜ್ಞಾಪನೆ :–

ನಳಸಂವತ್ಸರದ ವೈಶಾಖ ಶು. ೮ ಸೋಮವಾರದ ವರಿಗೆ, ಶ್ರೀಗಳವರ ಚರಣಾನುಗ್ರಹದಿಂದ ಸರ್ವರೂಸಹ ನಾವು ಕ್ಷೇಮದಲ್ಲಿಧೇವೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಆಶೀರ್ವಾದರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸಬೇಕು ; ಸಾಂಪ್ರತ. ನಮ್ಮ ಮೊಮ್ಮಕ್ಕಳು ದೇವಪಾರ್ಥಿಯವರಿಗೆ ಈ ವೈಶಾಖ ಶು. ೧೦ ಬುಧವಾರ, ಮಖಾ ನಕ್ಷತ್ರ, ಕರ್ಕಾಟಕ ಲಗ್ನದಲ್ಲಿ, ಅರಮನೆಯಲ್ಲಿ ಉಪನಯನ ಪ್ರಸ್ತುತಕ್ಕೆ ನಿಷ್ಕರ್ಷೆ ಮಾಡಿಸಿರುವುದರಿಂದ ಈ ಪ್ರಸ್ತುತಕ್ಕೆ ಶ್ರೀಗಳವರು ದಯಮಾಡಿಸಿ ಅನುಗ್ರಹಮಾಡಿ ಆಶೀರ್ವಾದ ಮಾಡಬೇಕೆಂಬದಾಗಿ ಪ್ರಾರ್ಥಿಸುತ್ತೇವೆ. ಈ ವಿವರ ಚಿತ್ತಕ್ಕೆ ಶ್ರುತವಿರತಕ್ಕ ಬಗ್ಗೆ ವಿಜ್ಞಾಪನೆ ಮಾಡಿ ಇಧೆ, ಸ್ವಾಮಿ.

ಬ ತಾರೀಖು ೧೨ನೇ ಮಾಹೆ ಮೇ, ಸರ್ ೧೮೫೬ನೇ ಇಸವಿ.

ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತ ಬಿನ್ನಹ, ಸ್ವಾಮಿ.

Summary : A *binnavattaḷe,* dated, 12th May 1856, from Krisṇarāja Oḍeyar to *Śrī* Narasimha Bhāratī. He invited the *Guru* to Mysore and requested him to bless his grandson, Dēvapārthiva, on the occasion of the latter's *upanayana* ceremony to be held in the palace, in *Karkāṭaka lagna, Makhā-nakṣatra*, on Wednesday, 10th day of the bright half of Vaiśākha, Naḷa *saṁvatsara.*

204

ಯಾದಾಸ್ತು, ಹಜೂರು ಹುಕುಂ. – ಅರಮನೆ ಇಲಾಖೆ ಕಚೇರಿ ಜಾತಗಳಿಗೆ, ಅರಮನೆ ಇಲಾಖೆಗಳಿಗೆ ಸಹ, ಅದಾಗಿ :–

ಈ ಇಲಾಖೆಗಳಲ್ಲಿ ಇರುವ ಲೌಕಿಕರಾಗಲಿ, ವೈದಿಕರಾಗಲಿ ಶ್ರೀ ಶೃಂಗೇರಿಮಠದಿಂದ

ಆಚಾರವ್ಯವಹಾರವಿಷಯವಾಗಿ ಏನು ಅಪ್ಪಣೆ ಬಂದಾಗ್ಯೂ, ಆಮೇರೆ ನಡೆದಲ್ಲಿ ನಮಗೆ ಸಂತೋಷವಿಧೆ. ಶ್ರೀಮಠದ ಆಜ್ಞೆಗೆ ವ್ಯತಿರಿಕ್ತವಾಗಿ ನಡೆದರೆ, ಶ್ರೀಮಠದಿಂದ ಅವರಿಗೆ ತಕ್ಕ ಬಂದೋಬಸ್ತು ಮಾಡಿಸಿಯಾರು ; ಶ್ರೀಮಠಕ್ಕೆ ವ್ಯತಿರಿಕ್ತವಾಗಿ ನಡೆದವರು ನಮಗೂ ದೂರವಾದಾರು ; ಈ ವಿವರ ಖಚಿತ ತಿಳಿದಿರುವದು. ಈ ಹುಕುಂ ಇಲಾಖೆಗಳ ಷಹಾಕ್ಕೆ ದಾಖಲುಮಾಡಿಕೊಂಡು, ಈ ಹುಕುಂ ಯಾದಾಸಿನಲ್ಲಿ ಇಲಾಖೆಗಳ ದಾಖಲೆ ಬರೆದು, ಈ ಯಾದಾಸ್ತನ್ನು ಶ್ರೀ ಶೃಂಗೇರಿ ಮಠದ ವರ ವಶಕ್ಕೆ ವಾಪಸು ಕೊಡುವದು.

ಕಾಳಯುಕ್ತ ಸಂವತ್ಸರದ ಅಧಿಕ ಜೇಷ್ಠ ಶು. ೧೩ ಮಂಗಳವಾರದಲ್ಲು.

ಖಾಸ್‌ಷರಾ. –ನಿಮ್ಮ ನಿಮ್ಮ ಇಲಾಖೆಗೆ ಸೇರಿದ ಜನಗಳಿಗೆ ಫರದು ಫರದು ತೋರಿಸಿ ಮಾಡಿಸುವದು. ಶ್ರೀಮಠಕ್ಕೆ ವ್ಯತಿರಿಕ್ತರಾದ ಜನಗಳಿಗೆ ಸಂಬಳವನ್ನು ಅಟಕಾಯಿಸಿ ಹಜೂರಿಗೆ ತಿಳಿಸುವದು. ಈ ಸದರೀ ಹುಕುಂ ಮೀರಿ ನಡೆದಲ್ಲಿ ಇಲಾಖೆ ಜನ ಜವಾಬ್‌ದಾರ ಆದಾರು.

Summary : The order, dated, Tuesday, 13th day of the bright half of Adhika Jyēṣṭha, Kāḷayukti *saṁvatsara*, from Krisṇarāja Oḍeyar to the Offices and Departments of the palace. Accordingly, the disciples of the Śṛiṅgēri *Maṭha*, whether *Vaidikas* or other persons, were to strictly adhere to the order of the *Maṭha*, regarding *āchāra-vichāra*. The salary of such persons who violated *āchāra-vichāra*, was to be withheld and the same be communicated to the Hajūr. The officers of the Departments shall be held responsible, if any transgressed the order.

205

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣ ಪಾರಾವಾರಪಾರೀಣ, ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ, ಧ್ಯಾನ ಧಾರಣ ಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾ ಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲ ನಿಗಮಾಗಮಸಾರಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರಸ್ವತಂತ್ರಾದಿರಾಜಧಾನೀ ವಿದ್ಯಾನಗರಮಹಾರಾಜಧಾನೀ ಕರ್ಣಾಟಕಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು, ಭೂಮಂಡಲಾ ಚಾರ್ಯ, ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವಸಚ್ಚಿದಾನಂದ ಭಾರತೀ ಸ್ವಾಮಿ ಗುರುಕರಕಮಲಸಂಜಾತ, ಶೃಂಗೇರಿ ಶ್ರೀನರಸಿಂಹಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

Scanned by CamScanner

ಕಾಳಯುಕ್ತಿಸಂವತ್ಸರದ ಮಾಘ ಬ. ೮ ಶುಕ್ರವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರೂಸಹ ನಾವು ಕ್ಷೇಮಧಲ್ಲಿ ಇಧೇವೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುತ್ತಲಿರುವಬಗ್ಗೆ ಆಗಾಗ್ಯೆ ಅನುಗ್ರಹಿಸಿ ಶ್ರೀಮುಖವನ್ನು ಅಪ್ಪಣೆಕೊಡಿಸುತ್ತಾ ಬರಬೇಕು ; ಸಾಂಪ್ರತ. ವೇ ॥ ಶ್ರೀಧರ ಮಲ್ಲಿಕಾರ್ಜುನಶಾಸ್ತ್ರಿಗಳು, ಸುಬ್ಬಾಶಾಸ್ತ್ರಿಗಳ ಸಂಗಡ ಅನುಗ್ರಹಿಸಿ ಕಳುಹಿಸಿದ ಶ್ರೀಮುಖ ಬಂದು ಮುಟ್ಟಿ ಶಿರಸಾವಹಿಸಿ ನೋಡಿಕೊಂಡು ಕೃತಾರ್ಥನಾದೆನು. ಸಪರಿವಾರವಾಗಿ ಶೃಂಗೇರಿಗೆ ಬಂದು ಶ್ರೀಶಾರದಾ ಚಂದ್ರಮೌಳೀಶ್ವರಸ್ವಾಮಿಯುವರ ದರ್ಶನವನ್ನು ಮಾಡಬೇಕೆಂಬ ಇಚ್ಛೆಯಿಂದ ಶ್ರೀಮುಖದಲ್ಲಿ ಅನುಗ್ರಹವಾಗಿಧೆ. ಶ್ರೀ ಚಂದ್ರಮೌಳೀಶ್ವರ, ಶಾರದಾ ಅಮ್ಮನವರ ಅನುಗ್ರಹದಿಂದಲೂ, ಶ್ರೀಗಳವರ ಚರಣಾನುಗ್ರಹದಿಂದಲೂ, ಶೃಂಗೇರಿಗೆ ಬಂದು ದರ್ಶನವನ್ನು ಮಾಡುವಂತೆ ಯಾವಾಗ ಕಾಲವಾಗುತ್ತೋ ಆ ಕಾಲದಲ್ಲಿ ಪರಿವಾರ ಸಮೇತವಾಗಿ ಬಂದು ಸೇವೆಮಾಡುವುದಕ್ಕೆ ಸಿದ್ಧವಾಗಿರುತ್ತೇವೆ. ತಿಂಗಳುಗಟ್ಲೆ ಬರತಕ್ಕ ಐವಜು ವಿಷಯವಾಗಿ ಅಪ್ಪಣೆ ಆಗಿರುವಬಗ್ಗೆ ಈ ಸಂವತ್ಸರದ ಜುಲೈ ತಿಂಗಳುವರಿಗೆ ಲೆಕ್ಕ ತಯಾರಾಗಿ ಸೆಪಟಂಬರೊಳಗೆ ಐವಜು ಈ ಊರಿಗೆ ಬಂದು ತಲಪುತ್ತೆ. ಶ್ರೀಮಠಕ್ಕೆ ಸಲ್ಲತಕ್ಕದ್ದು ಲೆಕ್ಕದಮೇರೆ ಶ್ರೀಮಠಕ್ಕೆ ತಲಪುವಂತೆ ಅಪ್ಪಣೆಕೊಡಿಸಿ ಕಳುಹಿಸುತ್ತಾ ಇಧೆ. ಮುಂದೆ ತಿಂಗಳುಗಟ್ಲೆ ಸಲ್ಲತಕ್ಕದ್ದಕ್ಕೆ, ಕಮಿಷನರ್ ಸಾಹೇಬರಿಗೆ ಬರೆಸಿ ಕಳುಹಿಸಿ ನಗರದ ಡಿವಿಜನ್ನಿಂದ ನಗದಾಗಿ ಶೃಂಗೇರಿ ಶ್ರೀಮಠಕ್ಕೆ ತಲಪಿಸುವಂತೆ ಮಾಡಿಸಿ ಕೊಡಿಸುತ್ತಾ ಇಧೆ. ಈ ವಿವರವನ್ನು ವೇ ॥ ಶ್ರೀಧರ ಮಲ್ಲಿಕಾರ್ಜುನಶಾಸ್ತ್ರಿಗಳು, ಸುಬ್ಬಾಶಾಸ್ತ್ರಿಗಳುಸಹ ಬಂದು ಮುಖತಃ ಸನ್ನಿಧಾನದಲ್ಲಿ ಶ್ರುತಪಡಿಸುವಲ್ಲಿ ಚಿತ್ತಕ್ಕೆ ವೇದ್ಯವಾಗುತ್ತೆ. ವಿಶೇಷ ವಿಜ್ಞಾಪನೆ ಮಾಡತಕ್ಕದ್ದೇನು ಇಧೆ ?

ಖಾಸ್‌ಷರ. – ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಬಾಲಕನ ಬಿನ್ನಹ, ಸ್ವಾಮಿ.

Summary : A *binnavattaḷe,* dated, Friday, 8th day of the dark half of Māgha, Kāḷayukti *saṁ.*, (A.D. 1859) from Krişṇarāja Oḍeyar to *Śrī* Narasimha Bhāratī *Swāmīji* of Śṛiṅgēri. The king acknowledged the receipt of the *śrīmukha*, sent through Mallikārjuna Śāstry and Subbā Śāstry. The king accepted the invitation and assured the *Guru*, that he with his retinue would obtain *darśana* of the *Guru* at the convenient time. The king further assured that he had ordered to make due payment to the *Maṭha*. The Commissioner was also informed in this regard.

206

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣ ಪಾರಾವಾರಪಾರೀಣ, ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ

ಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾ ಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮಸಾರ ಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿ ಗುರುಕರಕಮಲಸಂಜಾತ, ಶೃಂಗೇರಿ ಶ್ರೀನರಸಿಂಹ ಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

ಸಿದ್ಧಾರ್ಥಿ ಸಂವತ್ಸರದ ಜ್ಯೇಷ್ಠ ಶು. ೧೩ ಸೋಮವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರುಸಹ ನಾವು ಕ್ಷೇಮದಲ್ಲಿಧೇವೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಆಶೀರ್ವಚನರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸಬೇಕು ; ಸಾಂಪ್ರತ. ಅರಮನೆಯಲ್ಲಿ ನಮಗೆ ಸಿಂಹಾಸನಾರೋಹಣವಾದ ಅರವತ್ತನೆಯ ವರ್ಷವು ಈ ಬ. ೧೩ ದಿವಸಕ್ಕೆ ಆಗುವದರಿಂದ ಈ ಶುಭದಿವಸದಲ್ಲಿ ವರ್ಷವೃದ್ಧಿಪ್ರಯುಕ್ತ ಅಭಿಷೇಕೋತ್ಸವ ಬೆಳೆಯುತ್ತಾ ಇಧೆ. ಈ ಸಂತೋಷವು ಚರಣಾನುಗ್ರಹದಿಂದಲೇ ಉಂಟಾಗಿರುವಕಾರಣ, ಈ ಶುಭವೃತ್ತಾಂತವು ಚರಣಸನ್ನಿಧಾನದಲ್ಲಿ ಶ್ರುತವಿರಬೇಕೆಂದು ವಿಜ್ಞಾಪಿಸಿ ಇಧೆ. ಈ ಉತ್ಸವದಲ್ಲಿ ಶ್ರೀಗಳವರ ಚರಣಸಂದರ್ಶನವಾಗತಕ್ಕಬಗ್ಗೆ ಚಾತುರ್ಮಾಸ್ಯ ಸಂಕಲ್ಪದ ದಿವಸ ಅಭ್ಯಗ್ರವಾದ್ದರಿಂದ ಮುಂದೆ ಈ ಸಂವತ್ಸರದ ಆಶ್ವೀಜ ಕಾರ್ತೀಕಮಾಸದಲ್ಲಿ ಶ್ರೀಗಳವರ ಚರಣಸಂದರ್ಶನವಾಗಿ ಕೃತಾರ್ಥನಾದೇನೆಂದು ಇಚ್ಛೈಸುತ್ತೇನೆ, ಸ್ವಾಮಿ. ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತಬಿನ್ನಹ, ಸ್ವಾಮಿ.

Summary : A *binnavattaḷe,* dated, Monday, 13th day of the bright half of Jyēṣṭha, Siddhārthi *saṁ.*, from Krişṇarāja Oḍeyar to *Śrī* Narasimha Bhāratī *Swāmīji* of Śṛiṅgēri *Maṭha*. The king requested the *Guru* to visit Mysore and bless him on the 60th anniversary of his *siṁhāsanārōhaṇa*. Abhiṣēkōtsava was to take place in this connection. He expected the *Swāmīji* to offer *charaṇa sandarśana* either in Āśvīja or in Kārtīka of the current Siddhārthi *saṁvatsara*.

207

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣ ಪಾರಾವಾರಪಾರೀಣ, ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾ

Scanned by CamScanner

ಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮಸಾರಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ, ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವಸಚ್ಚಿದಾನಂದಭಾರತೀ ಸ್ವಾಮಿ ಗುರುಕರಕಮಲಸಂಜಾತ, ಶೃಂಗೇರಿ ಶ್ರೀನರಸಿಂಹಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ, ಕೃಷ್ಣರಾಜಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

ರೌದ್ರಿಸಂವತ್ಸರದ ಪುಷ್ಯ ಶು. ೧೫ ಸ್ಥಿರವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರೂಸಹ ನಾನು ಕ್ಷೇಮದಲ್ಲಿದ್ದೇನೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಆಶೀರ್ವಾದರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸಬೇಕು ; ಸಾಂಪ್ರತ. ಅರಮನೆಯ ಮುದ್ರಾಯಂತ್ರದಲ್ಲಿ ತಯಾರಾದ, ದೇವತಾನಾಮಕುಸುಮಮಂಜರಿ ಎಂಬ ಗ್ರಂಥದ ವಹಿಯೊಂದನ್ನು ಶ್ರೀಗಳವರ ಸನ್ನಿಧಾನಕ್ಕೆ ಒಪ್ಪಿಸುವಂತೆ ವೇ ॥ ಶ್ರೀಮಠದ ಶ್ರೀಧರ ಮಲ್ಲಿಕಾರ್ಜುನ ಶಾಸ್ತ್ರಿಗಳ ವಶಕ್ಕೆ ಅಪ್ಪಣೆಕೊಡಿಸಿ ಇದೆ. ಈ ವಹಿಯನ್ನು ಚರಣಸನ್ನಿಧಾನಕ್ಕೆ ತಲಪಿಸಿದ ಕೂಡ್ಲೆ, ಸನ್ನಿಧಾನವು ಇದರ ಪ್ರಮೇಯಗಳನ್ನೆಲ್ಲಾ ಪರಾಂಬರಿಸಿದಲ್ಲಿ ಇಲ್ಲಿ ಈ ವಿಷಯವಾಗಿ ಶ್ರಮಪಟ್ಟಿರುವದು ಸಾರ್ಥಕವಾಗಿ, ನಮ್ಮ ಮನಸ್ಸಿಗೆ ಸಂತೋಷವಾಗುತ್ತೆ. ಈ ಗ್ರಂಥವು ಶ್ರೀಗಳವರ ಅನುಗ್ರಹದಿಂದ ಶ್ಲಾಘ್ಯವಾಗುತ್ತೆ. ವಿಶೇಷ ವಿಜ್ಞಾಪನೆಮಾಡತಕ್ಕ ಶಕ್ತನಲ್ಲ. ಈ ವಿವರ ಚಿತ್ತಕ್ಕೆ ಶ್ರುತವಿರಬೇಕು.

ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತ ಬಿನ್ನಹ, ಸ್ವಾಮಿ.

Summary : A *binnavattaḷe,* dated, Saturday, 15th day of the bright half of Puṣya, Raudri *saṁvatsara*, (A.D. 1861), from Krisṇarāja Oḍeyar to *Śrī* Narasimha Bhāratī *Swāmīji* of Ṣṛiṅgēri. The king informed the *Guru* that he had asked Śrīdhar Mallikārjuna Śāstry of the *Śrīmaṭha*, to hand over the book, *Dēvatānāma-kusumamanjari* to the *Sannidhāna.* The king wished the *Guru* to review the said book printed in the palace printing press.

208

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣಪಾರಾವಾರಪಾರೀಣ, ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ

ಗುರುಪರಂಪರಾಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮಸಾರಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು, ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವಸಚ್ಚಿದಾನಂದಭಾರತೀ ಸ್ವಾಮಿ ಗುರುಕರಕಮಲಸಂಜಾತ, ಶೃಂಗೇರಿ ಶ್ರೀನೃಸಿಂಹ ಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ ಸೇವಕ ಕೃಷ್ಣರಾಜಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

ರೌದ್ರಿ ಸಂವತ್ಸರದ ಮಾಘ ಶು. ೧೩ ಸ್ಥಿರವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರೂಸಹ ನಾವು ಕ್ಷೇಮದಲ್ಲಿದ್ದೇವೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವ ಬಗ್ಗೆ ಆಗಾಗ್ಯೆ ಅನುಗ್ರಹರೂಪ ಶ್ರೀಮುಖವನ್ನು ಅಪ್ಪಣೆಕೊಡಿಸಿ ಕಳುಹಿಸುತ್ತಾ ಬರಬೇಕು ; ಸಾಂಪ್ರತ. ಶ್ರೀಗಳವರು ಚಿತ್ತದಲ್ಲಿ ಕೇವಲ ವೈರಾಗ್ಯವನ್ನು ವಹಿಸಿ ಮಠದಲ್ಲಿ ನಡೆಸತಕ್ಕ ಲೋಕಾನುಗ್ರಹರೂಪವಾದ ಧರ್ಮವನ್ನು ಶಿಷ್ಯನ ಮುಖದಿಂದ ನಡೆಸಬೇಕೆಂದು ಯೋಚಿಸಿ ಶಿಷ್ಯನಿಗೆ ಮಠದಲ್ಲಿ ಆಶ್ರಮವನ್ನು ಕೊಡುವುದಾಗಿ ನಿಶ್ಚಯಿಸಿ ಇರುವ ವರ್ತಮಾನವನ್ನು ವೇ ॥ ಶ್ರೀಧರ ಮಲ್ಲಿಕಾರ್ಜುನಶಾಸ್ತ್ರಿಗಳು ಬಂದು ಸನ್ನಿಧಾನದಲ್ಲಿ ಶ್ರುತಪಡಿಸುವದರಿಂದ ವೇದ್ಯವಾಗುತ್ತೆ. ವಿಶೇಷವಾಗಿ ವಿಜ್ಞಾಪನೆ ಮಾಡತಕ್ಕದ್ದೇನು ಇದೆ, ಸ್ವಾಮಿ ?

ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತ ಬಿನ್ನಹ, ಸ್ವಾಮಿ.

Summary : A *binnavattaḷe,* dated, Saturday, 13th day of the bright half of Māgha, Raudri *saṁ.*, (A.D. 1861) from Krisṇarāja Oḍeyar to *Śrī* Narasimha Bhāratī. The king informed the *Guru* that a disciple as a successor to the *Maṭha* be made, only after his visit to Ṣṛiṅgēri. The said message was conveyed to the king by Śrīdhar Mallikārjuna Śāstry. The king wished to have the *darśan* of *Śrī* Śāradā, *Śrī* Chandramauḷīśvara and the *Swāmīji*. However, ordaining *āśrama* to a disciple, was left finally to the *Swāmīji*.

209

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣಪಾರಾವಾರಪಾರೀಣ, ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ

Scanned by CamScanner

ಧಾರಣ ಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮಸಾರಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿ ಗುರುಕರಕಮಲ ಸಂಜಾತ, ಶೃಂಗೇರಿ ಶ್ರೀನೃಸಿಂಹ ಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

ದುರ್ಮತಿಸಂವತ್ಸರದ ಭಾದ್ರಪದ ಬ. ೫ ಸೋಮವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರೂಸಹ ನಾನು ಕ್ಷೇಮದಲ್ಲಿಧೇನೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಆಶೀರ್ವಾದರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸಬೇಕು ; ಸಾಂಪ್ರತ. ಅರಮನೆಯ ಮುದ್ರಾಯಂತ್ರದಲ್ಲಿ ನಿರ್ಮಿತವಾದ ದೇವತಾನಾಮಕುಸುಮಮಂಜರಿ ಎಂಬ ಗ್ರಂಥದ ವಹಿ ಕಳುಹಿಸಿದ್ದು ಶ್ರೀಧರ ಮಲ್ಲಿಕಾರ್ಜುನಶಾಸ್ತ್ರಿ ತಂದು ಒಪ್ಪಿಸಿದ್ದನ್ನು ಪರಾಂಬರಿಸಿದ್ದರಿಂದ ಚಿತ್ತದಲ್ಲಿ ಬಹಳ ಸಂತೋಷವಾಗಿರುವದಾಗಿಯೂ, ಆಷಾಢ ಶು. ೧೫ ದಿವಸ ಚಾತುರ್ಮಾಸ್ಯ ಸಂಕಲ್ಪಮಾಡಿ ವ್ಯಾಸಪೂಜಾ, ಸಂತರ್ಪಣೆ, ಮುಂತಾಗಿ ನಡೆಸಿ ಶ್ರೀವಿದ್ಯಾಶಂಕರ ಶಾರದಾ ಚಂದ್ರಮೌಳೀಶ್ವರ ಸ್ವಾಮಿಯವರ ಪ್ರಸಾದ ಮಂತ್ರಾಕ್ಷತೆಯನ್ನು ಶ್ರೀಧರ ಮಲ್ಲಿಕಾರ್ಜುನ ಶಾಸ್ತ್ರಿಗಳಕೈಲಿ ಅಪ್ಪಣೆಕೊಡಿಸಿದ ಶ್ರೀಮುಖ, ಪ್ರಸಾದ, ಮಂತ್ರಾಕ್ಷತೆ ಸಹ, ಬಂದುಮುಟ್ಟಿ ಶಿರಸಾವಹಿಸಿ ಕೃತಾರ್ಥನಾದೆನು. ದೇವತಾ ನಾಮಕುಸುಮಮಂಜರಿ ಎಂಬ ಗ್ರಂಥವನ್ನು ಪರಾಂಬರಿಸಿದ್ದರಿಂದ ಶ್ರೀಗಳವರಚಿತ್ತಕ್ಕೆ ಸಂತೋಷವಾದಕಾರಣ ಆ ಗ್ರಂಥವನ್ನು ನಿರ್ಮಿಸಿದಂಥಾದ್ದು ಸಾರ್ಥಕವಾಯಿತು. ಶ್ರೀಗಳವರ ಸನ್ನಿಧಾನಕ್ಕೆ ವಿಶೇಷ ವಿಜ್ಞಾಪನೆ ಮಾಡತಕ್ಕದ್ದೇನು ಇಧೆ ?

ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತ ಬಿನ್ನಹ, ಸ್ವಾಮಿ.

Summary : A *binnavattaḷe,* dated, Monday, 16th day of the dark half of Bhādrapada, Durmati *saṁvatsara*, from Krișṇarāja Oḍeyar to *Śrī* Narasimha Bhāratī *Swāmīji*. The king acknowledged the receipt of *śrīmukha*, *prasāda* and *mantrākṣate* of *Vyāsapūja* and *santarpaṇe* at the shrines of *Śrī* Vidyāśaṅkar, *Śrī* Śāradā and *Śrī* Chandramauḷīśvara. The king felt happy, for the *Guru* who examined the treatise, *Dēvatānāmakusumamanjari*, was very much satisfied.

210

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣ ಪಾರಾವಾರಪಾರೀಣ, ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮಸಾರಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿ ಗುರುಕರಕಮಲಸಂಜಾತ, ಶೃಂಗೇರಿ ಶ್ರೀನೃಸಿಂಹ ಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

ದುರ್ಮತಿಸಂವತ್ಸರದ ಭಾದ್ರಪದ ಬ. ೫ ಸೋಮವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರುಸಹ ನಾನು ಕ್ಷೇಮದಲ್ಲಿಧೇನೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಆಶೀರ್ವಾದರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸಬೇಕು ; ಸಾಂಪ್ರತ. ನಾವು ಶೃಂಗೇರಿಗೆ ಬಂದು ಶ್ರೀ ಶಾರದಾ ಚಂದ್ರಮೌಳೀಶ್ವರ ಸ್ವಾಮಿಯವರ ದರ್ಶನವನ್ನೂ, ಶ್ರೀಗಳವರ ಚರಣ ದರ್ಶನವನ್ನೂ, ಮಾಡತಕ್ಕ ವಿಚಾರವಾಗಿ ಬಿನ್ನಹಪತ್ರಿಕೆ ಬಂದದ್ದುನೋಡಿ ಬಹಳ ಸಂತೋಷವಾಗಿಧೆ. ಮುಖತಃ ಕೆಲವು ಮಾತುಗಳನ್ನು ಅಪ್ಪಣೆಕೊಡಿಸಬೇಕೆಂಬ ಇಚ್ಛೆ ಇರುವದು ಎಂಬದಾಗಿ ಈ ಸಂವತ್ಸರದ ಶ್ರಾವಣ ಶು. ೧೦ಲ್ಲು ಅನುಗ್ರಹಿಸಿ ಕಳುಹಿಸಿದ ಶ್ರೀಮುಖ ವೇ ॥ ಶ್ರೀಧರ ಮಲ್ಲಿಕಾರ್ಜುನಶಾಸ್ತ್ರಿಗಳ ಮುಖಾಂತರ ಬಂದದ್ದನ್ನು ಶಿರಸಾವಹಿಸಿ ನೋಡಿಕೊಂಡು ಕೃತಾರ್ಥನಾದೆನು. ಈ ಸಂವತ್ಸರ ಮಕರಸಂಕ್ರಾಂತಿ ಹಬ್ಬವಾದ ಮೇಲೆ ಶೃಂಗೇರಿಗೆಬಂದು ಶ್ರೀಶಾರದಾ ಚಂದ್ರಮೌಳೀಶ್ವರ ಸ್ವಾಮಿಯವರ ದರ್ಶನವನ್ನೂ, ಶ್ರೀಗಳವರ ಚರಣದರ್ಶನವನ್ನೂ ಮಾಡಿ, ಸನ್ನಿಧಾನದಲ್ಲಿ ಕೆಲವು ಮಾತುಗಳನ್ನು ವಿಜ್ಞಾಪನೆ ಮಾಡಬೇಕೆಂಬ ಇಚ್ಛೆ ನಮಗೆ ಬಹಳವಾಗಿ ಇಧೆ. ಒಂದುವೇಳೆ ಶೃಂಗೇರಿಗೆ ಬರುವದಕ್ಕೆ ಸಂದರ್ಭವಿಲ್ಲದಿದ್ದರೆ ಆ ವಿವರ ಶ್ರೀಗಳವರ ಸನ್ನಿಧಾನಕ್ಕೆ ವಿಜ್ಞಾಪನೆಮಾಡುತ್ತೆ. ಶ್ರೀಗಳವರು ಮೈಸೂರಿಗೆ ದಯಮಾಡಿ ಚರಣಸಂದರ್ಶನವನ್ನು ಕೊಟ್ಟು ನಮ್ಮನ್ನು ಕೃತಾರ್ಥರನ್ನು ಮಾಡಬೇಕು. ಅಲ್ಲಿ ಶ್ರೀಗಳವರು ಮಠದ ವಿಷಯದಲ್ಲಿ ಅನ್ಯತ್ರ ಅನುಗ್ರಹಮಾಡಬೇಕೆಂಬ ಇಚ್ಛಾವಿಶಿಷ್ಟರಾಗಿಧಾರೆಂದು ಶ್ರುತವಾಗುತ್ತೆ. ಒಂದಾವರ್ತಿ ಚರಣದರ್ಶನವನ್ನು ಕೊಟ್ಟು ಕೆಲವು ವಿಜ್ಞಾಪನೆಗಳನ್ನು ಶ್ರುತಪಡಿಸಿದಮೇಲೆ ಚಿತ್ತದಲ್ಲಿ ಇದ್ದಂತೆ ಅನುಗ್ರಹಮಾಡಬಹುದು. ಅದುವರಿಗೆ ಆ ವಿಷಯವನ್ನು ಮಾನಸಿಕವನ್ನಾಗಿಯೇ ಇಟ್ಟಿರುವಂತೆ ಅನುಗ್ರಹಿಸಬೇಕು, ಇದೇ ಅರ್ಥವನ್ನು ವೇ ॥ ಶ್ರೀಧರ ಮಲ್ಲಿಕಾರ್ಜುನಶಾಸ್ತ್ರಿ, ಸುಬ್ಬಾಶಾಸ್ತ್ರಿಗಳುಸಹ, ಸನ್ನಿಧಾನಕ್ಕೆ ಬಂದು ಶ್ರುತಪಡಿಸುತ್ತಾರೆ.

Scanned by CamScanner

ಈ ವಿವರ ಚಿತ್ತಕ್ಕೆ ವೇದ್ಯವಿರಬೇಕೆಂದು ವಿಜ್ಞಾಪನೆಮಾಡಿ ಇಧೆ. ಈ ವಿಷಯದಲ್ಲಿ ವಿಶೇಷ ವಿಜ್ಞಾಪನೆ ಮಾಡತಕ್ಕದ್ದೇನು ಇಧೆ ?

ಖಾಸ್‌ಷರ. ದರ್ಶನಾಪೇಕ್ಷೆ ಬಹುತರವಿರುವದರಿಂದ ದರ್ಶನ ಕೊಟ್ಟು ಆಬಳಿಕ ಚಿತ್ತವಿದ್ದಂತೆ ನಡೆಯತಕ್ಕದ್ದು. ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತ ಬಿನ್ನಹ, ಸ್ವಾಮಿ.

Summary : A *binnavattaḷe,* dated, Monday, 5th day of the dark half of Bhādrapada, Durmati *saṁ.*, from Krisṇarāja Oḍeyar to *Śrī* Narasimha Bhāratī *Swāmīji* of Śṛiṅgēri. The king expressed his desire to visit Śṛiṅgēri after Makarasaṅkrānti, and convey some of his ideas directly to the *Swāmīji*. He requested the *Guru* to visit Mysore and offer *charaṇa-darśana*. Śrīdhar Mallikārjuna Śāstry and Subbā Śāstry were to convey the message to His Holiness.

211

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣಪಾರಾವಾರಪಾರೀಣ, ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮಸಾರಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿ ಗುರುಕರಕಮಲಸಂಜಾತ, ಶೃಂಗೇರಿ ಶ್ರೀನರಸಿಂಹ ಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :-

ದುಂದುಭಿನಾಮ ಸಂವತ್ಸರದ ಮಾಘ ಬ. ೩ ಶುಕ್ರವಾರದವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸಪರಿವಾರನಾಗಿ ಕ್ಷೇಮದಲ್ಲಿಧೇನೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಆಶೀರ್ವಾದರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸಬೇಕು ; ಸಾಂಪ್ರತ. ಈ ಸಂವತ್ಸರ ಭಾದ್ರಪದ ಮಾಸದಲ್ಲೂ, ಕಾರ್ತೀಕ ಮಾಸದಲ್ಲೂ ಸಹ, ಅನುಗ್ರಹಿಸಿ ಕಳುಹಿದ ಶ್ರೀಮುಖ ಬಂದುಮುಟ್ಟಿ ಶಿರಸಾವಹಿಸಿ ನೋಡಿಕೊಂಡು ಕೃತಾರ್ಥನಾದೆನು. ಶ್ರೀಗಳವರು ನಂಜನಗೂಡು ಪ್ರಾಂತಕ್ಕೆ ದಯಮಾಡಿ, ಶ್ರೀಕಂಠೇಶ್ವರನ ದರ್ಶನಮಾಡಬೇಕೆಂಬ ಇಚ್ಛೆ

ಇರುವದಾಗಿ ಶ್ರೀಮುಖದಲ್ಲಿ ಅಪ್ಪಣೆಕೊಡಿಸಿರುವಬಗ್ಗೆ, ಶ್ರೀಗಳವರ ಸನ್ನಿಧಿಗೆ ಬಂದು ಅಲ್ಲಿ ಶ್ರೀ ಶಾರದಾ ಅಮ್ಮನವರ ದರ್ಶನವನ್ನೂ, ಶ್ರೀಗಳವರ ಚರಣ ದರ್ಶನವನ್ನೂ ಅಗತ್ಯವಾಗಿ ಮಾಡಬೇಕೆಂದು ನಿಶ್ಚಯಿಸಿ ಶೃಂಗೇರಿಗೆ ಬರುತ್ತೇನೆಂದು ಪೂರ್ವದಲ್ಲಿ ಎರಡಾವೃತ್ತಿ ವಿಜ್ಞಾಪನ ಪತ್ರಿಕೆ ಬರೆಸಿ ಸನ್ನಿಧಾನಕ್ಕೆ ಕಳುಹಿಸಿದ್ದೆನು. ಒಂದಕ್ಕೊಂದು ತೊಂದರೆಗಳಿಂದ ಬರುವದಕ್ಕೆ ಸಾವಕಾಶವಾಯಿತು. ಈ ಬಾರಿ ಖಂಡಿತವಾಗಿ ಶೃಂಗೇರಿಗೆ ಬಂದು ಶ್ರೀ ಶಾರದಾ ಅಮ್ಮನವರ ದರ್ಶನವನ್ನೂ, ಶ್ರೀಗಳವರ ಚರಣ ದರ್ಶನವನ್ನೂ ಮಾಡಬೇಕೆಂಬ ಅಪೇಕ್ಷೆ ಬಹಳ ಇಧೆ. ಇಲ್ಲಿಂದ ಹೊರಡುವದಕ್ಕೆ ಹದಿನೈದು ದಿವಸ ಮುಂಚಿತವಾಗಿಯೇ ಸನ್ನಿಧಾನಕ್ಕೆ ಬಿನ್ನಹ ಪತ್ರಿಕೆಯನ್ನು ಬರೆಸಿ ಕಳುಹಿಸುತ್ತಾ ಇಧೆ. ಕಡಮೆ ವಿವರಗಳೆಲ್ಲಾ ವೇ ॥ ಕಳಲೆ ಶಾಮಭಟ್ಟರು, ಶ್ರೀಧರ ಮಲ್ಲಿಕಾರ್ಜುನಶಾಸ್ತ್ರಿಗಳೂ ಸಹ, ಶ್ರೀಗಳವರ ಸನ್ನಿಧಾನಕ್ಕೆ ಬಂದು ವಿಜ್ಞಾಪನೆ ಮಾಡುವಲ್ಲಿ ಚಿತ್ತಕ್ಕೆ ವೇದ್ಯವಾಗುತ್ತಾ ಇಧೆ. ಈ ವಿವರ ಚಿತ್ತಕ್ಕೆ ವೇದ್ಯವಿರಬೇಕೆಂದು ವಿಜ್ಞಾಪನೆ ಮಾಡಿಧೆ, ಸ್ವಾಮಿ.

ಇಂತಿ ತ್ರಿಕಾಲದಲ್ಲೂ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ಮಾಡುವ ಅನಂತಾನಂತ ಬಿನ್ನಹ, ಸ್ವಾಮಿ.

Summary : A *binnavattaḷe,* dated, Friday, 3rd day of the dark half of Māgha, Dundubhi *saṁ.* (A.D. 1863), from Krisṇarāja Oḍeyar to *Śrī* Narasimha Bhāratī *Swāmīji*. The king acknowledged the receipt of the *śrīmukha*. The king expressed his desire to visit Śṛiṅgēri and obtain *darśana* of *Śrī* Śāradāmbā and the *Guru*. He informed the *Guru* that he would communicate his tour programme, 15 days in advance.

212

No. 221

PALACE, MYSORE,
31st December 1863.

To

CAPTAIN PEARSE,
IN CHARGE OF THE PALACE DUTIES.

Sir,

I have the pleasure to enclose for your information an original Urzee addressed to me by Mullicarjoon Shastry, Manager of the Sringeri Mutt and to state that Ballahully Swamy alluded to has not been allowed insignias, of respect noted in the margin, either by *myself or another authority*, nor has he made use of them when he was sent for by me to Mysore some years ago. I

Scanned by CamScanner

am therefore of opinion that it is highly improper that he should wander about with unusual insignias to which he is not entitled in disrespect to the Sringeri Mutt, which is of great antiquity and reputation and the only one that possesses the right and title of using such special insignias.

If the Commissioner had been aware of the circumstance of his having used these unauthorised insignias and that he was supported in it by the Local authorities I feel assured that he never would have countenanced it. For my part had this Swamy visited Mysore formerly I would not have received him nor will I do so in future.

I therefore request that you will be so good as to bring this circumstance to the notice of the Commissioner in order that he may take the necessary steps to prevent the Swamy's usurping the respect and insignias to which he is not entitled.

I am &c.
(Signed) SREE
KRISTNA,
in Canarese.

213

ಶ್ರೀಗಳವರ ಚರಣಸನ್ನಿಧಾನದಲ್ಲಿ ಪರಾಂಬರಿಸತಕ್ಕಬಗ್ಗೆ ಸೇವಕನ ವಿಜ್ಞಾಪನೆ :–

ಮೈಸೂರಲ್ಲಿ ದೇವರಭಟ್ಟನೆಂಬ ಬ್ರಾಹ್ಮಣ ಸ್ವಲ್ಪ ವಿಷಯವಾದ ಅಪರಾಧಕ್ಕೆ ಯೋಗ್ಯವಾದ ಕೆಲಸವನ್ನು ಮಾಡಿದ್ದಾನೆಂದು ಅವನ ವಿರೋಧಿಜನಗಳು ಹೇಳಿದ ಮಾತುಗಳ ಕೇಳಿ ದೇವರಭಟ್ಟನೆಂಬವಗೆ ಬಹಿಷ್ಕಾರವೆಂದು ಶ್ರೀಮಠದವರು ಹೇಳಿಧಾರಂತೆ. ಇದನ್ನು ತಿಳಿದು ಇದು ಸ್ವಲ್ಪವಿಷಯ, ತಕ್ಕ ಅಪರಾಧವನ್ನು ತೆಗೆದುಕೊಂಡು ಸವ್ಯವಹಾರಕ್ಕೆ ಹೇಳಬಹುದೆಂದು ಖಜಾನೆ ದುಯಂಭಕ್ಷಿ ನರಸಪ್ಪನು ಶ್ರೀಮಠದ ಕೆಲಸನೋಡುವ ಶೇಷಭಟ್ಟರಿಗೆ ಹೇಳಿಕಳುಹಿಸಿದಾಗ್ಯೂ, ನಾಳೆ ಆಗಲಿ, ನಾಡಿದ್ದು ಆಗಲಿ, ಎಂದು ತಾತ್ಸಾರೋಕ್ತಿಗಳನ್ನು ಹೇಳಿದ್ದಾಗಿ ಶ್ರುತವಾಗಿ ಇಧೆ. ಶ್ರೀಗಳವರು ಶ್ರೀಮಠದವರಿಗೆ ಅರಮನೆ ಇಲಾಖೆಯವರು ಮುಂತಾಗಿ ಯೇನು ಕೆಲಸವಿದ್ದರೂ ವಿಹಿತವಿದ್ದಂತೆ ನಡೆಸತಕ್ಕದ್ದು. ನಮ್ಮಿಂದ ಸೂಚಿತವಾಗುವ ವಿಷಯಗಳಲ್ಲೂ ವಿಹಿತವಿದ್ದಂತೆ ನಡೆಸತಕ್ಕದ್ದೆಂದು ಪದೇಪದೇ ಅಪ್ಪಣೆ ಆಗುತ್ತಾ ಇಧೆ. ಹೀಗೆ ಇರುವಲ್ಲಿ ಇಂಥಾ ಸ್ವಲ್ಪವಾದ ಕಾರ್ಯಕ್ಕೆ ಹೇಳಿ ಕಳುಹಿಸಿದಾಗ್ಯೂ ತಾತ್ಸಾರದ ಮಾತುಗಳನ್ನು ಆಡಿದ್ದು ಸರಿಯಲ್ಲವೆಂದು ತೋರುತ್ತೆ. ಈಗಿನ ಕಾಲ ಯಥೋಚಿತವಾಗಿ, ಉಪಾಯವಾಗಿ ಹೋಗತಕ್ಕ ಕಾಲ; ಈ

ವಿಷಯವೂ, ಕಾಲಧರ್ಮವೂ, ಶ್ರೀಗಳವರ ಸನ್ನಿಧಿಗೆ ವೇದ್ಯವೇ ಇಧೆ. ಈ ಬಗ್ಗೆ ಇಲ್ಲಿ ಶ್ರೀಮಠದ ಕೆಲಸನೋಡುವ ಶೇಷಭಟ್ಟರಿಗೆ ಯಾವರೀತಿ ಅಪ್ಪಣೆ ಆಗಬೇಕೋ ಅಪ್ಪಣೆ ಕೊಡಿಸಿ ಆ ವಿವರಕ್ಕೆ ಆಶೀರ್ವಾದ ಪತ್ರಿಕೆ ಅಪ್ಪಣೆಕೊಡಿಸಬೇಕು. ಶ್ರೀಮಠದ ಆಚಾರವಿಚಾರದ ಕೆಲಸನೋಡುವ ಗಂಗಾಧರಶಾಸ್ತ್ರಿಗಳೂ ಊರಲ್ಲಿ ಇಲ್ಲವಂತೆ. ಕ್ಷಿಪ್ರದಲ್ಲಿ ದೇವರಭಟ್ಟನೆಂಬ ಬ್ರಾಹ್ಮಣಗೆ ಯಥೋಚಿತ ಅಪರಾಧವಿದ್ದಲ್ಲಿ ತಕ್ಕ ಗುನ್ಹೇಗಾರಿಯಿಂದ ಶುದ್ಧನೆಂದು ಹೇಳಿಸಿ ಸವ್ಯವಹಾರದಲ್ಲಿರುವಂತೆ ಹೇಳಿಸತಕ್ಕಬಗ್ಗೆ ಅಪ್ಪಣೆಕೊಡಿಸಬೇಕು ಇಂಥಾ ಸ್ವಲ್ಪವಿಷಯಗಳನ್ನೆಲ್ಲಾ ಹೀಗೆ ಬೆಳೆಸಿ ಎದುರುಹಾಕಿಕೊಳ್ಳತಕ್ಕದ್ದು ಯುಕ್ತವಲ್ಲವೆಂದು ಶ್ರೀಮಠದವರಿಗೂ ಅಪ್ಪಣೆಕೊಡಿಸಬೇಕು.

ರಕ್ತಾಕ್ಷಿಸಂವತ್ಸರದ ವೈಶಾಖ ಬ. ೬ ಶುಕ್ರವಾರದಲ್ಲು.

ಇಂತಿ ಅನೇಕ ವಿಜ್ಞಾಪನಾ, ಸ್ವಾಮಿ.

Summary : A letter, dated, Friday, 6th day of the dark half of Vaiśākha, Raktākṣi *saṁ.*, from Krisṇarāja Oḍeyar to the Śṛiṅgēri *Swāmīji*. The king requested the *Guru* to examine the case of Dēvara Bhaṭṭa of Mysore, who was excommunicated. The king further requested the *Guru* to perform some *prāyaschitta* and then permit Dēvara Bhaṭṭa to conduct the usual transactions.

214

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯ ಪ್ರಮಾಣ ಪಾರಾವಾರಪಾರೀಣ, ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೊಗಾನುಷ್ಠಾನನಿಷ್ಠ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾ ಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ, ವ್ಯಾಖ್ಯಾನಸಿಂಹಾಸನಾಧೀಶ್ವರ, ಸಕಲನಿಗಮಾಗಮ ಸಾರಹೃದಯ, ಸಾಂಖ್ಯತ್ರಯಪ್ರತಿಪಾದಕ, ವೈದಿಕಮಾರ್ಗಪ್ರವರ್ತಕ, ಸರ್ವತಂತ್ರ ಸ್ವತಂತ್ರಾದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ, ತುಂಗಭದ್ರಾತೀರವಾಸಿ, ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ, ಶ್ರೀಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿ ಗುರುಕರಕಮಲಸಂಜಾತ, ಶೃಂಗೇರಿ ಶ್ರೀನೃಸಿಂಹ ಭಾರತೀ ಸ್ವಾಮಿನಾಂ ಚರಣಸನ್ನಿಧಿಂಪ್ರತಿ ; ಶ್ರೀಮತ್ಪ್ರಿಯಶಿಷ್ಯ ಕೃಷ್ಣರಾಜ ಮಹೀಪತಿ ಕೃತ ಪ್ರಣತಿಪರಂಪರಾಪೂರ್ವಕ ವಿಜ್ಞಾಪನಾ :–

ಕ್ರೋಧನಸಂವತ್ಸರದ ವೈಶಾಖ ಶು. ೧೫ರ ವರಿಗೆ ಶ್ರೀಗಳವರ ಚರಣಾನುಗ್ರಹದಿಂದ ಸರ್ವರೂಸಹ ನಾವು ಕ್ಷೇಮದಲ್ಲಿಧೇವೆ. ಶ್ರೀಗಳವರು ನಿರಂತರ ನಿರಂತರಾಯವಾಗಿ ತಪಸ್ಸಾಮ್ರಾಜ್ಯವನ್ನನುಭವಿಸುವಬಗ್ಗೆ ಆಗಾಗ್ಯೆ ಆಶೀರ್ವಾದರೂಪ ಶ್ರೀಮುಖವನ್ನನುಗ್ರಹಿಸುವಂತೆ ಮಾಡಿಸಬೇಕು : ಸಾಂಪ್ರತ. ಶ್ರೀಗಳವರ

Scanned by CamScanner

